ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Friday, the 25th May, 1979 Jyieshta. 4 1901 S.E.

The House met in the Assembly Chamber, Vidhana Soudha, at Five Minutes past Twelve of the Clock.

[MR. SPEAKER (SRI P. VENKATARAMANA) in the Chair.]

BUDGET ESTIMATES FOR 1979-80

Demands for Grants

Demand No. 4, 6, 23, 24, 31, 32, 35, to 41, 46, 47 and 62

†SRI S. R. BOMMAI (Hubli).—Sir, I am extremely sorry I could not be present in the House when the discussion took place on the major demands, which constitute a mini-budget itself, because of reasons beyond my control, I was compelled to go to Delhi. Instead of making a speech, I have got certain points for clarification from the Chief Minister. I will give a copy of it.

One more point regarding minor irrigation is this. De-silting was given up because it is uneconomical ; for a number of years, the engineers expressed the opinion that de-silting is not profitable but it has been introduced recently. This would involve huge expenditure and therefore, I would like to know the expenditure actually incurred. I would like to know why this is taken up when it is uneconomical-whether technical advice has been taken. There was a system where the beneficiaries used to take away the silt and use it to enrich their land. I want to know why this system should not be encouraged if necessary, by an executive order or by law, compelling them to remove the silt. I will give a copy of my suggestions

†ಶ್ರೀ ಡಿ.ಬಿ. ಚಂದ್ರೇಗೌಡ (ಸಣ್ಣ ನೀರಾವರಿ ಶಾಖೆಯ ಮಂತ್ರಿಗಳು) :—ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಸುಮಾರು ೨೦ ಕೋಟಿ ೫೫ ಸಾವಿರ ರೂಪಾಯಿನ ಬೇಡಿಕೆಗೆ ಕಳೆದ ಮೂರು ದಿವಸದಿಂದ ಈ ಸದನದಲ್ಲಿ ಈ ಸಣ್ಣ ನೀರಾವರಿ, ಭಾರಿ ನೀರಾವರಿ ಮತ್ತು ದೊಡ್ಡ ದೊಡ್ಡ ಖಾತೆಗಳ ಮಧ್ಯೆ ಸಿಕ್ಕಿ ತೊಳಲಾಡಿದ್ದರೂ ತನ್ನ ಪ್ರಾಶಸ್ತ್ಯವನ್ನು ಕಳೆದುಕೊಳ್ಳದೆ ಸಾಕಷ್ಟು ಮಟ್ಟಿಗೆ ಪ್ರಕಾಶವನ್ನು ಈ ಸದನದಲ್ಲಿ ಬೀರಿದೆ ಎಂದು ಹೇಳಬಯಸುತ್ತೇನೆ. ಜೊತೆಗೆ ಅನೇಕ ಜನ ಸದಸ್ಯರು

---

indicates that remarks or speeches have not been revised by the member concerned.

ತಮ್ಮ ಅನುಭವವನ್ನು, ಸೂಕ್ತ ಸಲಹೆ ಮಾರ್ಗದರ್ಶನಗಳನ್ನು ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಇದಕ್ಕಾಗಿ ಅವರೆಲ್ಲರಿಗೂ ನಾನು ಪ್ರಾರಂಭಕ್ಕೆ ನನ್ನ ಕೃತಜ್ಞತೆಗಳನ್ನು ಸಮರ್ಪಣೆ ಮಾಡುತ್ತಾ ಈ ಸಣ್ಣ ನೀರಾವರಿ ಯೋಜನೆಗಳಷ್ಟಕ್ಕೆ ಸೀಮಿತವಾದ ವಿಶ್ಲೇಷಣೆ ಮಾಡದೇ ರಾಜ್ಯದಲ್ಲಿ ಇರಬಹುದಾದಂತಹ ಒಟ್ಟು ಭೂ ಪ್ರದೇಶ ಮತ್ತು ಅದರಲ್ಲಿ ವ್ಯವಸಾಯಕ್ಕೆ ಅಳವಡಿಸಿರತಕ್ಕ ಪ್ರದೇಶ, ಅದರಲ್ಲಿ ನೀರಾವರಿಗೆ ಬಳಸಿರತಕ್ಕ ಪ್ರದೇಶ ಹಾಗೂ ವಿಶೇಷವಾಗಿ ಸಣ್ಣ ನೀರಾವರಿ ಕಾಮಗಾರಿಗಳಿಗೆ ಇರಬಹುದಾದಂತಹ ವ್ಯಾಪ್ತಿಗಳ ವಿಶ್ಲೇಷಣೆ ಮಾಡಬೇಕೆಂದು ಯೋಚನೆ ಮಾಡಿದ್ದೇನೆ. ನಮ್ಮ ರಾಜ್ಯದಲ್ಲಿ ಸುಮಾರು ೪ ಕೋಟಿ ೭೬ ಲಕ್ಷದ ೨೫ ಸಾವಿರ ಎಕರೆ ಭೂಮಿ ಇದೆ ಎನ್ನುವುದನ್ನು ಗುರುತಿಸಿದ್ದಾರೆ. ಈ ವಿಸ್ತರಣೆಯಲ್ಲಿ ಸುಮಾರು ೩ ಕೋಟಿ ೧೯ ಲಕ್ಷದ ೨೫ ಸಾವಿರ ಎಕರೆ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿದೆಯೆಂದು ತಜ್ಞರು ಹೇಳಿದ್ದಾರೆ. ಆ ಹೇಳಿಕೆಯನ್ನು ಅನುಸರಿಸಿ ಈಗ ಕರ್ನಾಟಕ ರಾಜ್ಯದಲ್ಲಿ ಸುಮಾರು ೨ ಕೋಟಿ ೫೭ ಲಕ್ಷ ೫೦ ಸಾವಿರ ಎಕರೆ ಭೂಮಿ ಉಳುಮೆಗೆ ಒಳಪಟ್ಟಿದೆ. ಬಿತ್ತನೆ ಮಾಡಿದ್ದಾರೆ. ಕೃಷಿ ಅಥವಾ ವ್ಯವಸಾಯಕ್ಕೆ ಅಳವಡಿಸಿಕೊಂಡಿದ್ದೇವೆ. ಹೀಗೆ ಅಳವಡಿಸಿಕೊಂಡಿರತಕ್ಕ ಭೂಮಿಯಲ್ಲಿ ಸುಮಾರು ಶೇಕಡ ೭೫ ಭಾಗದಷ್ಟು ಭೂಮಿ ಒಂದಲ್ಲೊಂದು ರೀತಿಯಲ್ಲಿ ಪೂರ್ಣ ಅಥವಾ ಅರ್ಧ ಇಲ್ಲವೇ ೫ ಅಥವಾ ೧೦ ಭಾಗ ಪ್ರದೇಶ ಬರಗಾಲಕ್ಕೆ ತುತ್ತಾಗತಕ್ಕ ಪರಿಸ್ಥಿತಿಯಲ್ಲಿರತಕ್ಕದ್ದು ಗಮನಾರ್ಹ ವಿಚಾರ ಈ ಒಂದು ದೊಡ್ಡ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇರತಕ್ಕ ಒಂದೇ ಒಂದು ಉತ್ತಮ ಸಾಧನ ಎಂದರೆ ನೀರಾವರಿ ಕಾಮಗಾರಿಗಳು. ಈ ನೀರಾವರಿ ಕಾಮಗಾರಿಯನ್ನು ಭಾರಿ ನೀರಾವರಿ ಕಾಮಗಾರಿ, ಮಧ್ಯಮ ಪ್ರಮಾಣದ ನೀರಾವರಿ ಕಾಮಗಾರಿ ಹಾಗೂ ಸಣ್ಣ ನೀರಾವರಿ ಕಾಮಗಾರಿ ಎಂದು ೩ ಭಾಗವಾಗಿ ವಿಂಗಡಿಸಿಕೊಂಡಿದ್ದೇವೆ. ಇದರಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಭೌಗೋಳಿಕ ಪ್ರದೇಶದಲ್ಲಿ ಕೇವಲ ಕೆಲವೇ ಭಾಗದಲ್ಲಿ ಕೇಂದ್ರೀಕೃತವಾಗಿ ಸೌಕರ್ಯಗಳನ್ನು ಕೆಲವು ಭಾಗಗಳಿಗೆ ಮಾತ್ರ ಒದಗಿಸಿಕೊಡುತ್ತವೆ ಆದರೆ ಸಣ್ಣ ನೀರಾವರಿ ಯೋಜನೆಗಳು ಗ್ರಾಮಗಳ ಆರ್ಥಿಕತೆಯ ಮೇಲೆ ಅಪಾರವಾದ ಪರಿಣಾಮವನ್ನು ಬೀರುತ್ತವೆ. ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದಾದರೆ ಈ ಸೌಲಭ್ಯವನ್ನು ಪ್ರತಿಯೊಂದು ಗ್ರಾಮಕ್ಕೂ ಮುಟ್ಟಿಸಬಹುದಾಗಿದೆ ಇದು ಗ್ರಾಮದ ಬಡತನ ಹಾಗೂ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವ ದಿಸೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಭಾರೀ ನೀರಾವರಿ ಯೋಜನೆಗಳನ್ನು ಕಾರ್ಯಗತಮಾಡಬೇಕಾದರೆ ಕನಿಷ್ಟ ೧೦-೨೦ ವರ್ಷಗಳು ಬೇಕಾಗುತ್ತದೆ. ಆದರೆ ಸಣ್ಣ ನೀರಾವರಿ ಯೋಜನೆಗಳನ್ನು ಸುಮಾರು ೩ ವರ್ಷಗಳಲ್ಲಿ ಮುಗಿಸಬಹುದೆಂಬ ನಿರ್ಧಿಷ್ಟ ಕಾಲಮಿತಿ ಇದೆ. ಈ ಸಣ್ಣ ನೀರಾವರಿ ಯೋಜನೆಗಳನ್ನು ಬಹಳ ಬೇಗ ಮುಗಿಸುವುದರಿಂದ ಅಷ್ಟೇ ಬೇಗ ಜನಗಳಿಗೆ ಇದರ ಪ್ರಯೋಜನ ಲಭ್ಯವಾಗುವಂತೆ ಮಾಡಬಹುದಾಗಿದೆ. ಈ ಸಣ್ಣ ನೀರಾವರಿ ಕಾಮಗಾರಿಯಲ್ಲಿ ಹಳ್ಳಿಗಳಿಗೆ ಪಿಕಪ್ ಅಥವಾ ಭಾಂಡಾರಗಳನ್ನು ನಿರ್ಮಿಸುವುದು, ಕೆರೆಗಳ ನಿರ್ಮಾಣ ಮತ್ತು ಸಂಧಾರಣೆ, ಕೆರೆಗಳಿಗೆ ನೀರನ್ನು ಕೊಂಡೊಯ್ಯುವ ನಾಲೆಗಳನ್ನು ರಿಪೇರಿ ಮಾಡುವುದು, ಹೂಳು ಎತ್ತುವುದು, ಕೆರೆಯ ಆಧುನೀಕರಣ, ಏತ ನೀರಾವರಿ ಇತ್ಯಾದಿ ಕೆಲಸಗಳು ಬರುತ್ತವೆ. ಅನಾದಿ ಕಾಲದಿಂದಲೂ ನಮ್ಮ ಭರತ ಖಂಡದಲ್ಲಿ ಈ ಸಣ್ಣ ನೀರಾವರಿ ಯೋಜನೆ ಪ್ರಧಾನ ಪಾತ್ರವನ್ನೇ ವಹಿಸುತ್ತಾ ಬರುತ್ತಿದೆ. ನೀರಾವರಿ ಕಾರ್ಯ ನಮ್ಮ ಕರ್ನಾಟಕದಲ್ಲಿ ಶೇಕಡ ೨೧ ಭಾಗ ಇದ್ದರೆ ಇದರಲ್ಲಿ ೩/೧ ಭಾಗಕ್ಕಿಂತಲೂ ಮಿಕ್ಕಿ ಸಣ್ಣ ನೀರಾವರಿ ಕಾಮಗಾರಿ ಇದೆ. ಸ್ವಾತಂತ್ರ್ಯ ನಂತರ ಅಂದರೆ ೧೯೫೧-೫೬ ರಿಂದ ೧೯೭೮-೭೯ ರವರೆಗೆ ಈ ಸಣ್ಣ ನೀರಾವರಿ ಯೋಜನೆಗಳಿಗಾಗಿ ಸುಮಾರು ೧೧೨ ಕೋಟಿ ೭೩ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇದರ ಫಲವಾಗಿ ಈಗ ೨೫,೬೫೧ ಕೆರೆಗಳ ಸುಮಾರು ೧೯ ಲಕ್ಷ ೪೪ ಸಾವಿರ ಎಕರೆ ಭೂಪ್ರದೇಶಕ್ಕೆ ನೀರನ್ನೊದಗಿಸುತ್ತಿವೆ ಇದರಲ್ಲಿ ಸುಮಾರು ೧೫,೭೧೩ ಕೆರೆಗಳು ೧೦ ಎಕರೆಗೂ ಕಡಿಮೆ ಇರತಕ್ಕ ಭೂ ಪ್ರದೇಶಕ್ಕೆ ತಾಲ್ಲೂಕು ಬೋರ್ಡ್‌ನವರು ರಕ್ಷಣೆ ಮಾಡುತ್ತಿರುವುದನ್ನು ಬಿಟ್ಟು ನಾನು ಹೇಳುತ್ತಿದ್ದೇನೆ. ಒಟ್ಟು ನೀರಾವರಿಯಾದ ಭೂಮಿಯಲ್ಲಿ ಶೇಕಡವಾರು ದೃಷ್ಟಿಯಿಂದ ನೋಡಿದರೆ ೩/೧ ಭಾಗಕ್ಕಿಂತಲೂ ಮಿಕ್ಕಿ ಈ ಸಣ್ಣ ನೀರಾವರಿ ಕಾಮಗಾರಿ ಆವರಿಸಿಕೊಂಡಿದೆ. ೧೯೭೮-೭೯ರ ಸಾಲಿನ ನಮ್ಮ ಸಾಧನೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದರೆ ಪ್ರತಿವರ್ಷವೂ ಕೇವಲ ಸಾಧನೆಗಳ ದೃಷ್ಟಿಯಿಂದ ಮಾತ್ರವಲ್ಲ ಆರ್ಥಿಕ ವ್ಯವಸ್ಥೆ ದೃಷ್ಟಿಯಿಂದಲೂ ಕೂಡ ಸಣ್ಣ ನೀರಾವರಿ ಕಾಮಗಾರಿಗಳ ಕೆಲಸದಲ್ಲಿ ಮುಂದಿದ್ದೇವೆ.

ಸ್ವಾಮಿ, ಮತ್ತೊಂದು ವಿಷಯವನ್ನು ಇಲ್ಲಿ ಹೇಳಿದರೆ ಅಪ್ರಸ್ತುತ ಆಗಲಾರದೆಂದು ಅಂದುಕೊಂಡಿದ್ದೇನೆ. ಈ ಸಣ್ಣ ನೀರಾವರಿ ಖಾತೆ ಮೊದಲು ಮಂತ್ರಿಮಂಡಲದ ಯಾವುದೋ ಒಂದು ಮೂಲೆಯಲ್ಲಿ ಕೊಂಡಿರುತಿತ್ತು. ಈ ಒಂದು ಪರಿಸ್ಥಿತಿಯನ್ನು ನೋಡಿದ ನಮ್ಮ ನಾಯಕರು ಇದು ಹೀಗೇ ಇದ್ದರೆ

ಈ ಕಾರ್ಯಕ್ರಮ ವಿಸ್ತರಿಸುವುದಕ್ಕಾಗುವುದಿಲ್ಲವೆಂದು ಯೋಚಿಸಿ ಭಾರಿ ಮತ್ತು ಮಧ್ಯಮ ನೀರಾವರಿಗೆ ಇರುವಂತೆಯೇ ಪ್ರಾಧಾನ್ಯತೆಯನ್ನು ಕೊಟ್ಟು ಒಬ್ಬ ಸಂಪುಟದ ದರ್ಜೆಯ ಸಚಿವರ ಕೈಗೆ ಕೊಟ್ಟಿದ್ದಾರೆ. ೧೯೭೮-೭೯ನೇ ಸಾಲಿನಲ್ಲಿ ನಾವು ಪಡೆದ ೧೭, ೩೦,೦೦೦ ರೂಗಳ ಅನುದಾನದ ಪೈಕಿ ಈಗಾಗಲೇ ೧೬೦೭, ೧೧,೦೦೦ ರೂ. ಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಉಳಿದ ೧ ಕೋಟಿ ಚಿಲ್ಲರೆ ಹಣ ವಾಪಸ್ ಆಗಿದೆ ಎಂದು ಅಲ್ಲ. ಇವರಲ್ಲಿ ಇನ್ನೂ ಅಡ್ಜಸ್ಟ್‌ಮೆಂಟ್ ಆಗಬೇಕಾದ್ದು ಇದೆ. ಈ ಒಂದು ವರ್ಷದಲ್ಲಿ ಸುಮಾರು ೬೭ ಸಾವಿರ ಎಕರೆ ಭೂಮಿಗೆ ಹೊಸದಾಗಿ ನೀರನ್ನೊದಗಿಸಿಕೊಟ್ಟಿದ್ದೇವೆ. ಮತ್ತು ಸುಮಾರು ೧ ಲಕ್ಷ ಎಕರೆ ಹಳೆಯ ಅಚ್ಚುಕಟ್ಟುಗಳನ್ನು ದುರಸ್ತಿ ಮಾಡಿದ್ದೇನೆ, ೧೯೭೮-೭೯ರ ಸಾಧನೆಗಳು ಬಹಳವಾಗಿವೆ. ಇಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ವಿಶೇಷವಾದ ಕೆಲವು ತೊಂದರೆಗಳಿವೆ ಅವು ಯಾವುವು ಎಂದರೆ ಮೊದಲನೆಯದಾಗಿ ಯಂತ್ರಗಳ ತೊಂದರೆ. ಸಣ್ಣ ನೀರಾವರಿಗೆ ಬೇಕಾಗಿರತಕ್ಕ ಎಲ್ಲ ವಿಧವಾದ ಯಂತ್ರಗಳನ್ನೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ನಾನು ಅಧಿಕಾರ ವಹಿಸಿಕೊಂಡ ಕೂಡಲೇ ಸುಮಾರು ೧೩೫ ಲಕ್ಷ ರೂಗಳ ವೆಚ್ಚದಲ್ಲಿ ರೋಲರ್ಸ್, ಡಿಪ್ಪರ್ಸ್, ಕಂಪ್ರೆಸರ್ಸ್. ಕಾಂಕ್ರೀಟ್ ಮಿಕ್ಸ್‌ಚರ್ಸ್ ಇನೂ ಮುಂತಾದ ಯಂತ್ರಗಳನ್ನು ಹೊಸದಾಗಿ ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿವಂತೆ ಹೂಳು ಎತ್ತತಕ್ಕ ಕಾರ್ಯಕ್ರಮಕ್ಕಾಗಿ ೨೬ ಕೆರೆಗಳನ್ನು ಅಳವಡಿಸಿದ್ದೇವೆ. ಇದರ ಪೂರ್ಣ ವಿವರವನ್ನು ಇನ್ನು ಸ್ವಲ್ಪ ಹೊತ್ತಿನಲ್ಲಿ ಹೇಳುತ್ತೇನೆ. ಈ ಸಣ್ಣ ನೀರಾವರಿ ಯೋಜನೆಯಲ್ಲಿ ಕೆರೆಗಳನ್ನು ಪೋಷಣೆ ಮಾಡತಕ್ಕ ಕೆಲಸ ಭಿನ್ನ ಭಿನ್ನವಾದ ಹಂತದಲ್ಲಿದೆ. ಈ ಕೆರೆಗಳ ಪೋಷಣೆ ಕೆಲಸದಲ್ಲಿ ಬಿರುಕು ಮುಚ್ಚುವುದು, ಏರಿ ರಿಪೇರಿ, ತೂಬು ಕಟ್ಟುವುದು, ಹೂಳು ತೆಗೆಯುವುದು ಕಾಲುವೆಗಳನ್ನು ದುರಸ್ತಿ ಮಾಡುವುದು ಇನ್ನೂ ಮುಂತಾದುವು ಸೇರಿವೆ. ೧೯೭೯—೮೦ನೇ ಸಾಲಿನಲ್ಲಿ ಸುಮಾರು ೬೪೯ ಕೆಲಸಗಳನ್ನು ಪೂರೈಸಬೇಕೆಂದು ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಹೀಗೆ ಪೂರೈಸುವಾಗ ಸುಮಾರು ೫೭ ಸಾವಿರ ಹೆಕ್ಟೇರ್ ಭೂಮಿಗೆ ಹೊಸದಾಗಿ ನೀರು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅಲ್ಲದೆ ೩೦, ೧೦೦ ಹೆಕ್ಟೇರ್ ಜಮೀನು ಹಳೆ ಅಚ್ಚುಕಟ್ಟು ಸುಧಾರಣೆ ಬರುತ್ತದೆ. ೧೯೭೮—೭೯ನೇ ಸಾಲಿನಲ್ಲಿ ೧ ಲಕ್ಷಕ್ಕಿಂತ ಹೆಚ್ಚಿನ ವೆಚ್ಚದ ಸುಮಾರು ೪೮೬ ಹೊಸ ಕೆರೆಗಳ ಕೆಲಸ, ಮತ್ತು ೧ ಲಕ್ಷದ ಒಳಗಿರುವ ವೆಚ್ಚದ ೩೮೪ ಹೊಸ ಕೆರೆಗಳ ಕೆಲಸವನ್ನು ತೆಗೆದುಕೊಂಡಿದ್ದೇವೆ.

ಹೀಗಾಗಿ ಒಟ್ಟು ೧೯೭೮-೭೯ರಲ್ಲಿ ನಮ್ಮ ಕೈಯಲ್ಲಿದ್ದಂಥ ಕೆಲಸ ೮೭೦ ಕಾಮಗಾರಿಗಳನ್ನು ಅಳವಡಿಸಿಕೊಂಡಿದ್ದೇವೆ. ಹೀಗೆ ಅಳವಡಿಸಿಕೊಂಡ ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ ೨೦.೪೬ ಲಕ್ಷ ರೂಪಾಯಿಗಳು ತಗಲಬಹುದೆಂದು ಅಂದಾಜು ಮಾಡಿದ್ದೇವೆ. ಇದರಲ್ಲಿ ಈಗಾಗಲೇ ಸುಮಾರು ೪೯೧ ಕೆಲಸಗಳನ್ನು ಪೂರೈಸಿದ್ದೇವೆ. ಇನ್ನು ಉಳಿದಿರತಕ್ಕಂಥ ಕೆಲಸಗಳಲ್ಲಿ ಸುಮಾರು ೧೭ ಕೋಟಿ ೪೪ ಲಕ್ಷ ರೂಪಾಯಿಗಳ ಅಂದಾಜು ಕೆಲಸಗಳು ಈ ವರ್ಷಕ್ಕೆ ಮುಂದಕ್ಕೆ ಬಂದಿರುತ್ತದೆ. ೧೯೭೮-೭೯ರಲ್ಲಿ ೩೫೯ ಕೆಲಸಗಳು ಸುಮಾರು ೧೭.೪೪ ಕೋಟಿ ರೂಪಾಯಿಗಳ ವೆಚ್ಚದ ಕೆಲಸಗಳನ್ನು ಮಾಡಬೇಕಾದ್ದು ಉಳಿದಿದೆ. ಇದರ ಜೊತೆಗೆ ೧೯೭೮-೭೯ರಲ್ಲಿ ಉಳಿದುಕೊಂಡಿರುವ ೩೧೬ ಹೊಸ ಕೆಲಸಗಳನ್ನು ಸೇರಿಸಿಕೊಂಡು ೧೯೭೯-೮೦ಕ್ಕೆ ೬೭೫ ಒಟ್ಟು ನಮ್ಮ ಕೈಯಲ್ಲಿರತಕ್ಕಂಥ ಕಾಮಗಾರಿಗಳು. ಇದಕ್ಕಾಗಿ ತಗಲಬಹುದಾದ ವೆಚ್ಚ ೩೭ ಕೋಟಿ ೨೩ ಲಕ್ಷ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಅದರ ಜೊತೆಗೆ ೧೯೭೯-೮೦ ಈ ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಇರಬಹುದಾದಂಥ ಸಣ್ಣ ನೀರಾವರಿ ಕಾಮಗಾರಿಗಳ ಮಾಹಿತಿ ತೆಗೆದುಕೊಳ್ಳಬೇಕು ಎನ್ನುವ ದೊಡ್ಡ ಆಶಯ ನಮಗೆ ಇದ್ದು ಎಲ್ಲ ಸದಸ್ಯರಿಗೂ ಕಾಗದವನ್ನು ಬರೆದು, ಲೋಕ ಸಭೆಗೆ ಸಂಬಂಧಿಸಿದ ಸದಸ್ಯರು, ವಿಧಾನ ಸಭೆಗೆ ಸಂಬಂಧಿಸಿದ, ಮತ್ತು ವಿಧಾನ ಪರಿಷತ್ತಿಗೆ ಸಂಬಂಧಿಸಿದ ಸದಸ್ಯರೆಲ್ಲರಿಗೂ ತಮ್ಮ ತಮ್ಮ ಕ್ಷೇತ್ರಗಳಿಗೆ ಬರತಕ್ಕಂಥ ಸಣ್ಣ ನೀರಾವರಿ ಕಾಮಗಾರಿಗಳನ್ನು ಕುರಿತು ಪಟ್ಟಿಯನ್ನು ಕೇಳಿ, ಕೊಟ್ಟಿರತಕ್ಕಂಥ ಪಟ್ಟಿಯನ್ನು ಕ್ರೋಡಿಕರಿಸಿದಾಗ ಸುಮಾರು, ಅವರು ಕೊಟ್ಟಿರುವುದನ್ನೆಲ್ಲ ಸೇರಿಸುತ್ತಾ ಹೋದರೆ ೩೦ ಕೋಟಿ ರೂಪಾಯಿಗಳ ಅಂದಾಜಿನಷ್ಟು ಕಳುಹಿಸಿ ಕೊಟ್ಟಿದ್ದಾರೆ. ಕೆಲಸಗಳನ್ನೆಲ್ಲ ಕ್ರೋಡಿಕರಿಸಿ ಯಾವುದು ತಾಂತ್ರಿಕವಾಗಿ ಎಲ್ಲಿ ವಿವರಣೆಗಳು ಸಿದ್ಧವಾಗಿದೆ ಅಂತಹ ೩೪೫ ಕೆಲಸಗಳನ್ನು ಗೊತ್ತುಮಾಡಿ ಸುಮಾರು ೧೯ ಕೋಟಿ ೯೨ ಲಕ್ಷ ರೂಪಾಯಿಗಳ ವೆಚ್ಚದ ಅಂದಾಜು ತಯಾರು ಮಾಡಿ ಈ ಕೆಲಸಗಳನ್ನು 'ಸಿ' ಗ್ರೂಪ್ ಮಾಡಿ ೪-೫ ವರ್ಷಗಳಲ್ಲಿಯೇ ಇದನ್ನು ಮುಗಿಸಬೇಕು ಎನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಒಟ್ಟು ಒಂದು ಲಕ್ಷದ ಮೇಲ್ಪಟ್ಟ ವೆಚ್ಚದ ಕೆಲಸಗಳ ವಿಭಾಗದಲ್ಲಿ, ೧೯೭೯—೮೦ನೇ ಸಾಲಿಗೆ ೧೦೨೦ ಕೆಲಸಗಳಿಗಾಗಿ ರೂ. ೫೭ ಕೋಟಿ ೧೫ ಲಕ್ಷದ ಕಾರ್ಯಕ್ರಮ ನಮ್ಮ ಮುಂದಿದೆ. ೧ ಲಕ್ಷಕ್ಕೆ ಒಳಪಟ್ಟು ಕೆಲಸಗಳ ಕಾರ್ಯಕ್ರಮ

ಸಿದ್ಧವಾಗುತ್ತಿದೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಿಗಾಗಿ ಸುಮಾರು ೧೦ ಕೋಟಿ ರೂಪಾಯಿಗಳ ಅಂದಾಜುಗಳನ್ನು ಮಾಡಿದ್ದಾರೆ. ಈ ಅಂದಾಜಿನಂತೆ ಇಷ್ಟು ಹಣವನ್ನು ಖರ್ಚು ಮಾಡಿದರೆ ೨ಲಕ್ಷ ೪೦ ಸಾವಿರ ಹೆಕ್ಟೇರು ಭೂಮಿಗೆ ಸಣ್ಣ ನೀರಾವರಿ ಕಾಮಗಾರಿಗಳಿಂದ ನೀರನ್ನು ಒದಗಿಸಬಹುದು ಎನ್ನುವ ಅಂದಾಜನ್ನು ಇಟ್ಟುಕೊಂಡಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ೧೯೭೮-೭೯, ೧೯೭೯-೮೦, ಇದರಲ್ಲಿ ಖರ್ಚಾಗಬೇಕಾದ್ದು ೩೧.೫ ಕೋಟಿ ರೂಪಾಯಿಗಳನ್ನು ಸುಮಾರು ೬೨ ಸಾವಿರ ಹೆಕ್ಟೇರುಗಳಷ್ಟು ಭೂಮಿಗೆ ನೀರನ್ನು ಒದಗಿಸತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅಂದರೆ ಉಳಿದಿರತಕ್ಕಂಥ ೭೦ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಮತ್ತು ೧ನೂರ ೭೮ಸಾವಿರ ಹೆಕ್ಟೇರು ಭೂಮಿಗೆ ನೀರನ್ನು ಒದಗಿಸತಕ್ಕಂಥ ಕಾರ್ಯವನ್ನು ೩-೪ ವರ್ಷಗಳಲ್ಲಿ ಪೂರೈಸಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಈಗಿನ ತೀರ್ಮಾನದಂತೆ ಸುಮಾರು ೮೦ ಕೋಟಿ ರೂ. ಗಳು ೬ನೇ ಪಂಚವಾರ್ಷಿಕ ಯೋಜನೆಗೆ ಒದಗಿಸಬಹುದೆಂದು ಕಾಣುತ್ತದೆ. ಅಂದರೆ ಇದರ ಅರ್ಥ ಪ್ರತಿವರ್ಷ ಕೊನೆಪಕ್ಷ ೨೫ ಕೋಟಿ ರೂಪಾಯಿಗಳನ್ನಾದರೂ ಸಣ್ಣ ನೀರಾವರಿ ಕಾಮಗಾರಿಗಳಿಗೆ ಪ್ರತಿವರ್ಷ ಈ ಗುರಿಯನ್ನು ಸಾಧಿಸುವುದಕ್ಕೆ ಖರ್ಚು ಮಾಡಬೇಕೆಂಬುದು ಒಂದು ಗಮನಾರ್ಹವಾದ ವಿಚಾರ, ಈ ಪೈಕಿ ಹಲವಾರು ಸಣ್ಣ ನೀರಾವರಿ ಕಾಮಗಾರಿಗಳು ಮೂರು ವರ್ಷದೊಳಗೆ ಮುಗಿಸಬೇಕೆಂಬ ಗುರಿಯನ್ನು ಹೊಂದಿದ್ದು, ಇದ್ದಂತಹ ಸುಮಾರು ೮೭ ಹಳೆಯ ಕೆಲಸಗಳನ್ನು ೫ ವರ್ಷಗಳಿಗೆ ಮೇಲ್ಪಟ್ಟು ಅಂದರೆ ೧೫-೨೦ ವರ್ಷಗಳಿಂದ ಉಳಿದಿದ್ದ ಕೆಲಸಗಳನ್ನು ಕೂಡ ಪೂರೈಸಬೇಕೆಂದು ಪ್ರಯತ್ನ ಮಾಡಿದುದರ ಫಲವಾಗಿ ಈಗಾಗಲೇ ನಾವು ಸುಮಾರು ೫೦ ಕೆಲಸಗಳನ್ನು ಪೂರೈಸಿ ಈಗ ೩೭ ಕೆಲಸಗಳನ್ನು ಮಾತ್ರ ಪೂರ್ಣಗೊಳ್ಳದೆ ಉಳಿದಿದೆ. ೩೭ ಕೆಲಸಗಳಲ್ಲಿ ೧೩ ಕೆಲಸಗಳು ಉತ್ತರ ಭಾಗದ, ಮತ್ತು ೨೪ ಕೆಲಸಗಳು ದಕ್ಷಿಣ ಭಾಗದ ಕೆಲಸಗಳಾಗಿ ಇರತಕ್ಕಂಥದ್ದಾಗಿರುತ್ತವೆ. ಇದರಲ್ಲಿ ಸುಮಾರು ೨೪ ಕೆಲಸಗಳನ್ನು ಪೂರ್ತಿ ಮಾಡತಕ್ಕಂಥ ಯೋಜನೆಯ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ. ಇನ್ನುಳಿದಿರತಕ್ಕಂತಹ ೧೩ ಕೆಲಸಗಳು ತಾಂತ್ರಿಕ ದೋಷದಿಂದಲೋ ಇಲ್ಲವೆ ನ್ಯಾಯಾಲಯಗಳ ತೊಡಕಿನಿಂದಲೋ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ವಿಳಂಬವಾದುದರಿಂದ ಅಥವಾ ತಾಂತ್ರಿಕವಾಗಿ ಕಾಮಗಾರಿಗಳನ್ನು ಮಾಡುವುದು ಯೋಗ್ಯವಲ್ಲವೆನ್ನುವ ಕಾರಣದಿಂದ ಉಳಿದುಕೊಂಡಿವೆಯೇ ಹೊರತು, ಇಲಾಖೆಯ ವತಿಯಿಂದ, ತೊಂದರೆಯಾಗಿದೆ ಎಂತಲೂ ಅಲ್ಲ, ಹಣದ ತೊಂದರೆಯಿಂದಲೂ ಅಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಸದನದ ಗಮನಕ್ಕೆ ತರಬಯಸುವುದಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂ, ಇದರಲ್ಲಿ ೪ಕೋಟಿ ೭೭ಲಕ್ಷದ ೯೫ಸಾವಿರ ರೂಪಾಯಿಗಳ ಹಣವನ್ನು ಸಣ್ಣ ನೀರಾವರಿ ಕಾಮಗಾರಿಗಳಿಗಾಗಿ ಉಪಯೋಗಿಸಿಕೊಂಡು, ಉಳಿದಿರತಕ್ಕಂಥ ಕೆಲಸಗಳನ್ನು ಪೂರೈಸಬೇಕು ಎನ್ನುವ ಯೋಜನೆಯನ್ನೂ ಸಹ ನಾವು ಹಾಕಿಕೊಂಡಿದ್ದೇವೆ. ಅದರಲ್ಲಿ ಒಂದು ತೊಡಕು ನಮಗೆ ಏನು ಇದೆ ಎಂದರೆ ೪ ಕೋಟಿ ೭೭ ಲಕ್ಷದ ೯೫ ಸಾವಿರ ರೂಪಾಯಿಗಳನ್ನು ಯಾವ ತಾಲ್ಲೂಕುಗಳನ್ನು ಎಂಪ್ಲಾಯಮೆಂಟ್ ಅಫರ್‌ಮೇಷನ್ ಸ್ಕೀಂಗೆ ಒಳಪಡಿಸಿದ್ದಾರೆ, ಅದಕ್ಕೆ ಸೀಮಿತವಾಗಿರುವುದರಿಂದ ಕೆರೆಗಳನ್ನು ಗುರುತಿಸತಕ್ಕಂಥ ಕ್ರಮಗಳನ್ನು ತೆಗೆದುಕೊಳ್ಳುವಂಥ ಕೆಲಸಗಳನ್ನು ಈಗಾಗಲೇ ಆರಂಭ ಮಾಡಿದ್ದೇವೆ. ಸುಮಾರು ಇನ್ನು ೩-೪ ವರ್ಷಗಳಲ್ಲಿಯೇ ಒಂದು ನೂರು ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡುತ್ತೇವೆ. ಅದರ ಜೊತೆಗೆ ವಿಶ್ವ ಬ್ಯಾಂಕಿನಿಂದ ಬರಬಹುದಾದಂತ ೧೦೦ ಕೋಟಿ ರೂಪಾಯಿಗಳನ್ನು ಗಮನದಲ್ಲಿಟ್ಟುಕೊಂಡು ಖರ್ಚು ಮಾಡುವುದಾದರೆ ೫-೬ ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು, ಹೊಸ ಕಾಮಗಾರಿಗಳು ಎಲ್ಲ ಕೆಲಸಗಳನ್ನು ಮಾಡಬಹುದೆಂದು ನಾನು ಭಾವಿಸುತ್ತೇನೆ.

ನಾವು ಈಗ ಅನೇಕಹೊಸ ಹೊಸ ವಿಚಾರಗಳನ್ನು ಇದರಲ್ಲಿ ಅಳವಡಿಸಿದ್ದೇವೆ, ಇದರಲ್ಲಿ ವಿಶೇಷವಾಗಿ ಪ್ರತಿಯೊಂದು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ನೀರಾವರಿಯ ಒಂದು ಭೂಪಟವನ್ನು ತಯಾರು ಮಾಡತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಈಗಾಗಲೇ ಆ ಕಾರ್ಯವನ್ನು ಮಾಡುತ್ತಿದ್ದೇವೆ, ಈ ಕಾರ್ಯಕ್ರಮದಲ್ಲಿ ಮೈಸೂರು. ಚಿಕ್ಕಮಗಳೂರು. ಧಾರವಾಡ. ಬೆಳಗಾವಿ. ಬಿಜಾಪುರ. ಉತ್ತರ ಕನ್ನಡ, ಗುಲ್ಬರ್ಗ, ಬೀದರ್. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈಗಾಗಲೇ ಈ ನೀರಾವರಿ ಭೂಪಟ ಸಿದ್ಧವಾಗಿದೆ ಎಂಬ ವಿಚಾರವನ್ನು ಈ ಸದನದ ಗಮನಕ್ಕೆ ಸಂತೋಷದಿಂದ ತರುತ್ತಾ ಉಳಿದ ಕಡೆಗಳಲ್ಲಿ ಕೂಡ ಈ ಕಾರ್ಯ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ನೀರಾವರಿ ಕಾಮಗಾರಿಗಳಿಗೆ ಸಾಧ್ಯತೆ ಇದೆ. ಯಾವ ಕಡೆ ಯಾವುದನ್ನು ಆಧ್ಯತೆಯ ಮೇಲೆ ತೆಗೆದುಕೊಳ್ಳಬೇಕು ಎಂಬ ನಿಬಂಧನೆಯನ್ನು ಹಾಕಿ

ಕೊಂಡು ಭೂಪಟಗಳನ್ನು ತಯಾರು ಮಾಡಿದ್ದೇವೆ. ಈ ಭೂಪಟವನ್ನು ತಯಾರು ಮಾಡುವುದು ಅಷ್ಟೆ ಅಲ್ಲ. ಆದಕ್ಕೆ ತಗುಲತಕ್ಕ ವೆಚ್ಚದ ಅಂದಾಜನ್ನೂ ಇಟ್ಟುಕೊಂಡು ಅದಕ್ಕೆ ಹಣವನ್ನು ಒದಗಿಸಿ ಕೊಡತಕ್ಕ ಪ್ರಯತ್ನವನ್ನು ಕೂಡ ಮಾಡಿದ್ದೇವೆ. ಇದರಲ್ಲಿ ವಿಶೇಷವಾಗಿ ವಿಶ್ವಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ವ್ಯವಸಾಯ ಅಭಿವೃದ್ಧಿ ನಿಧಿಯಿಂದ ನಾವು ಕೆಲವು ಉತ್ತಮ ಕಾರ್ಯಗಳನ್ನು ಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ.

೧೨-೩೦ ಪಿ.ಎಂ.

ಈಗಾಗಲೇ International fund for Agricultural Development ಏನಿದೆ ಅದರ ಟೀಮ್ ರಾಜ್ಯಕ್ಕೆ ಭೇಟಿ ಕೊಟ್ಟು ಕೆಲವು ಪ್ರದೇಶಗಳಲ್ಲಿ ಸಂಚಾರ ಮಾಡಿದೆ. ಧಾರವಾಡದ ಮುಂಡವಾಡ ಕೆರೆಯ ನಿರ್ಮಾಣ ಕಾರ್ಯವನ್ನು ಮತು ರಾಜ್ಯದಲ್ಲಿ ಮಳೆ ಬೀಳತಕ್ಕ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ಇನ್ನೂ ನಾಲ್ಕು ಕೆರೆಗಳನ್ನು ಇದಕ್ಕೆ ಅಳವಡಿಸಿ ವಿಶ್ವಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ವ್ಯವಸಾಯ ಅಭಿವೃದ್ಧಿ ನಿಧಿಯಿಂದ ಸಹಾಯ ಪಡೆದು ಈ ಕಾರ್ಯವನ್ನು ಪೂರ್ಣಗೊಳಿಸ ಬೇಕು ಎಂದು ಇದಕ್ಕೆ ಕಾರ್ಯಕ್ರಮವನ್ನು ಕೂಡ ಇಲಾಖೆಯಲ್ಲಿ ಅಳವಡಿಸಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ಇರತಕ್ಕ ಕೆರೆಗಳ ಒಂದು ತಃಖ್ತೆ ಇಲ್ಲ. ಆದ್ದರಿಂದ ಇದನ್ನು ತಯಾರು ಮಾಡಿಸಬೇಕೆಂದು ನಾವು ಒಂದು ಕಾರ್ಯಕ್ರಮವನ್ನು ಹಾಕಿ ಕೆರೆಗಳನ್ನು ನೋಂದಾಣಿಕೆ ಮಾಡತಕ್ಕದ್ದು ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಎಷ್ಟೆಷ್ಟು ಅಚ್ಚುಕಟ್ಟಿಗೆ ನೀರು ಕೊಡುತ್ತಿದ್ದಾರೆ, ಎಷ್ಟು ನೀರಿದೆ, ಎಷ್ಟು ನೀರು ಕಡಿಮೆ ಯಾಗಿವೆ, ಕಡಿಮೆಯಾದರೆ ಅದಕ್ಕೆ ಕಾರಣ ಏನು ಎಲ್ಲವನ್ನು ವಿಮರ್ಶೆ ಮಾಡುವುದಕ್ಕೆ ಹೊಸದಾಗಿ ಟ್ಯಾಂಕ್ ರಿಜಿಸ್ಟರ್ಸ್ ತಯಾರು ಮಾಡಿಸುತ್ತಿದ್ದೇವೆ. ಇನ್ನು ಹೂಳು ತೆಗೆಸತಕ್ಕ ಕೆಲಸದ ವಿಷಯವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ಈ ಕೆಲಸ ಬಹಳ ಬೆಲೆ ಬಾಳತಕ್ಕ ಕೆಲಸ, ಇದರ ಬಗ್ಗೆ ತಾಂತ್ರಿಕವಾಗಿ ತದ್ವಿರುದ್ಧವಾದ ಅಭಿಪ್ರಾಯವಿದೆ. ಆದ್ದರಿಂದ ಈ ಕೆಲಸವನ್ನು ಏತಕ್ಕೆ ಮಾಡುತ್ತಿದ್ದೀರಿ ಎಂದು ಹೇಳಿದರು. ಈ ಹೂಳು ತೆಗೆಯತಕ್ಕದ್ದು ಒಂದು ಭಾಗವಾದರೆ ಇದನ್ನು ತಡೆಗಟ್ಟತಕ್ಕದ್ದು ಮತ್ತೊಂದು ಭಾಗ. ಒಂದುಕಾಲದಲ್ಲಿ ನಮ್ಮ ಪೂರ್ವಜರು ಕೆರೆಗಳಲ್ಲಿ ಹೂಳು ಇರುವುದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದರು ಎಂದು ಅನ್ನಿಸುತ್ತದೆ. ಮೊದಲು ಕೆರೆಯ ಅಂಗಳದ ಭಾಗದಲ್ಲಿ ಸಸಿಗಳನ್ನು ಮರಗಳನ್ನು ನೆಡುತ್ತಿದ್ದರು. ಹುಣಸೇ ಮರವನ್ನೋ ಅಥವಾ ಯಾವುದಾದರೂ ಮರ ವನ್ನು ಹಾಕಿ ಅಚ್ಚುಕಟ್ಟುದಾರರು ಇಲ್ಲವೇ ಗ್ರಾಮದ ಯಾರಾದರೂ ಅದರಲ್ಲಿ ಬರತಕ್ಕ ಉತ್ಪತ್ತಿಯನ್ನು ತೆಗೆದುಕೊಂಡು ಆ ಮರದ ರಕ್ಷಣೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಮಾಡುತ್ತಿದ್ದರು. ಈಗ ಆ ರೀತಿ ಮಾಡದೇ ಇರುವುದರಿಂದ ಮಳೆ ನೀರಿನ ಜೊತೆಗೆ ಮಣ್ಣು ಕೂಡ ಪೂರ್ಣವಾಗಿ ಕೆರೆಗೆ ಬರುವುದಕ್ಕೆ ಅವಕಾಶವಾಗಿ ಹೂಳಿಗೆ ಒಂದು ಕಾರಣವಾಗಿದೆ. ಮತ್ತೊಂದು ಕಾರಣ ಮಳೆ ಬಿದ್ದು ಮಳೆಯ ನೀರು ಬಂದಾಗ ಅದನ್ನು ತಡೆಯುವುದಕ್ಕೆ ಶಿಲ್ಟ್ ಟ್ರಾಪ್ಸ್ ಎಂದು ಹಾಕುತ್ತಿದ್ದರು. ಅದರಲ್ಲಿ ಬಹಳ ಮೆಕ್ಕಲು ಮಣ್ಣು ಬಂದು ಕೂರುತ್ತಿತ್ತು. ಅದನ್ನು ರೈತರು ತಮ್ಮ ಜಮೀನಿಗೆ ತೆಗೆದುಕೊಂಡು ಹೋಗುವ ಕ್ರಮ ಇತ್ತು. ಈಗ ಅದನ್ನು ಕೈ ಬಿಟ್ಟಿದ್ದಾರೆ. ಇದರಿಂದಲೂ ಕೆರೆಯ ಒಳಗೆ ಮಣ್ಣು ಬಂದು ಹೂಳಿಗೆ ಕಾರಣವಾಗಿದೆ. ಇನ್ನೊಂದು ವಿಶೇಷವಾದ ಕಾರಣವೇನೆಂದರೆ ಕೆರೆಯ ಅಂಗಳವನ್ನು ಉತ್ತುಕೊಳ್ಳತಕ್ಕದ್ದು. ಹೀಗೆ ಕೆರೆಯ ಅಂಗಳವನ್ನು ಉಳುವುದರಿಂದ ಭೂಮಿಯಲ್ಲಿರುವ ಮಣ್ಣು ಮೆದುವಾಗಿ ಮಳೆ ಬಿದ್ದ ತಕ್ಷಣ ಮಣ್ಣು ಕೆರೆಗೆ ಬಂದು ಸೇರತಕ್ಕದ್ದು ಮತ್ತೊಂದು ಕಾರಣವಾಗಿದೆ ಯೆಂದು ನಾವು ವಿಶ್ಲೇಷಣೆ ಮಾಡಿ ಈ ಕೆರೆಯ ಭಾಗದಲ್ಲಿ ಸಸಿ ನೆಡತಕ್ಕ ಕಾರ್ಯವನ್ನು ವಿಶೇಷವಾಗಿ ಮಾಡಬೇಕೆಂದು ಒಂದು ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ. ಶಿಲ್ಟ್ ಟ್ರಾಪ್ಸ್ ಹಾಕತಕ್ಕದ್ದು ಹೂಳನ್ನು ತಡೆಗಟ್ಟತಕ್ಕ ಒಂದು ಕಾರ್ಯಕ್ರಮವಾಗಿದೆ. ಮತ್ತು ಕಾಂಟೂರ್ ಬಂಡ್‌ಗಳನ್ನು ಹಾಕತಕ್ಕ ಒಂದು ಕಾರ್ಯಕ್ರಮವನ್ನೂ ಕೂಡ ನಾವು ಅಳವಡಿಸಿಕೊಂಡಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ಕೆರೆಯ ಅಂಗಳವನ್ನು ಒತ್ತುವರಿ ಮಾಡಿ ಅತಿಕ್ರಮವಾಗಿ ಪ್ರವೇಶ ಮಾಡತಕ್ಕದ್ದನ್ನು ತಡೆಗಟ್ಟತಕ್ಕ ಒಂದು ಪ್ರಯತ್ನವನ್ನು ಮಾಡಬೇಕೆಂಬ ಉದ್ದೇಶವನ್ನು ನಾವಿಟ್ಟುಕೊಂಡಿದ್ದೇವೆ. ಹೂಳು ತೆಗೆಯುವ ಬಗ್ಗೆ ಮೂರು ವಿಧಾನಗಳನ್ನು ನಾವು ಯೋಚನೆ ಮಾಡಿದ್ದೇವೆ. ಒಂದನೆಯದು ನೇರವಾಗಿ ಹೂಳನ್ನು ಇಲಾಖೆಯಿಂದ ತೆಗೆಯುತಕ್ಕದ್ದು. ಹೀಗೆ ಇಲಾಖೆಯಿಂದ ಹೂಳನ್ನು ತೆಗೆಸುವುದಕ್ಕೆ ವೆಚ್ಚ ಜಾಸ್ತಿ ಯಾಗುತ್ತದೆ ಎಂಬ ಮಾತು ಸತ್ಯ, ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ಹಿಂದಿ

ನಿಂದಲೂ ಬಂಡ್‌ಗಳನ್ನು ಏರಿಸಿಕೊಂಡು ಏರಿಸಿಕೊಂಡು ಬಂದಿದ್ದಾರೆ. ಹೀಗಾಗಿ ಕೊನೆಗೆ ತೂಬಿನಲ್ಲಿ ನೀರೇ ಬರದೆ ಇರುವ ಪರಿಸ್ಥಿತಿ ಕೂಡ ನಿರ್ಮಾಣವಾಗಬಹುದು. ಆದ್ದರಿಂದ ಈ ಹೂಳು ತೆಗೆಸುವುದಕ್ಕೆ ಇಲಾಖೆ ಯಿಂದ ಎಷ್ಟು ಸಾಧ್ಯವಾಗುತ್ತದೋ ಅಷ್ಟನ್ನೂ ಇಲಾಖೆಯಿಂದ ತೆಗೆಸತಕ್ಕದ್ದು ಮತ್ತೇ ಈ ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂ ಏನಿದೆ ಅದನ್ನು ವಿಶೇಷವಾಗಿ ಬಳಸಿ ಕೆರೆಗಳಲ್ಲಿ ಹೂಳು ತೆಗೆಸುವುದಕ್ಕೆ ಉಪ ಯೋಗಿಸಿಕೊಳ್ಳಬೇಕು ಎಂಬುದು ಮತ್ತು ಇನ್ನೊಂದು ವಿಧಾನವೇನೆಂದರೆ ರೈತರು ಕೆರೆಯಲ್ಲಿರತಕ್ಕ ಮಣ್ಣನ್ನು ತೆಗೆದುಕೊಂಡು ಹೋಗತಕ್ಕ ಕ್ರಮ ಇದೆ. ಅವರು ನಿರ್ದಾಕ್ಷಿಣ್ಯವಾಗಿ ಅದನ್ನು ತೆಗೆದುಕೊಂಡು ಹೋಗಬಹುದು. ಯಾವ ರೀತಿಯ ಅಡೆತಡೆಗಳೂ ಇಲ್ಲದೇ ಕೆರೆಯಲ್ಲಿರತಕ್ಕ ಹೂಳನ್ನು ತೆಗೆದುಕೊಂಡು ಹೋಗತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಸ್ವಲ್ಪ ಮುಂದಕ್ಕೆ ಹೋಗಿ ನಾವು ಯೋಚನೆ ಮಾಡುತ್ತಿದ್ದೇವೆ. ಅದೇನೆಂದರೆ ಕೆರೆಯಲ್ಲಿರತಕ್ಕ ಮಣ್ಣನ್ನು ತೆಗೆದುಕೊಂಡು ಹೋಗತಕ್ಕ ರೈತರಿಗೆ ಏನಾದರೂ ಇನ್‌ಸೆಂಟಿವ್ ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂತಿದ್ದೇವೆ. ಇದಕ್ಕಾಗಿ ವಿಶೇಷ ವಾಗಿ ಯೋಜನೆ ಮಾಡುತ್ತಿದ್ದೇವೆ. ನಮ್ಮ ಸಣ್ಣ ನೀರಾವರಿ ಯೋಜನೆಗಳಿಗೆ ಕೆರೆಗಳ ಹೂಳು ಒಂದು ಶಾಪವಾಗಿದೆ. ಬಂಡನ್ನು ಎತ್ತಿಕೊಂಡುಹೋದ ಹಾಗೆ ನೀರು ನಿಲ್ಲತಕ್ಕ ಪ್ರದೇಶ ವಿಸ್ತಾರವಾಗುತ್ತದೆ. ನೀರು ಎಷ್ಟು ವಿಸ್ತಾರವಾಗಿ ನಿಲ್ಲುತ್ತದೋ ಅಷ್ಟು ನಷ್ಟವಾಗುತ್ತದೆ. ಆವಿಯಾಗಿ ಹೋಗತಕ್ಕ ನೀರು ನಷ್ಟವಾಗುತ್ತದೆ. ಈ ನಷ್ಟವನ್ನು ಕಡಿಮೆ ಮಾಡಬೇಕಾದರೆ ನೀರು ನಿಲ್ಲತಕ್ಕ ಪ್ರದೇಶವನ್ನು ಸೀಮಿತ ಗೊಳಿಸುತ್ತ ಬರಬೇಕು. ಅದಕ್ಕಾಗಿ ನಾವು ಕೆಲವು ಯೋಜನೆಗಳನ್ನು ಮಾಡುತ್ತಿದ್ದೇವೆ. ಕೆರೆಗಳನ್ನು ತೀರ ಆಳ ಮಾಡತಕ್ಕದ್ದು, ಆಳ ಮಾಡಿದಂಥ ಕೆರೆಗಳಲ್ಲಿ ಇನ್ನಷ್ಟು ಬಾವಿ ರೂಪದಲ್ಲಿ ಮಾಡಿ ಮೀನು ಸಾಕತಕ್ಕ ಕಾರ್ಯಕ್ರಮವನ್ನು ಮಾಡಬೇಕು, ಮೀನಿನಿಂದ ಬರತಕ್ಕ ಉತ್ಪತ್ತಿಯನ್ನು ಕೆರೆಯ ಲಾಭಕ್ಕಾಗಿ ಬಳಸಬೇಕು ಎಂಬುದು ನಮ್ಮ ಯೋಜನೆಯಾಗಿದೆ. ನಮ್ಮ ಈ ಗುರಿಸಾಧನೆಗೆ ಕೆಲವು ತೊಂದರೆಗಳಿವೆ. ಬಹುಮುಖ್ಯವಾದ ತೊಂದರೆ ಏನೆಂದರೆ ನಮಗೆ ಕೆರೆ ಕಟ್ಟುವುದಕ್ಕೆ ಬೇಕಾಗಿರತಕ್ಕ ಯಾಂತ್ರಿಕ ಸಾಮಗ್ರಿಗಳ ತೊಂದರೆ ಇದೆ. ಅದನ್ನು ಬಗೆ ಹರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಮತ್ತೊಂದು ತೊಂದರೆ ಯೇನೆಂದರೆ ಭೂಸ್ವಾಧೀನ ಪಡಿಸಿಕೊಳ್ಳತಕ್ಕದ್ದು. ಅನೇಕ ಸದಸ್ಯರು ಮಾತನಾಡುತ್ತಾ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದರೂ ಅದಕ್ಕೆ ಕಾಂಪೆನ್‌ಸೇಷನ್ ಕೊಟ್ಟಿಲ್ಲ ಎಂದುಹೇಳಿದ್ದಾರೆ. ಇಲ್ಲಿ ನಮಗೆ ಇರತಕ್ಕ ತೊಂದರೆ ಏನು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಭೂಮಿಯನ್ನು ಸ್ವಾಧೀನಪಡಿಸಿ ಕೊಂಡು ಲೆಕ್ಕಾಚಾರ ಮಾಡಿಕೊಡಬೇಕು ಎಂಬ ಒಂದು ಅವಾರ್ಡ್ ಪಾಸ್ ಮಾಡಿದಮೇಲೆ ಯಾರ ಭೂಮಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೋ ಅವರು ಹಣವನ್ನು ತೆಗೆದುಕೊಳ್ಳುವುದಕ್ಕೆ ಬೇಕಾಗಿರತಕ್ಕ ಎಲ್ಲ ವ್ಯವಸ್ಥೆಯನ್ನು ಮಾಡಿಕೊಡಬೇಕಾಗುತ್ತದೆ. ಹಾಗೆ ಭೂ ಮಾಲೀಕ ವ್ಯವಸ್ಥೆ ಮಾಡಿಕೊಡದೇ ಇದ್ದಾಗ ದಂಡನ್ನು ಕೊಡುವುದು ಸ್ವಲ್ಪ ತೊಂದರೆಯಾಗುತ್ತದೆ. ಇನ್ನೊಂದು ತೊಂದರೆಯೆಂದರೆ ನ್ಯಾಯಾಲಯಕ್ಕೆ ಹೋಗಿ ತಡೆ ಆಜ್ಞೆಗಳನ್ನು ತರುವುದು. ಹೀಗೆ ತಡೆ ಆಜ್ಞೆಗಳನ್ನು ತರುವುದರಿಂದ ಕೆಲಸ ನಿಂತು ಹೋಗಿ ಅನೇಕ ವರ್ಷಗಳ ಕಾಲ ಈ ಕೆಲಸವನ್ನು ಮಾಡದೇ ಇರತಕ್ಕ ಪರಿಸ್ಥಿತಿ ಕೂಡ ಉಂಟು. ಇನ್ನು ಅಲ್ಪ ಸ್ವಲ್ಪ ಕಾಂಟ್ರಾಕ್ಟುದಾರರಿಂದಲೂ ತೊಂದರೆಯಾಗಿರಬಹುದು. ಅದರ ಬಗ್ಗೆ ಕೂಡ ನಾನು ಗಮನ ಹರಿಸಿದ್ದೇನೆ. ಇದು ನಮ್ಮ ಇಲಾಖೆಯ ಒಂದು ಪಕ್ಷಿ ನೋಟ. ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಮೊದಲನೆಯದಾಗಿ ಶ್ರೀಮಾನ್ ಗಂಗಾಧರನ್‌ರವರು ರಾಜಕೀಯ ಕೆರೆಗಳನ್ನು ಮಾಡಬೇಡಿ, ಆರ್ಥಿಕವಾಗಿ ಸಮಗ್ರವಾಗಿ ಲಾಭವಾಗತಕ್ಕಂಥ ಯೋಜನೆಗಳನ್ನು ಕೈಗೆ ತೆಗೆದು ಕೊಳ್ಳಿ ಎಂಬುದಾಗಿ ಹೇಳಿದ್ದಾರೆ. ಕೆರೆಯನ್ನು ನಿರ್ಮಾಣ ಮಾಡತಕ್ಕಂತಹ ಸಂದರ್ಭದಲ್ಲಿ ಈ ಎಲ್ಲ ವಿಚಾರ ಗಳನ್ನೂ ಗಮನದಲ್ಲಿಟ್ಟುಕೊಂಡೆ ಕೆರೆಯನ್ನು ನಿರ್ಮಾಣ ಮಾಡುವುದು. ಒಂದೊಂದು ಸಾರಿ ರೈನ್ ಶ್ಯಾಡೋ ಏರಿಯಾದಲ್ಲಿ ಕಟ್ಟಿರತಕ್ಕಂತಹ ಕೆರೆಗಳಲ್ಲಿ ಸ್ವಲ್ಪ ತೊಂದರೆಯಾಗಿದೆ. ಕೆಲವು ಕಡೆ ಹೀಗೆ ಆಗಿದೆ. ಈ ಏರಿಯಾದಲ್ಲಿ ಕಟ್ಟಿರತಕ್ಕಂತಹ ಕೆರೆಗಳಿಗೆ ನೀರು ಬಾರದೇ ಇರತಕ್ಕಂತಹ ಪ್ರಸಂಗ ಕೂಡ ಉಂಟು. ಇಂತಹ ಕೆರೆಗಳನ್ನು ರಾಜಕೀಯ ಕೆರೆಗಳು ಎಂಬುದಾಗ ಹೇಳುವುದಕ್ಕಿಂತ ಕೆಲವು ತಾಂತ್ರಿಕ ತೊಂದರೆ ಯಿಂದ ಕೆಲವು ಸಲ ಅಚಾತುರ್ಯಗಳಾಗಿವೆ ನಮ್ಮ ಚಿಕ್ಕಮಗಳೂರು ತಾಲ್ಲೂಕು, ದಾಸರಹಳ್ಳಿ ಎಂಬಲ್ಲಿ ಸುಮಾರು ೧೪ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿ ಒಂದು ಕೆರೆಯನ್ನು ಕಟ್ಟಿದ್ದಾರೆ. ಆ ಕೆರೆಯಲ್ಲಿ ಒಂದು ಪಕ್ಷಿ ಕೂಡ ಮುಳುಗುವುದಕ್ಕೆ ಸಾಕಾಗುವಂತಹ ನೀರು ಇದುವರೆಗೂ ಬಂದಿಲ್ಲ. ಇದನ್ನು ೧೯೫೬ನೇ ಇಸವಿಯಲ್ಲಿ ಕಟ್ಟಿದ್ದಾರೆ. ಇದನ್ನು ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾ ಗಿದ್ದಂತಹ ಕಾಲದಲ್ಲಿ ಕಟ್ಟಿಸಿರತಕ್ಕಂತಹ ಕೆರೆ. ಅವರ ಮೇಲೆ ಮಾಡಲಾಗಿದ್ದಂತಹ ೧೪ ಚಾರ್ಜಸ್‌ಗಳಲ್ಲಿ ಇದೂ ಒಂದು. ಆದರೆ ನಾನು ಈಗ ಆ ಕೆರೆಯನ್ನು ರಾಜಕೀಯ ಕೆರೆ ಎಂಬುದಾಗಿ ಹೇಳುವುದಕ್ಕೆ

ಪ್ರಯತ್ನ ಮಾಡುವುದಿಲ್ಲ. ಇಂತಹ ಕೆರೆಗಳಿಗೆ ಯಾವುದಾದರೂ ರೂಪದಲ್ಲಿ ನೀರನ್ನು ತಂದು ಬಿಡಬೇಕೆಂದು ನನ್ನ ಉದ್ದೇಶ. ದಾಸರಹಳ್ಳಿಯ ಕೆರೆಗೂ ನೀರನ್ನು ತಂದು ಹಾಕಬೇಕೆನ್ನತಕ್ಕಂತಹ ಪ್ರಯತ್ನ ಇದೆ.

ಏತ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚಾಗಿ ಮಾಡಬೇಕು ಎನ್ನತಕ್ಕಂತಹ ಸಲಹೆಯನ್ನೂ ಶ್ರೀಮಾನ್ ಗಂಗಾಧರನ್‌ರವರು ಕೊಟ್ಟಿದ್ದಾರೆ ಇದರ ಕಾರ್ಯವ್ಯಾಪ್ತಿ ಅನುಭವ ಅವರಿಗೆ ಸಾಕಷ್ಟು ಆಗಿರಬಹುದು ಎಂದು ನನ್ನ ಭಾವನೆ. ಏತ ನೀರಾವರಿ ಯೋಜನೆಗಳನ್ನು ಈ ಸಾರಿಯ priority ಯೋಜನೆಯಲ್ಲಿ ತೆಗೆದುಕೊಂಡಿದ್ದೇವೆಂದು ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀಮಾನ್ ರಾಮಯ್ಯನವರು ತುಂಗಾ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಈ ಸಾರಿಯ ಯೋಜನೆಯಲ್ಲೇ ಸೇರಿಸಬೇಕೆಂದು ಹೇಳಿದ್ದಾರೆ. ಮುತ್ತಿಕೊಪ್ಪ ಎಂಬಲ್ಲಿ ಸುಮಾರು ೨೩ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ಯೋಜನೆಯನ್ನು ಈಗಾಗಲೇ ನಮ್ಮ ಈ ಸಾರಿಯ ಯೋಜನೆಯಲ್ಲಿ ಸೇರಿಸಿದ್ದೇವೆ ಎನ್ನತಕ್ಕಂತಹ ವಿಷಯವನ್ನು ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀಮಾನ್ ಕಡಿದಾಳ್ ದಿವಾಕರ್‌ರವರು ಮಲೆನಾಡಿನಲ್ಲಿ ದೊಡ್ಡ ದೊಡ್ಡ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹೆಚ್ಚು ಹೆಚ್ಚು ಏತ ನೀರಾವರಿ ಯೋಜನೆ ಕಾಮಗಾರಿಗಳನ್ನು ಹಾಕಿಕೊಳ್ಳಬೇಕೆಂದು ಹೇಳಿದರು. ಇದರ ಬಗ್ಗೆ ಸರ್ಕಾರ ವಿಶೇಷವಾಗಿ ಗಮನ ಕೊಡುತ್ತದೆಂದು ಅವರಿಗೆ ಈ ಮೂಲಕ ತಿಳಿಸುತ್ತಿದ್ದೇನೆ.

ಶ್ರೀಮಾನ್ ಕೆ. ರಾಮಭಟ್‌ರವರು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ವಿಶೇಷವಾಗಿ ಏತ ನೀರಾವರಿ ಯೋಜನೆ ಆಗಬೇಕೆಂದು ಹೇಳಿದ್ದಾರೆ. ಇದರ ಬಗ್ಗೆಯೂ ಕೂಡ ಸರ್ಕಾರ ಗಮನ ಹರಿಸುತ್ತದೆ ಎಂಬುದನ್ನು ತಿಳಿಸುತ್ತಿದ್ದೇನೆ. ಇದರ ಜೊತೆಗೆ ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ತಾಲ್ಲೂಕು ಬೋರ್ಡುಗಳಿಗೆ ಹೆಚ್ಚು ಹಣವನ್ನು ಕೊಡಬೇಕು. ಇದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಯ ವ್ಯಾಪ್ತಿಯಲ್ಲಿ ಬರತಕ್ಕಂತಹ ೧೫ ಸಾವಿರ ಕೆರೆಗಳ ನಿರ್ಮಾಣ ಹಾಗೂ ಅವುಗಳ ರಿಪೇರಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಈ ಸಾರಿ ಅಂದರೆ ೧೯೭೮–೭೯ನೇ ಸಾಲಿನಲ್ಲಿ ತಾಲ್ಲೂಕು ಬೋರ್ಡುಗಳಿಗೆ ೭ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಕೂಡ ಸುಮಾರು ೩೦ ಲಕ್ಷ ರೂಪಾಯಿಗಳವರೆಗೂ ಒಂದೊಂದು ತಾಲ್ಲೂಕು ಬೋರ್ಡುಗಳಿಗೆ ಕೊಟ್ಟು ಆ ಮೂಲಕ ಆಯಾ ತಾಲ್ಲೂಕು ಬೋರ್ಡ್‌ನ ಏರಿಯಾದಲ್ಲಿ ಬರುವ ಕೆರೆಗಳನ್ನು ರಿಪೇರಿ ಮಾಡಿಸಬೇಕೆಂಬುದನ್ನು ನಮ್ಮ ಯೋಜನೆಯಲ್ಲಿಯೇ ಅಳವಡಿಸಿಕೊಂಡಿದ್ದೇವೆ.

ಶ್ರೀಮಾನ್ ರಾಜುಗೌಡರವರು ಪರ್ಕ್ಯುಲೇಸನ್ ಟ್ಯಾಂಕ್ಸ್‌ನ್ನು ಮಾಡಬೇಕೆಂದು ಹೇಳಿದ್ದಾರೆ. ನಮ್ಮ ರಾಜ್ಯದ ಉತ್ತರ ಕರ್ನಾಟಕದ ಭಾಗದಲ್ಲಿ ಈ ರೀತಿಯ ಪರ್ಕ್ಯುಲೇಸನ್ ಟ್ಯಾಂಕ್ಸ್‌ಗಳಿಂದ ಬಹಳ ಪ್ರಧಾನವಾಗಿ ಉಪಯೋಗವನ್ನು ಪಡೆಯುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಮೂಲಕ ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀಮಾನ್ ಎಂ. ಸಿ. ಬಸಪ್ಪನವರು ನನ್ನ ಮೇಲೆ ಒಂದು ಆಪಾದನೆಯನ್ನು ಮಾಡಿದರು. ಅವರ ಕ್ಷೇತ್ರದಲ್ಲಿ ನಡೆದಂತಹ ಒಂದು ಕಾರ್ಯಕ್ರಮಕ್ಕೆ ನಾನು ಹೋಗಿದ್ದಾಗ ಅವರನ್ನು ಕರೆಯಲಿಲ್ಲ ಎಂಬುದು ಅವರ ಆಪಾದನೆ. ಕರೆಯಬಾರದು ಎಂಬುದು ನನ್ನ ಉದ್ದೇಶ ಅಲ್ಲ. ಅಧಿಕಾರಿಗಳು ಶ್ರೀಮಾನ್ ಬಸಪ್ಪನವನ್ನು ಕೇಳಿದರು, ಆದರೆ ದುರಾದೃಷ್ಟವಶಾತ್ ಅವರಿಗೆ ಈ ಕಾರ್ಯಕ್ರಮ ಕಾಲ ಹೊಂದಾಣಿಕೆಯಾಗಲಿಲ್ಲ ಎಂಬಂದಾಗಿ ನನಗೆ ವರದಿ ಬಂದಿದೆ. ನಾನು ಅಲ್ಲಿಗೆ ಹೋದಾಗ ವಿಚಾರ ತಿಳಿದು ಮಾನ್ಯ ಬಸಪ್ಪನವರು ಬಾರದೆ ಇದ್ದುದರಿಂದ ನನ್ನ ಮನಸ್ಸಿಗೂ ನೋವಾಯಿತು.

ಶ್ರೀ ಎಂ. ಸಿ. ಬಸಪ್ಪ.—ಇದು ಸತ್ಯಕ್ಕೆ ದೂರವಾದ ಹೇಳಿಕೆಯೆಂದು ಮಾತ್ರ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಅಲ್ಲಿಗೆ ಹೋದದ್ದರಿಂದ ಆ ಕೆಲಸ ನಾವು ನಿರೀಕ್ಷಣೆ ಮಾಡಿದ್ದಕ್ಕಿಂತ ೩–೪ ತಿಂಗಳು ಬೇಗ ಆಗುವುದಕ್ಕೆ ಸಾಧ್ಯವಾಯಿತು. ಇದರಿಂದ ನನಗೇನೂ ಲಾಭವಾಗಲಿಲ್ಲ. ಶ್ರೀಮಾನ್ ಬಸಪ್ಪನವರ ಕ್ಷೇತ್ರಕ್ಕೇ ಲಾಭವಾಯಿತು. ಇದನ್ನು ತಾವು ಅನ್ಯಥಾ ಭಾವಿಸಬಾರದು.

ಹಾಗೂ ನಮ್ಮ ಉತ್ತರ ಕರ್ನಾಟಕ ಏರಿಯಾದ ಶ್ರೀಮಾನ್ ಕವಿಶೆಟ್ಟಿಯವರ ಭಾಗದಲ್ಲಿ ನಾನು ಹೋಗಿದ್ದಾಗ ಒಂದು ಕೆರೆಯ ಉದ್ಘಾಟನಾ ಸಮಾರಂಭಕ್ಕೆ ಅವರನ್ನು ಪ್ರತ್ಯಕ್ಷವಾಗಿ ಕರೆಸಿ ಆ ಉದ್ಘಾಟನಾ ಸಮಾರಂಭವನ್ನು ಮಾಡಿಸಿ ಬಂದಿದ್ದೇನೆ.

ಶ್ರೀ ಜಿ. ಎಸ್. ಶಿವರುದ್ರಪ್ಪನವರು ಗುಂಡ್ಲುಪೇಟೆಯ ಅನೇಕ ಕಾಮಗಾರಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ತಾವು ಹೇಳಿದ ಎಲ್ಲ ಕಾಮಗಾರಿಗಳ ಬಗ್ಗೆಯೂ ಸರ್ಕಾರ ಗಮನಹರಿಸುತ್ತದೆ ಎಂಬುದಾಗಿ ತಿಳಿಸುತ್ತಿದ್ದೇನೆ.

ಶ್ರೀಮಾನ್ ಚೌಡಯ್ಯನವರು ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ. ಕಾರಣ ಅವರೇ ಸ್ವತಃ ರೈತರಾಗಿರುವುದರಿಂದ ಈ ಒಂದು ನೀರಾವರಿಯ ಬಗ್ಗೆ ಇರತಕ್ಕಂತಹ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಅದಕ್ಕಾಗಿ ವಿಶೇಷವಾಗಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನಾವು ತಯಾರು ಮಾಡಿರತಕ್ಕಂತಹ ಎ. ಬಿ. ಸಿ. ಪಟ್ಟಿ ಏನಿದೆ ಅದರಲ್ಲಿ ಎಲ್ಲಾ ಜಿಲ್ಲೆಯ ಹಾಗೂ ಎಲ್ಲಾ ತಾಲ್ಲೂಕುಗಳನ್ನೂ ಅಳವಡಿಸುವುದಕ್ಕೆ ಅನುಕೂಲವಾಗಿದೆ. ಆ ರೀತಿ ಆ ಪಟ್ಟಿಯನ್ನು ತಯಾರು ಮಾಡಿದ್ದೇವೆ. ಆ ಪಟ್ಟಿಯನ್ನು ತಯಾರು ಮಾಡಿದ ಮೇಲೆ ಅದನ್ನು ನೋಡಿದ ಅನೇಕ ಸದಸ್ಯರು ನಮಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಏತಕ್ಕೆಂದರೆ ಇದರಲ್ಲಿ ಪ್ರತಿಯೊಂದು ಕ್ಷೇತ್ರವನ್ನು ಒಂದಲ್ಲ ಒಂದು ರೀತಿಯಲ್ಲಿ ಅಳವಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎನ್ನುವ ಮಾತನ್ನು ಶ್ರೀಮಾನ್ ಚೌಡಯ್ಯನವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ೫, ೧೦, ೧೫, ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಹೀಗೆ ಮಾಡಿದರೆ ಎಷ್ಟು ವರ್ಷಕ್ಕೆ ಈ ಎಲ್ಲ ಕೆಲಸಗಳನ್ನು ಮಾಡುತ್ತೀರಿ ಎಂಬುದಾಗಿ ಹೇಳಿದ್ದಾರೆ, ನಾವು ಈಗ ಒದಗಿಸಿರತಕ್ಕಂತಹ ಹಣ ಮೊದಲು ಪ್ರಾರಂಭ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಒದಗಿಸಿದ್ದೇವೆ. ಎಲ್ಲ ಹಣವನ್ನು ಅಂದರೆ ನನ್ನ ಇಲಾಖೆಗೆ ಈ ಸದನ ಒಪ್ಪಿಗೆ ಕೊಡತಕ್ಕಂತಹ ಎಲ್ಲ ಹಣವನ್ನು ಒಂದೇ ಇಟ್ಟರೆ ಅಷ್ಟು ಹಣವನ್ನು ಒಂದೇ ಸಾರಿ ಖರ್ಚು ಮಾಡುವುದಕ್ಕಾಗುವುದಿಲ್ಲ, ನಾನು ನಿಂದನೆಗೆ ಗುರಿಯಾಗಬೇಕಾಗುತ್ತದೆ. ಮೊದಲು ಪ್ರಾರಂಭ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನೂ ಮಾತ್ರ ಒದಗಿಸಿದ್ದೇವೆ.

ಶ್ರೀಮಾನ್ ಬಸವರಾಜ ಪಾಟೀಲ್‌ರವರು ಲ್ಯಾಂಡ್ ಅಕ್ವಿಜಿಷನ್ ವಿಚಾರದಲ್ಲಿ ಬಹಳ ದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲಲ್ಲಿ ಇಂತಹ ತೊಂದರೆಗಳಾಗಿವೆ, ಅವುಗಳನ್ನು ಪರಿಹರಿಸುವುದಕ್ಕೆ ಸೂಕ್ತ ಆದೇಶವನ್ನು ಕೊಡುತ್ತೇನೆ.

ಮತ್ತೆ ಶ್ರೀಮಾನ್ ಜಯದೇವರಾಜ ಅರಸುರವರು ಕೃಷ್ಣರಾಜಸಾಗರದಲ್ಲಿ ಮುಳುಗಡೆಯಾದ ಜನರಿಗೆ ಪುನರ್‌ವಸತಿ ಮಾಡಿರುವ ಕಡೆ ಏತ ನೀರಾವರಿ ಯೋಜನೆಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ಬೇಕಾಗಿರತಕ್ಕಂತಹ ಹಣ ಎಷ್ಟು ? ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮಾನ್ ಆರ್ಮುಗಂರವರು ಮಾತನಾಡುತ್ತಾ ವಿಶೇಷವಾಗಿ ಕೆರೆಗಳ ಹೂಳನ್ನು ತೆಗೆಸತಕ್ಕಂತಹ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ಕಳೆದ ವರ್ಷ ೨೬ ಕೆರೆಗಳಲ್ಲಿ ಹೂಳನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಸಾರಿ ವಿಶೇಷವಾಗಿ ಹೂಳು ತೆಗೆಸುವ ಕೆಲಸವನ್ನು ತೆಗೆದುಕೊಳ್ಳಬೇಕೆಂಬುದನ್ನು ನಮ್ಮ ಗಮನದಲ್ಲಿಟ್ಟುಕೊಂಡಿದ್ದೇವೆ. ಜೊತೆಗೆ ಎಂಪ್ಲಾಯ್‌ಮೆಂಟ್ ಅಫರ್ಮೇಟಿವ್ ಸ್ಕೀಂನಿಂದ ಬಂದಿರತಕ್ಕಂತಹ ಹಣವನ್ನು ವಿಶೇಷವಾಗಿ ಕೆರೆಗಳಲ್ಲಿ ಹೂಳು ತೆಗೆಸುವುದಕ್ಕಾಗಿ ಪೂರ್ತಿ ಉಪಯೋಗಿಸಬೇಕೆಂಬುದೇ ನಮ್ಮ ಉದ್ದೇಶ.

ಇನ್ನೊಂದು ಉತ್ತಮವಾಗಿ ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಕಮ್ಯುನಿಟಿ ಇರಿಗೇಷನ್ ಬಗ್ಗೆ ಹೇಳಿದ್ದಾರೆ. ಕಮ್ಯುನಿಟಿ ಇರಿಗೇಷನ್ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಬೇಕೆಂದಿದ್ದೇವೆ. ಇದಕ್ಕಾಗಿ ಮೊದಲು ಕಾರ್ಪೊರೇಷನ್ ರಚನೆಯಾಗಬೇಕಾಗುತ್ತದೆ. ಮೂಲ ಬಂಡವಾಳವನ್ನು ರಾಜ್ಯ ಸರ್ಕಾರದವರು ಒದಗಿಸಿ, ಜೊತೆಗೆ ಇನ್ಸ್ಟಿಟ್ಯೂಷನ್ ಫೈನಾನ್ಸ್ ಅಸಿಸ್ಟೆಂಸ್‌ನ್ನು ತೆಗೆದುಕೊಳ್ಳಬೇಕು. ಮತ್ತೆ ಕೇಂದ್ರಸರ್ಕಾರದವರು ಕೊಡತಕ್ಕಂತಹ ಹಣದಲ್ಲಿ ೫೦ ಭಾಗ ಸಹಾಯಧನವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕಾಗಿ ಶಾಸನಬದ್ಧವಾಗಿರುವಂತಹ ಕಾರ್ಪೊರೇಷನ್ ಇಲ್ಲದಿದ್ದರೆ ಸೀಡ್ ಕ್ಯಾಪಿಟಲ್‌ನ್ನು ಕೊಡುವುದಕ್ಕೂ ಕಷ್ಟವಾಗುತ್ತದೆ, ಹಾಗೂ ಇನ್‌ಸ್ಟಿಟ್ಯೂಷನ್‌ನಿಂದ ಹಣದ ಸಹಾಯವನ್ನು ತೆಗೆದುಕೊಳ್ಳುವುದಕ್ಕೂ ಕಷ್ಟವಾಗುತ್ತದೆ.

ಆದುದರಿಂದ ಶಾಸನಬದ್ಧವಾದಂಥಾ ಒಂದೆರಡು ಕಾರ್ಪೊರೇಷನ್‌ಗಳನ್ನು ರಚನೆ ಮಾಡಿ ಅದಕ್ಕೆ ಕೇಂದ್ರದ ಸಹಾಯವನ್ನೂ ಸಹ ಪಡೆದು, ಭೂಮಿಯ ಕೆಳಭಾಗದಲ್ಲಿರತಕ್ಕಂಥಾ ನೀರನ್ನು ಮೇಲಕ್ಕೆತ್ತಿ ವ್ಯವಸಾಯಕ್ಕೆ ಉಪಯೋಗಿಸತಕ್ಕಂಥಾ ಒಂದು ವಿಶೇಷ ಯೋಜನೆಯನ್ನು ಮಾಡಬೇಕೆನ್ನುವ ಆಸಕ್ತಿ ನಮಗೆ ಇದೆ. ತಮಗೆ ಹೇಳಬೇಕಾದರೆ ಚಿತ್ರದುರ್ಗ ಡಿಸ್ಟ್ರಿಕ್ಟ್‌ನ ಚಳ್ಳಕೆರೆ ತಾಲ್ಲೂಕಿನಲ್ಲಿರುವ ಬಸವನಾಳ ಹತ್ತಿರ ಒಂದು ಕಡೆ ಈ ಕಮ್ಯೂನಿಟಿ ಇರ್ರಿಗೇಷನ್‌ಗೆ ಸಂಬಂಧಪಟ್ಟಂತೆ ಅಲ್ಲಿ ಒಂದು ಬೋರ್‌ವೆಲ್ ಹಾಕಿದಾಗ ಅಲ್ಲಿ ಸಾಕಷ್ಟು ನೀರು ಸುಮಾರು ೩೧,೧೫೬ ಗ್ಯಾಲನ್ ಅಷ್ಟು ನೀರು ಬಂದಿದೆ. ಇದರಿಂದ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಅಂತರ್‌ಜಲನಿಧಿ ಇದೆ ಅನ್ನುವುದನ್ನು ಭೂಗರ್ಭ ಇಲಾಖೆಯವರು ಕಂಡುಹಿಡಿದು ಇದರ ಬಗ್ಗೆ ತಕ್ಷಣವೇ ಕಾರ್ಯಕ್ರಮ ತೆಗೆದುಕೊಳ್ಳಬೇಕು ಅಂತ ಯೋಚಿಸಿದ್ದಾರೆ. ಈ ಒಂದು ಯೋಜನೆ ಪ್ರಕಾರ ಮಾರ್ಜಿನಲ್ ಫಾರ್ಮರ್ಸ್‌ಗೆ ಮತ್ತು ಚಿಕ್ಕ ಹಿಡುವಳಿದಾರರಿಗೆ ಸುಮಾರು ೨½ ಎಕರೆ ಅಥವಾ ೫ ಎಕರೆ ಒಳಪಟ್ಟು ಇರತಕ್ಕಂಥಾ ಭೂಮಾಲೀಕರು ಏನು ಇದ್ದಾರೆ ಅವರಿಗೆ ಇದರಿಂದ ವಿಶೇಷ ಸಹಾಯವಾಗುತ್ತದೆ. ಈ ಒಂದು ದೃಷ್ಟಿಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಸಾಧ್ಯವಾದಷ್ಟು ಬೇಗನೆ ನಾವು ಕಾರ್ಪೊರೇಷನ್ ಅನ್ನು ರಚನೆ ಮಾಡತಕ್ಕಂಥಾ ಪ್ರಯತ್ನದ ಪ್ರಯೋಗವನ್ನು ಮಾಡುತ್ತಿದ್ದೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಅಬ್ದುಲ್ ಲತೀಫ್‌ರವರು ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮಳೆ ಕಡಿಮೆ ಬೀಳುವುದರಿಂದ ಅಲ್ಲಿ ಸಣ್ಣ ನೀರಾವರಿಗೆ ವಿಶೇಷ ಆಸಕ್ತಿ ವಹಿಸಬೇಕೆಂದು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಮತ್ತು ಇತರೇ ಜಿಲ್ಲೆಯವರಿಗೂ ಕೂಡ ಏನು ಒಂದು ನೀರಾವರಿ ಕಾಮಗಾರಿ ಆಗಬೇಕು ಅದನ್ನೂ ಸಹ ಗಮನದಲ್ಲಿಟ್ಟುಕೊಂಡು ಶೇಕಡಾವಾರು ಎಷ್ಟು ಮಾಡಬೇಕು ಅನ್ನುವುದನ್ನೂ ಸಹ ಗಮನದಲ್ಲಿಟ್ಟುಕೊಳ್ಳುತ್ತೇವೆ. ಈ ಬಗ್ಗೆ (ಸಿ) ಪಟ್ಟಿ ಅನ್ನು ತಯಾರು ಮಾಡುವಾಗ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆ ಎಂದು ಹೇಳಬಯಸುತ್ತೇನೆ.

ಇನ್ನು ಶ್ರೀಮಾನ್ ಚಂದ್ರಶೇಖರ್‌ರವರು ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ ಮಾಡಬೇಕು ಎಂದು ಹೇಳಿದ್ದಾರೆ. ಅದರಲ್ಲಿ ಮೂರು ಯೋಜನೆಗಳನ್ನು ನಾವು ಈಗಾಗಲೇ ತಯಾರು ಮಾಡಿದ್ದೇವೆ. ಈಗ ಬೆಳಂದೂರು ಅನ್ನುವ ಯೋಜನೆಗೆ ತಾಂತ್ರಿಕ ಯೋಜನೆ ಸಿದ್ಧವಾಗಿದೆ. ಅದರ ಕಾರ್ಯವನ್ನು ಆದಷ್ಟು ಬೇಗ ಆರಂಭ ಮಾಡುವುದರಲ್ಲಿದ್ದೇವೆ. ಮತ್ತು ಆ ಯೋಜನೆಯನ್ನು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಶ್ರೀಮಾನ್ ಗಂಗಣ್ಣನವರು ಭೂಸ್ವಾಧೀನ ಬಗ್ಗೆ ಇರತಕ್ಕಂಥಾ ತೊಂದರೆಗಳನ್ನು ಹೇಳಿದರು. ಆ ಬಗ್ಗೆ ಪರಿಹರಿಸುವುದಕ್ಕೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅವರಿಗೆ ಯಾವರೀತಿ ತೊಂದರೆ ಇದೆ, ಏನು ತೊಂದರೆ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಅದನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಕೊನೆಯದಾಗಿ ಈ ಸಣ್ಣ ನೀರಾವರಿ ಯೋಜನೆಗೆ ಕೆರೆಗಳು ಏನು ಇವೆ ಅದರಲ್ಲೂ ಕೂಡ ಜೀವಂತ ಕೆರೆಗಳು ಅಂದರೆ ಸದಾ ನೀರು ಇರತಕ್ಕಂಥಾ ಕೆರೆಗಳು ಏನು ಇವೆ ಆ ಕೆರೆಗಳಲ್ಲೂ ಮತ್ಸ್ಯಾಭಿವೃದ್ಧಿ ಕಾರ್ಯಕ್ರಮದಿಂದ ಅದರಿಂದ ಬರತಕ್ಕಂಥಾ ಉತ್ಪತ್ತಿ ಏನು ಇವೆ ಅದರಲ್ಲಿ ಕೆಲವು ಭಾಗವನ್ನು ಆ ಭಾಗದ ಸಣ್ಣ ನೀರಾವರಿ ಯೋಜನೆಗೆ. ಅಲ್ಲಿಯ ಕಾಮಗಾರಿಗಳನ್ನು ತೆಗೆದುಕೊಳ್ಳುವ ಹಾಗೆ ಮಾಡಬೇಕೆನ್ನುವ ಉದ್ದೇಶದಿಂದ ಈ ಯೋಜನೆಯಲ್ಲಿ ಅಳವಡಿಸಬೇಕು ಎನ್ನುವುದನ್ನು ನಾನು ನನ್ನ ಮನಸ್ಸಿಲ್ಲಿಟ್ಟುಕೊಂಡಿದ್ದೇನೆ. ಈ ಸದನದಲ್ಲಿ ಬಹುಶಃ ನಾನು ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದಂಥಾ ಅಂಶಗಳಿಗೂ ಕೂಡ ಸಾಧ್ಯವಾದ ಮಟ್ಟಿಗೆ ಉತ್ತರಿಸುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ಕೂಡ ನನ್ನ ಈ ಬೇಡಿಕೆಗಳಿಗೆ ಈ ಸದನದ ಒಪ್ಪಿಗೆ ಕೊಡಬೇಕು ಎಂದು ಪ್ರಾರ್ಥನೆಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಬಿ ಜಕನೂರು. — (ನಿಯಂತ್ರಿತ ಮಾರುಕಟ್ಟೆ ಶಾಖೆಯ ರಾಜ್ಯ ಮಂತ್ರಿಗಳು) ಸ ನ್ಮಾನ್ಯ ಅಧ್ಯಕ್ಷರೇ, ಈ ಜೈಲುಗಳ ಬೇಡಿಕೆ ಚರ್ಚೆಯ ಮೇಲೆ ನಾಲ್ಕು ಮಾತುಗಳನ್ನಾಡುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥಾ ಜೈಲುಗಳಪರಿಸ್ಥಿತಿ ಏನು ಇವೆ ಅದು ಬಹಳ ಉತ್ತಮವಾಗಿದೆ ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದ್ದಾರೆ. ಅದಕ್ಕಾಗಿ ನಾನು ತುಂಬಾ ಸಂತೋಷ ಪಡು

ತ್ತೇನೆ. ನಮ್ಮ ರಾಜ್ಯದಲ್ಲಿ ೪ ಸೆಂಟ್ರಲ್ ಜೈಲುಗಳು ಇವೆ. ಮೈಸೂರು ಮತ್ತು ಬಿಜಾಪುರದಲ್ಲಿ ಕ್ಲಾಸ್ ಒನ್ ಡಿಸ್ಟ್ರಿಕ್ಟ್ ಪ್ರಿಸನ್ಸ್ ಇದೆ. ಇದಲ್ಲದೆ ಡಿಸ್ಟ್ರಿಕ್ಟ್ ಪ್ರಿಸನ್ಸ್‌ಗಳು ಮಂಗಳೂರು, ಮಡಕೇರಿ, ಶಿವಮೊಗ್ಗಾ ಇತ್ಯಾದಿ ಕಡೆಗಳಲ್ಲಿ ಇವೆ. ಇದಲ್ಲದೆ ಬೋರ್ಸ್ಟಲ್ ಸ್ಕೂಲ್ಸ್ ಸಹ ಧಾರವಾಡ ಜಿಲ್ಲೆಗಳಲ್ಲಿ ಇದೆ. ಈ ಎಲ್ಲಾ ಜೈಲುಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವಾಗ ಅಲ್ಲಿ ಊಟದ ವ್ಯವಸ್ಥೆ ಸರಿಯಾಗಿಲ್ಲ ಅನ್ನುವ ಮಾತನ್ನು ಹೇಳಿದರು ಮತ್ತು ಇದರಲ್ಲಿ ಅಂದರೆ ಬೋರ್ಸ್ಟಲ್ ಸ್ಕೂಲ್ಸ್‌ಗಳಲ್ಲಿರುವ ಹುಡುಗರನ್ನು ರಿಫರ್ಮೇಟಿವ್ ಶಾಲೆಗಳಿಗೆ ಕಳುಹಿಸಬೇಕು. ಅಂಥಾ ಯಾವ ಒಂದು ವ್ಯವಸ್ಥೆಯನ್ನು ಸರಿಯಾಗಿ ಮಾಡಿಲ್ಲಾ ಅಂತ ಹೇಳಿದುದಲ್ಲದೆ ಇನ್ನೂ ವಗೈರೆ ವಗೈರೆ ವಿಷಯಗಳನ್ನೆಲ್ಲಾ ಈ ಸಭೆಯ ಗಮನಕ್ಕೆ ತಂದರು. ಅದರ ಬಗ್ಗೆ ನಾನೂ ಬಹಳ ಸಂತೋಷದಿಂದ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಜೈಲುಗಳಲ್ಲಿ ಮಾಡುತ್ತಾ ಇರುವ ಊಟದ ವ್ಯವಸ್ಥೆ ಏನು ಇದೆ ಅದು ಮಿಕ್ಕೆಲ್ಲ ರಾಜ್ಯಗಳಿಗಿಂತ ಬಹಳ ಚೆನ್ನಾಗಿದೆ ಎಂದು ಹೇಳುತ್ತೇನೆ. ಇಲ್ಲಿ ಇರುವ ಊಟದ ವ್ಯವಸ್ಥೆಯನ್ನು ನೋಡಿದರೆ ಚನ್ನಾಗಿ ವ್ಯವಸ್ಥೆ ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ನಾನೂ ಸಹ ಈ ಬಗ್ಗೆ ಸರಿಯಾಗಿ ಚೆಕ್ ಮಾಡುತ್ತಿದ್ದೇನೆ, ಅವರಿಗೆಲ್ಲಾ ಸರಿಯಾಗಿ ಊಟ ಸಿಗುತ್ತದೋ ಇಲ್ಲವೋ ಎಂದು ಮೇಲಿಂದ ಮೇಲೆ ಹೋಗಿ ನೋಡಿ ಚೆಕ್ ಮಾಡುತ್ತಿದ್ದೇನೆ. ಅಲ್ಲದೆ ನಾನು ಟೂರ್ ಹೋದಾಗಲೂ ಸಹ ಒಂದೊಂದು ಕಡೆ ಸರ್‌ಪ್ರೈಸ್ ವಿಸಿಟ್ ಕೊಟ್ಟು ಅಲ್ಲಿ ಏನಾದರೂ ಸರಿಯಾಗಿ ಊಟದ ವ್ಯವಸ್ಥೆ ಮಾಡಿದ್ದಾರೆಯೋ ಇಲ್ಲವೋ ಎನ್ನುವುದನ್ನು ನೋಡುತ್ತಿದ್ದೇನೆ ಮತ್ತು ಅವರು ಹಾಕತಕ್ಕಂಥಾ ಅಕ್ಕಿಯಲ್ಲಿ ಕಲ್ಲು ವಗೈರೆ ಏನಾದರೂ ಮಿಶ್ರಣ ಸೇರಿದೆಯೋ ಇಲ್ಲವೋ ಅನ್ನುವುದನ್ನು ಸಹ ಚೆಕ್ ಮಾಡಿ ನೋಡಿದ್ದರಲ್ಲಿ ಎಲ್ಲೂ ಆ ರೀತಿ ಕಂಡು ಬಂದಿಲ್ಲಾ ಅಲ್ಲದೇ ನಾನೂ ಕೂಡ ಈ ಬಗ್ಗೆ ಕಾಲಕಾಲಕ್ಕೆ ಆದೇಶ ಕೊಡುತ್ತಾ ಬಂದಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.—ನೀವು ಯಾವತ್ತಾದರೂ ಜೈಲಿಗೆ ಹೋಗಿದ್ದಿರಾ ? ನಾವು ರಾಜಕೀಯದಲ್ಲಿ ಹೋದ ಹಾಗೆ ನೀವು ಎಂದಾದರೂ ಕೂಡ ಜೈಲಿಗೆ ಹೋಗಿದ್ದೀರಾ ?

ಶ್ರೀ ಎ.ಬಿ. ಜಕನೂರು.—ನಾನೂ ನಿಮ್ಮ ಹಾಗೆ ಯಾವತ್ತೂ ಕೂಡ ಆ ಜೈಲಿನಲ್ಲಿ ವಾಸ ಮಾಡಲಿಕ್ಕೆ ಹೋಗಿಲ್ಲಾ. ನಾನು ಅದನ್ನು ನೋಡುವುದಕ್ಕೆ ಈಗ ಹೋಗುತ್ತಾ ಇದ್ದೇನೆ. ಏತಕ್ಕೆಂದರೆ ಈಗ ನನಗೆ ಇದರ ಬಗ್ಗೆ ಜವಾಬ್ದಾರಿ ಬಿದ್ದಿರುವುದರಿಂದ ಅಲ್ಲಿ ವ್ಯವಸ್ಥೆ ಹೇಗೆ ಮಾಡಿದ್ದಾರೆ, ಯಾವ ರೀತಿ ಮಾಡಿದ್ದಾರೆ ಅನ್ನುವುದನ್ನು ನೋಡುವುದಕ್ಕೆ ಹೋಗುತ್ತಾ ಇದ್ದೇನೆ ಮತ್ತು ಅಲ್ಲಿ ಊಟದ ವ್ಯವಸ್ಥೆಯನ್ನೂ ಸಹಾ ಸರಿಯಾಗಿ ವ್ಯವಸ್ಥಿತವಾಗಿ ಮಾಡಿಸುತ್ತಾ ಇದ್ದೇನೆ.

ಇನ್ನು ನಮ್ಮ ಜೈಲಿನ ಒಂದು ಸುಧಾರಣೆ ಬಗ್ಗೆ ಹೇಳಬೇಕಾದರೆ ೩–೪ ವರ್ಷದಲ್ಲಿ ಜೈಲಿನಲ್ಲಿ ಈ ಬಗ್ಗೆ ಏನೂ ಒಂದು ಬಂದಿಗಳ ಸಂಖ್ಯೆ ಇತ್ತೋ ಈವೊತ್ತಿನ ದಿವಸ ನೋಡಿದರೆ ಮೊದಲಿಗಿಂತ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ ಎಂದು ಹೇಳುತ್ತೇನೆ. ವರ್ಷ ವರ್ಷಕ್ಕೂ ಅದು ಕಡಿಮೆಯಾಗುತ್ತಾ ಬಂದಿದೆ. ಅಪರಾಧಿಗಳ ಸಂಖ್ಯೆಯೂ ಕೂಡ ಕಡಿಮೆಯಾಗುತ್ತಾ ಇದೆ. ಈ ದೃಷ್ಟಿಯಿಂದ ನಾನೂ ಹೇಳುವುದು ಏನೆಂದರೆ ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿರುವ ಜೈಲು ಬಂದಿಗಳ ಸಂಖ್ಯೆ ಕಡಿಮೆಯಾಗಿದೆ ಅಷ್ಟೇ ಅಲ್ಲ ನಮ್ಮ ರಾಜ್ಯದಲ್ಲಿ ಈ ಬಗ್ಗೆ ಇರತಕ್ಕಂಥಾ ಕಾಯಿದೆ ಸುವ್ಯವಸ್ಥೆಯೂ ಕೂಡ ಚೆನ್ನಾಗಿದೆ ಎಂದು ಹೇಳುತ್ತೇನೆ. ಜೈಲುಗಳಲ್ಲಿರುವ ಸಂಖ್ಯೆ ಕಡಿಮೆಯಾಗಿದ್ದರೂ ಸಹ ಇನ್ನು ಕೆಲವು ತೊಂದರೆಗಳು ಇರುತ್ತವೆ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ ತಮಗೆ ಹೇಳಬೇಕಾದರೆ ಕೆಲವರು ಅಭ್ಯಾಸಬಲ ಗುನ್ಹೆಗಾರರು ಆಗಿರುತ್ತಾರೆ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ, ಕೆಲವರು ಆಸ್ತಿಪಾಸ್ತಿ ಜಗಳದಿಂದ ಬಂದಿರುತ್ತಾರೆ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ, ಕೆಲವರು ರಾಜಕೀಯದಲ್ಲಿ ಅಧಿಕಾರಕ್ಕೆ ಬರಬೇಕು ಅಂತ ಏನು ಜನ ಇದ್ದಾರೆ ಅವರು ಹತ್ತಾರು ಸಲ ಜೈಲಿಗೆ ಹೋಗಿ ಬರಬೇಕು ಅನ್ನುವ ಒಂದು ಇಚ್ಛೆ ಇಟ್ಟುಕೊಂಡಿರುತ್ತಾರೆ ಅಂಥಾವರನ್ನು ನಾವೇನೂ ಮಾಡುವುದಕ್ಕಾಗುವುದಿಲ್ಲ ; ಅದನ್ನು ನಾವು ಏನು ಮಾಡುವುದಕ್ಕೂ ಸಹ ಬರುವುದೂ ಇಲ್ಲ. ಆದರೆ ಜೈಲಿಗೆ ಬಂದಂಥವರೂ ಸಹ ಅವರೂ ಕೂಡ ಹ್ಯೂಮನ್ ಬೀಯಿಂಗ್ಸ್ ಅಂತ ತಿಳಿದುಕೊಂಡು ಅಂಥಾ ಜನರನ್ನು ಆದಷ್ಟು ಮಟ್ಟಿಗೆ ಸರಿಯಾಗಿ ನೋಡಿಕೊಳ್ಳಬೇಕು ಅನ್ನುವ ದೃಷ್ಟಿಯಿಂದ ನಾವು ಅಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳುತ್ತೇನೆ. ಇದಲ್ಲದೆ ಕೋರಮಂಗಲದಲ್ಲಿ ಒಂದು ಓಪನ್‌ಏರ್ ಜೈಲ್ ಸ್ಥಾಪನೆ ಮಾಡಬೇಕು ಎಂದು ಮಾಡಿದ್ದೇವೆ. ಅದಕ್ಕೆ ಈಗಾಗಲೇ ಸರ್ವೆ ಕೆಲಸ ಸಾಧಾರಣವಾಗಿ ನಡೆದಿದೆ. ಜೀವಾವಧಿ ಶಿಕ್ಷೆಗೆ ಒಳಪಡುವಂಥಾ ಜನರನ್ನು ಅಲ್ಲಿಗೆ ಕಳುಹಿಸಬೇಕು ಎಂದು ಮಾಡಿದ್ದೇವೆ. ಏತಕ್ಕೆಂದರೆ ಸಾಮಾನ್ಯವಾಗಿ ಇದರಲ್ಲಿ ಬರುವಂಥ ಜನರು ಹೆಚ್ಚಿಗೆ ವ್ಯವಸಾಯದಲ್ಲಿರತಕ್ಕಂಥಾವರೇ ಬರುವುದರಿಂದ ಅವರಿಗೆ ಆ ವ್ಯವ

ಸಾಯ ಕ್ಷೇತ್ರದಲ್ಲಿ ನೋಡಿಕೊಳ್ಳುವ ಒಂದು ವ್ಯವಸ್ಥೆ ಮಾಡಿದರೆ ಅವರು ಮುಂದೆ ಸುಧಾರಿಸಿಕೊಂಡು ತಮ್ಮ ಒಂದು ವೃತ್ತಿಯಲ್ಲಿ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎಂದು ನಾವು ಮಾಡಿದ್ದೇವೆ. ಅವರು ಜೈಲಿನಿಂದ ರಿಲೀಸ್ ಆದನಂತರ ವ್ಯವಸಾಯವನ್ನು ಮುಂದುವರಿಸಿಕೊಂಡು ಹೋಗಬಹುದು ಅಷ್ಟೇ ಅಲ್ಲ ಅವರು ಇನ್ನೊಬ್ಬರಿಗೂ ಸಹ ಸಹಾಯ ಮಾಡಬಹುದು ಎನ್ನುವ ದೃಷ್ಟಿಯಿಂದ ಈ ಬಗ್ಗೆ ವ್ಯವಸ್ಥೆ ಮಾಡಿದ್ದೇವೆ. ಈ ಒಂದು ಕೆಲಸ ಉತ್ತಮವಾದ ರೀತಿಯಲ್ಲಿ ನಡೆದಿದೆ. ಎಷ್ಟೋ ಜನ ಇಲ್ಲಿಗೆ ನೋಡುವುದಕ್ಕೆ ಬಂದು ತಮ್ಮ ಅಭಿಪ್ರಾಯವನ್ನು, ಇದು ಚೆನ್ನಾಗಿ ನಡೆಯುತ್ತಾ ಇದೆ ಎಂದು ಆ ವಿಸಿಟರ್ಸ್ ಬುಕ್‌ನಲ್ಲಿ ಬರೆದು ಹೋಗಿದ್ದಾರೆ.

ಇನ್ನು ಈ ಅಂಡರ್ ಟ್ರಯಲ್ ಪ್ರಿಸನರ್ಸ್ ಏನು ಇದ್ದಾರೆ ಅವರು ಮತ್ತು ಕನ್‌ವಿಕ್ಟ್ ಆಗಿರುವವರು ಏನು ಇದ್ದಾರೆ ಅವರು ಒಟ್ಟಿಗೆ ಇರಬಾರದು ಬೇರೆ ಬೇರೆ ಇರಬೇಕು ಅನ್ನುವ ಉದ್ದೇಶ ಕೇಂದ್ರ ಸರ್ಕಾರದ್ದೂ ಇದೆ. ಅಪರಾಧಿಗಳ ಸಲುವಾಗಿ ಬೆಂಗಳೂರಿನಿಂದ ಹೊರಗೆ ಬಂದು ಜೈಲು ಕಟ್ಟಿಸುವವರಿದ್ದೇವೆ ಮತ್ತು ಅಂಡರ್ ಟ್ರಯಲ್ ಪ್ರಿಸನರ್ಸ್ ಅವರಿಗಾಗಿ ಒಂದು ಪ್ರತ್ಯೇಕ ಜೈಲನ್ನು ಕಟ್ಟಿಸುವ ಸಂಕಲ್ಪ ಮಾಡಿದ್ದೇವೆ. ಈಗಾಗಲೇ ಅಪರಾಧಿಗಳ ಸಲುವಾಗಿ ಕಟ್ಟಿಸಲ್ಪಡುವ ಜೇಲದ ಏರಿಯಾದಲ್ಲಿ ರಸ್ತೆ ಮಾಡಿಸುವ ಕೆಲಸ ನಡೆದಿದೆ.

೧-೦೦ ಪಿ.ಎಂ.

ಇನ್ನು ಅಂಡರ್ ಟ್ರಯಲ್ಸ್ ಬಗ್ಗೆ ನಾವು ಜೈಲು ಕಟ್ಟಿಸುವುದಕ್ಕೋಸ್ಕರ ಗಂಗೇನಹಳ್ಳಿಯಲ್ಲಿ ಬಿಡಿಎ ಅವರನ್ನು ಈಗಾಗಲೇ ಜಮೀನನ್ನು ಕೇಳಿದ್ದೇವೆ. ಅಲ್ಲಿ ಸ್ಥಳ ಸಿಕ್ಕನಂತರ ಇದರ ಬಗ್ಗೆ ನಾವು ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಇದಲ್ಲದೆ ಬೇರೆ ವಿಷಯಗಳನ್ನೂ ಸಹ ನಾವು ನಮ್ಮ ವರದಿಯಲ್ಲಿ ಕೊಟ್ಟಿದ್ದೇವೆ. ಅವರಿಗೆ ಕೊಡತಕ್ಕ ವೇತನದ ಬಗ್ಗೆ, ಪ್ರೊಫೆಷನಲ್ ಗೈಡೆನ್ಸ್ ಬಗ್ಗೆ, ಶಿಕ್ಷಣದ ಬಗ್ಗೆ ಫೆರೋಲ್ ಬಗೆ, ಪಂಚಿಂಗ್ ಸಿಸ್ಟಂ ಬಗ್ಗೆ ಮತ್ತು ಇತರ ರಿಫಾರ್ಮೆಟರಿ ಮೆಷರ್ಸ್ ಬಗ್ಗೆ ನಾವು ಹೇಳಿದ್ದೇವೆ. ಇಂಥ ಸುಧಾರಿತ ಸ್ಕೀಂಗಳನ್ನು ತೆಗೆದುಕೊಳ್ಳುವುದರಲ್ಲಿ ನಾವು ಯಾವಾಗಲೂ ಹಿಂದೆ ಬಿದ್ದಿಲ್ಲ. ನಾವು ಈ ದಿಸೆಯಲ್ಲಿ ಬಹಳ ಉತ್ತಮ ರೀತಿಯಿಂದ ಕೆಲಸ ಮಾಡುತ್ತಿದ್ದೇವೆ. ಜೈಲಿನಲ್ಲಿರತಕ್ಕ ಕೆಲವು ಅಪರಾಧಿಗಳು ಬಿ.ಎ. ಓದುತ್ತಿದ್ದಾರೆ ಮತ್ತೊಬ್ಬರು ಎಲ್.ಎಲ್.ಬಿ ಮಾಡುತ್ತಿದ್ದಾರೆ. ಇವರು ಕಾಲೇಜಿಗೆ ಫ್ರೀ ಆಗಿ ಹೋಗಿ ಬರುತ್ತಿದ್ದಾರೆ. ಅಲ್ಲಿ ನಾವು ಇನ್ನೂ ಹೆಚ್ಚಿನ ಶಿಕ್ಷಣ ಅವರು ಪಡೆಯಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅವರ ಆಟಪಾಠಗಳಿಗೆ ವ್ಯವಸ್ಥೆ ಮಾಡಿದ್ದೇವೆ. ರೀಡಿಂಗ್ ರೂಂ ವಗೈರೆ ವ್ಯವಸ್ಥೆಯನ್ನು ಮಾಡಿರುವುದನ್ನು ಮಾನ್ಯ ಸದಸ್ಯರುಗಳು ಕಾಣಬಹುದು. ಅಪರಾಧಿಗಳಿಗೆ ನಾವು ಜೇಲಿನಲ್ಲಿ ಸಿನಿಮಾ ಸಹ ಒಮ್ಮೊಮ್ಮೆ ತೋರಿಸುತ್ತೇವೆ. ಇದಕ್ಕಿಂತಲೂ ಹೆಚ್ಚಾಗಿ ಜೈಲಿನಲ್ಲಿ ಇನ್ನೂ ಉತ್ತಮ ಸ್ಥಿತಿಯನ್ನು ನಾವು ಏರ್ಪಡಿಸುವುದು ಒಳ್ಳೆಯದೇ ಎನ್ನುವುದನ್ನು ನಾವೆಲ್ಲರೂ ವಿಚಾರ ಮಾಡತಕ್ಕದ್ದು ಮಹತ್ವದ್ದು ಇದೆ. ನಮ್ಮ ಜೈಲುಗಳಲ್ಲಿ ೫ ಸ್ಟಾರ್ ಹೋಟೆಲ್ ತರಹ ವ್ಯವಸ್ಥೆ ಮಾಡಿದರೆ ಹೊರಗಡೆ ಇರುವವರೂ ಸಹ ಜೈಲಿಗೆ ಬರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದಕ್ಕೆ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದು ಏನೆಂದರೆ, ಜೈಲಿಗೆ ಹೋದವರಿಗೆ ನಾನು ತಪ್ಪು ಮಾಡಿ ಇಲ್ಲಿಗೆ ಬಂದಿದ್ದೇನೆ ಎನ್ನುವುದು ಮನಸ್ಸಿಗೆ ಪಿಂಚ್ ಆಗಬೇಕು ಇಲ್ಲದೇ ಹೋದರೆ ಯಾರಾದರೂ ಅಲ್ಲಿಗೆ ಹೋಗಲಿಕ್ಕೆ ಪ್ರಯತ್ನ ಮಾಡಬಹುದು. ಈಗ ಇರುವಂಥ ವ್ಯವಸ್ಥೆಗಿಂತ ಇನ್ನೂ ಉತ್ತಮ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲ. ಜೈಲು ಎಂದರೆ ಜೈಲು ಆಗಿರಬೇಕು.

SRI C.M. ARMUGHAM.--This is the first time that I am hearing the definition of the jail- 'jail means jail'.

SRI A.B. JAKANUR.--Jail is a place where prisoners are confined. ಅವರಿಗೆ ಜೈಲಿನಲ್ಲಿ ಯಾವ ರೀತಿಯಾಗಿರಬೇಕೋ ಆ ರೀತಿಯಲ್ಲಿ ನಾವು ವ್ಯವಸ್ಥೆ ಮಾಡಿದ್ದೇವೆ. ಅಲ್ಲಿ ಸಿಂಗಲ್ ರೂಮುಗಳು ಇವೆ ಬಹು ಜನರನ್ನಿಡುವ ರೂಮುಗಳು ಇವೆ. ಅಲ್ಲಿರತಕ್ಕ ವ್ಯವಸ್ಥೆಯನ್ನು ಮಾನ್ಯ ಸದಸ್ಯರನೇಕರು ನೋಡಿರಬಹುದು.

SRI C.M. ARMUGHAM.--I was put in jail in New Delhi ; I know what jail is.

ಶ್ರೀ ಎ.ಬಿ. ಜಕನೂರ್.–ಜೈಲಿನಲ್ಲಿ ಕೆಲಸ ಮಾಡತಕ್ಕ ಅಪರಾಧಿಗಳಿಗೆ ಮೊದಲು ೨೫ ಪೈಸೆಯಿಂದ ೫೦ ಪೈಸೆಯವರೆಗೆ ಕೂಲಿಯನ್ನು ಕೊಡುತ್ತಿದ್ದೆವು, ಈಗ ಅದನ್ನು ಎರಡು ರೂಪಾಯಿಗಳು ಸ್ಕಿಲ್ಡ್ ಲೇಬರ್‌ಗೆ, ೧-೫೦ ರೂಪಾಯಿಗಳುಅನ್‌ಸ್ಕಿಲ್ಡ್ ಲೇಬರರಿಗೆ ಕೊಡುತ್ತಿದ್ದೇವೆ. ಈ ರೀತಿಯ ಹೆಚ್ಚು ಕೂಲಿ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲ ಎನ್ನುವುದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜೈಲು ಪರಿಸ್ಥಿತಿಯ ಬಗ್ಗೆ ಈಗಿನ ಕೇಂದ್ರದ ಮಂತ್ರಿಗಳಾದ ಮಾನ್ಯ ವಾಜಪೇಯಿಯವರು ನಮ್ಮ ವಿಜಿಟರ್ಸ್ ಪುಸ್ತಕದಲ್ಲಿ ಬರೆದಿರುವುದನ್ನು ಸಭೆಯ ಗಮನಕ್ಕೆ ತರುತ್ತೇನೆ. "I am happy to visit again the jail where I was detained during the emergency. My only complaint is that I did not stay here for long" This shows that he has appreciated the conditions prevailing in our Jails.

ಅವರು ನಮ್ಮ ಜೈಲನ್ನು ಅಪ್ರಿಷಿಯೇಟ್ ಮಾಡಿದ್ದಾರೆ. ಇನ್ನು ಕೆಲವಾರು ದಿವಸಗಳವರೆಗೆ ಇರಬೇಕಾಗಿತ್ತು ಎನ್ನುವ ಆಸೆಯನ್ನು ವ್ಯಕ್ತ ಮಾಡಿದ್ದಾರೆ. ಇದರಂತೆ ಎಷ್ಟೋ ಜನ ಮಹನೀಯರು ತಮ್ಮ ಅಭಿಪ್ರಾಯಗಳನ್ನು ನಮ್ಮ ಜೈಲಿನ ಪರಿಸ್ಥಿತಿಯ ಬಗ್ಗೆ ವ್ಯಕ್ತ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಗಂಗಾಧರನ್ ಅವರು ಪರ್ ಹೆಡ್‌ಎಕ್ಸ್‌ಪೆನ್ಸ್‌ಸ್ ಫಾರ್ ಫುಡ್ ೯ ರೂಪಾಯಿಗಳು ಎಂದು ವರದಿಯಲ್ಲಿದೆ ಅದು ಎರಡೂವರೆ ರೂಪಾಯಿಗಳ ಕಿಮ್ಮತ್ತೂ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ೯ ರೂಪಾಯಿಗಳಲ್ಲಿ, ಎಲ್ಲಾ ಚಾರ್ಜಸ್ ಸೇರಿರುತ್ತವೆ, ಅವರಿಗೆ ಅರಿವೆ ಕೊಡತಕ್ಕುದು, ಕಾವಲು ಮಾಡತಕ್ಕುದು ಎಲ್ಲಾ ಕೂಡಿಸಿ ಇಷ್ಟು ಚಾರ್ಜಸ್ ಎಂದು ವರದಿಯಲ್ಲಿ ಹೇಳಿದ್ದಾರೆ. ಆಹಾರದ ಸಲುವಾಗಿ ಪರ್ ಹೆಡ್ ನಮಗೆ ೨-೨೧ ಪೈಸೆ ಬೀಳುತ್ತದೆ. ಕೆಲವು ಸದಸ್ಯರು ಇದರಿಂದ ಹೇಗೆ ಅವರಿಗೆ ಊಟವನ್ನು ಕೊಡಲಿಕ್ಕೆ ಸಾಧ್ಯ ಎಂದು ಪ್ರಶ್ನೆ ಮಾಡಿದ್ದಾರೆ. ನಾವು ಹೆಚ್ಚು ಜನಕ್ಕೆ ಹೆಚ್ಚು ಫುಡ್ ತಯಾರು ಮಾಡುವುದರಿಂದ ಇಷ್ಟು ಹಣದಿಂದ ಅವರಿಗೆ ಊಟವನ್ನು ಪೂರೈಸಲಿಕ್ಕೆ ಸಾಕಷ್ಟು ಆಗುತ್ತದೆ ಮತ್ತು ನಾವು ಕೊಡತಕ್ಕ ಊಟ ಕೆಲವು ಜನಕ್ಕೆ ಹೆಚ್ಚಾಗುತ್ತದೆಂದು ಹಾಗೆಯೇ ಬಿಡುತ್ತಿದ್ದಾರೆ. ಇದಾದಮೇಲೆ ನಾವು ವರ್ಷದ ೯ ದಿವಸಗಳಲ್ಲಿ ಅವರಿಗೆ ಮೃಷ್ಟಾನ್ನ ಭೋಜನವನ್ನು ಮತ್ತು ಯಾರು ಮಟನ್ ತಿನ್ನುತ್ತಾರೋ ಅವರಿಗೆ ಮಟನ್ ಸಹ ಕೊಡುತ್ತಿದ್ದೇವೆ. ಕೆಲವು ಸದಸ್ಯರುಗಳು ಜೈಲುಗಳಲ್ಲಿ ಸ್ಯಾನಿಟೇಷನ್ ಸರಿಯಿಲ್ಲ, ಸಾಕಷ್ಟು ನೀರನ್ನು ಒದಗಿಸುತ್ತಿಲ್ಲ ಎಂದು ಹೇಳಿದ್ದಾರೆ. ನೀರಿನ ಅವ್ಯವಸ್ಥೆ ಯಾವ ಜೈಲಿನಲ್ಲಿಯೂ ಆಗಿಲ್ಲ. ಸ್ಯಾನಿಟೇಷನ್ ಮಾತ್ರ ಹಳೆಯ ಜೈಲುಗಳಲ್ಲಿ ಸರಿಯಾಗಿದ್ದಿಲ್ಲಾ ಅದನ್ನು ನಾವು ಸರಿ ಮಾಡಿದ್ದೇವೆ. ಮತ್ತೊಬ್ಬ ಸದಸ್ಯರು ಬೆರಾಕ್‌ಗಳಲ್ಲಿ ಬಹಳ ಜನ ಹಾಕುತ್ತಿದ್ದಾರೆಂದು ಹೇಳಿದ್ದಾರೆ. ಬೆರಾಕ್‌ಗಳನ್ನು ನಾವು ಕಟ್ಟಿಸಿರುವುದೇ ಹೆಚ್ಚು ಜನರನ್ನು ಹಾಕಲಿಕ್ಕಾಗಿ. ಒಬ್ಬೊಬ್ಬರಿಗೆ ಒಂದೊಂದು ರೂಮನ್ನು ನಾವು ಕೊಡಲಿಕ್ಕಾಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—೨೫ ಮಂದಿಯನ್ನು ಇಡಬೇಕಾದಂಥ ಬೆರಾಕ್‌ನಲ್ಲಿ ೨೫೦ ಮಂದಿಯನ್ನು ಹಾಕುತ್ತಿದ್ದಾರೆ.

ಶ್ರೀ ಎ ಬಿ. ಜಕನೂರ್.—ನಮ್ಮ ಜೈಲಿನಲ್ಲಿ ಸುಮಾರು ೭೪೦೦ ಜನಕ್ಕೆ ಅಕಾಮಡೇಷನ್ ಇದೆ. ಈಗ ಜೈಲಿನಲ್ಲಿರತಕ್ಕವರ ಸಂಖ್ಯೆ ಸುಮಾರು ೪೪೦೦ ಮಾತ್ರ. ಮತ್ತೊಬ್ಬ ಸದಸ್ಯರು ಈ ಸಬ್ ಜೈಲ್‌ನ್ನು ಏಕೆ ಇಡುತ್ತೀರಿ ಎಂದು ಪ್ರಶ್ನೆ ಮಾಡಿದ್ದಾರೆ. ಕೋರ್ಟಿಗೆ ಅಪರಾಧಿಯನ್ನು ಪ್ರಡ್ಯೂಸ್ ಮಾಡಬೇಕಾದರೆ, ಒಂದು ದಿವಸ ಅಥವಾ ಒಪ್ಪತ್ತು ಅಪರಾಧಿಗಳನ್ನು ಇಡುವ ಸಲುವಾಗಿ ಈ ಸಬ್ ಜೈಲನ್ನು ನಾವು ಇಡಬೇಕಾಗುತ್ತದೆ.

ಸ್ಟಾಫ್ ಕ್ವಾರ್ಟರ್ಸ್ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ಮೈಸೂರಿನಲ್ಲಿಯೂ ಇದು ಸರಿಯಾಗಿಲ್ಲ ಎಂದು ಹೇಳಿದರು. ನಾವು ಮೈಸೂರಲ್ಲಿ ಹೊರಗೆ ಬಂದು ಜೈಲನ್ನು ಮತ್ತು ಸ್ಟಾಫ್ ಕ್ವಾರ್ಟರ್ಸ್‌ನ್ನು ಕಟ್ಟಿಸಲಿಕ್ಕಾಗಿ ಜಮೀನನ್ನು ಅಕ್ವೈಯರ್ ಮಾಡುವುದಕ್ಕಾಗಿ ಅಕ್ವಿಷನ್ ಪ್ರಕರಣವನ್ನು ಪ್ರಾರಂಭ ಮಾಡಿದ್ದೇವೆ. ಅಲ್ಲಿ ಈ ಕ್ವಾರ್ಟರ್ಸ್ ವಗೈರೆ ಮಾಡಲಾಗುವುದು. ಮಾನ್ಯ ಸದಸ್ಯರಾದ ಸಯನಕ್ ಅವರು ರೆಮ್ಯುನರೇಷನ್‌ನ್ನು ಹೆಚ್ಚು ಮಾಡಬೇಕು ಎಂದು ಹೇಳಿದ್ದಾರೆ. ರೆಮ್ಯುನರೇಷನ್‌ನ್ನು ನಾವು ಆಗಲೇ ಹೆಚ್ಚು ಮಾಡಿದ್ದೇವೆ. ೨೫ ಪೈಸೆ ಇದ್ದುದನ್ನು ಒಂದೂವರೆ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ೫೦ ಪೈಸೆ ಇದ್ದುದನ್ನು ಎರಡು ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಇನ್ನೂ ಜಾಸ್ತಿ

ವೇಜಸ್ ಕೊಟ್ಟರೆ ಹೊರಗಿನವರೂ ಸಹ ಜೈಲಿನಲ್ಲಿ ಬಂದು ಇರಲಿಕ್ಕೆ ಹವಣಿಸಬಹುದು. ಆದ್ದರಿಂದ ಜೈಲಿನಲ್ಲಿ ಕೊಡುವುದನ್ನು ನಾವು ಯಾವಾಗಲೂ ಕಡಿಮೆ ಇಡಬೇಕು. ಮಾನ್ಯ ರಾಮಭಟ್ ಅವರು ಸೆಂಟ್ರಲ್ ಪ್ರಿಸನ್ಸ್ ಶಿಫ್ಟ್ ಏಕೆ ಮಾಡಬೇಕು ಎಂದು ಪ್ರಶ್ನೆ ಮಾಡಿದರು. ಕೆಲವರು ಬೆಂಗಳೂರು ಸೆಂಟ್ರಲ್ ಜೈಲನ್ನು ಹೊರಗಡೆ ಹಾಕಬೇಕು ಎಂದು ಹೇಳಿದ್ದಾರೆ. ಇನ್ನು ಕೆಲವರು ಇದನ್ನು ಹೊರಗಡೆ ಏಕೆ ಹಾಕಬೇಕು, ಇದಕ್ಕಾಗಿ ಖರ್ಚುಮಾಡುವ ೧.೯೫ ಕೋಟಿ ರೂಪಾಯಿಗಳನ್ನು ಬೇರೆ ಡೆವಲಪ್‌ಮೆಂಟ್ ಕೆಲಸಗಳಿಗೆ ಏಕೆ ಖರ್ಚು ಮಾಡಬಾರದು ಎಂದು ಹೇಳಿದ್ದಾರೆ, ನಮ್ಮ ಸೆಂಟ್ರಲ್ ಜೈಲು ನೂರು ವರ್ಷಗಳ ಹಿಂದೆ ಕಟ್ಟಿದಂಥಾದ್ದು ಅದರಲ್ಲಿ ಏನೂ ಆಲ್ಟರೇಷನ್ ಮಾಡುವುದಕ್ಕೆ ಬರುವುದಿಲ್ಲ. ಸ್ಟಾಫ್ ಕ್ವಾರ್ಟರ್ಸ್‌ಗೆ ಅಲ್ಲಿ ಸ್ಥಳ ಇಲ್ಲ ಆಟಪಾಠಗಳಿಗೆ ವ್ಯವಸ್ಥೆ ಮಾಡಲು ಸ್ಥಳ ಇಲ್ಲ, ಇದು ಬೆಂಗಳೂರಿನ ಮಧ್ಯ ಆಗಿದೆ. ಯಾವಾಗಲೂ ಜೈಲುಗಳು ಊರಿನ ಹೊರಗೆ ಇರಬೇಕು ಎಂದು ಜನತೆಯ ಹಿತದೃಷ್ಟಿಯಿಂದ ನಾವು ಈಗಾಗಲೇ ಇದನ್ನು ಸ್ಥಳಾಂತರಿಸುವುದಕ್ಕೆ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ, ನಿಶ್ಚಯ ಕೂಡ ಮಾಡಿದ್ದೇವೆ,

ಪರಪ್ಪನ ಅಗ್ರಹಾರದಲ್ಲಿ ಹೊಸ ಜೈಲನ್ನು ಕಟ್ಟುವುದಕ್ಕೋಸ್ಕರ ಸುಮಾರು ೮೦-೮೫ ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳಲಾಗಿದೆ. ಅಲ್ಲಿ ಈಗಾಗಲೇ ಜೈಲು ಕಟ್ಟಡದ ಕೆಲಸ ನಡೆಯುತ್ತಾ ಇದೆ. ಈ ಬಗ್ಗೆ ನಾವು ಈಗಾಗಲೇ ಒಂದು ಹೆಜ್ಜೆ ಮುಂದೆ ಇಟ್ಟಿದ್ದೇವೆ. ಹೀಗಿರುವಾಗ ಅದನ್ನು ಬೇರೆ ಕಡೆ ಒಯ್ಯುವುದು ಬೇಡ ಎಂದರೆ ಹೇಗಾಗುತ್ತದೆ. ಅಲ್ಲಿ ಈಗಾಗಲೇ ಹೊಸ ಮಾದರಿಯ ಜೈಲನ್ನು ಕಟ್ಟಬೇಕೆಂದು ಮಾಡಿದ್ದೇವೆ.

ಶ್ರೀಮಾನ್ ಕಕ್ಕಿಲಾಯ ಅವರು ಹೇಳಿದರು ನಾನು ೫-೬ ಜೈಲುಗಳಿಗೆ ಹೋಗಿದ್ದೆ ಜೈಲುಗಳ ಸುಧಾರಣೆ ಸಾಕಷ್ಟು ಆಗಿಲ್ಲ ಎಂದು ಹೇಳಿದರು. ಈಗ ಅಪರಾಧಿಗಳನ್ನು ಹೆಚ್ಚು ಮಾಡುತ್ತಿದ್ದೀರಿ ಎಂದು ಅವರು ಹೇಳಿದರು. ನಾವೇನು ಅಪರಾಧಿಗಳನ್ನು ಜಾಸ್ತಿ ಮಾಡುವುದಿಲ್ಲ. ಅಪರಾಧಗಳು ಏತಕ್ಕೆ ಆಗುತ್ತಿವೆ ಎಂಬುದು ನಿಮಗೆ ಗೊತ್ತಿದೆ. ಎಲ್ಲರಿಗೂ ಆಸ್ತಿ ಇರುವುದಿಲ್ಲ, ದುಡ್ಡು ಇರುವುದಿಲ್ಲ. ಇದರಿಂದಾಗಿ ಅವರು ಕಳ್ಳತನ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಇದು ಸಮಾಜದ ತಪ್ಪು ಅಲ್ಲ. ಸರ್ಕಾರದ ತಪ್ಪು ಅಲ್ಲ. ಸಮಾಜದಲ್ಲಿ ಏರುಪೇರು, ಆರ್ಥಿಕವಾಗಿ ಅಸಮಾನತೆ ಇರುತ್ತದೆ. ಇದರಿಂದಾಗಿ ಆ ಜನಗಳು ಅಪರಾಧಿಗಳಾಗುತ್ತಾರೆ. ಕೆಲವು ಸಂದರ್ಭದಲ್ಲಿ ಒಂದು ಸಾರಿ ಜೈಲಿಗೆ ಹೋದವರು ಇನ್ನೊಮ್ಮೆ ಜೈಲಿಗೆ ಬರುವುದಕ್ಕೆ ಪ್ರಯತ್ನ ಪಡುತ್ತಾರೆ. ಯಾರನ್ನೂ ಜೈಲಿಗೆ ಬಾ ಎಂದು ಕರೆಯುವುದಕ್ಕೆ ಸರಕಾರ ಹೋಗುವುದಿಲ್ಲ.

ಇನ್ನು ಅಂಡರ್ ಟ್ರೈಯಲ್ಸ್ ಅಪರಾಧಿಗಳ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದ ಎಲ್ಲಾ ಜೈಲುಗಳಲ್ಲೂ ಕೂಡ ಕೈದಿಗಳಿಗಿಂತ ಅಂಡರ್ ಟ್ರೈಯಲ್ಸ್ ಅಪರಾಧಿಗಳೇ ಜಾಸ್ತಿಯಾಗಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಇದು ನಿಜ. ಇದಕ್ಕೆ ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅಂಡರ್ ಟ್ರಯಲ್ಸ್ ಕೇಸುಗಳನ್ನು ಕೋರ್ಟಿನವರು ಬೇಗ ನಿಖಾಲೇ ಮಾಡಬೇಕು. ಕೋರ್ಟುಗಳ ಕೆಲಸ ಬಹಳ ಇರುವುದರಿಂದ ಅವರು ಈ ಕೇಸುಗಳನ್ನು ಬೇಗ ನಿಖಾಲೇ ಮಾಡುವುದಿಲ್ಲ. ಆದ್ದರಿಂದ ಅಂಡರ್ ಟ್ರೈಯಲ್ಸ್ ಅಪರಾಧಿಗಳು ಬಹಳ ಉಳಿದಿದ್ದಾರೆ. ಕೋರ್ಟುಗಳಲ್ಲಿ ಬೇಗ ಬೇಗ ಕೇಸ್‌ಗಳನ್ನು ನಿಖಾಲೇ ಮಾಡುವುದು ಕೋರ್ಟ್‌ಗೆ ಸಂಬಂಧಪಟ್ಟ ವಿಷಯ.

ಇನ್ನು ಜೈಲಿನಲ್ಲಿರತಕ್ಕ ಖೈದಿಗಳಿಗೆ ಕೂಲಿ ಕೊಡತಕ್ಕ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರತಿಯೊಬ್ಬ ಅಪರಾಧಿಯೂ ಕೂಡ ಜೈಲಿನಿಂದ ಹೊರಗಡೆ ಹೋಗುವಾಗ ಸ್ವಲ್ಪ ದುಡ್ಡನ್ನು ಉಳಿಸಿಕೊಂಡು ಹೋದರೆ ಅವನ ಪುನರ್‌ವಸತಿಗೆ ಸಹಾಯವಾಗುತ್ತದೆ ಎನ್ನುವ ಭಾವನೆಯಿಂದ ಸರ್ಕಾರದವರು ಖೈದಿಗೆ ಕೊಡತಕ್ಕ ಕೂಲಿಯನ್ನು ಹೆಚ್ಚು ಮಾಡಿದ್ದೇವೆ. ಜೈಲಿನಲ್ಲಿ ಓಪನ್ ಏರ್ ಜೈಲ್ ಮಾಡಿದಕ್ಕಾಗಿ ಕೆಲವು ಮಾನ್ಯ ಸದಸ್ಯರು ಅಭಿನಂದನೆ ಮಾಡಿದ್ದಾರೆ. ಈ ಓಪನ್ ಏರ್ ಜೈಲಿಗೆ ಹೆಚ್ಚು ಖೈದಿಗಳನ್ನು ಹಾಕಬೇಕೆಂದು ಹೇಳಿದ್ದಾರೆ. ಎಷ್ಟು ಜನ ಖೈದಿಗಳು ಇರುತ್ತಾರೆ ಅವರನ್ನು ಮಾತ್ರ ಅಲ್ಲಿಗೆ ಕಳುಹಿಸುತ್ತೇವೆ. ಹೆಚ್ಚು ಖೈದಿಗಳನ್ನು ಎಲ್ಲಿಂದ ತರಬೇಕು.

ಇನ್ನು ಮಾನ್ಯ ಆರ್ಮುಗಮ್ ಅವರು ಜೈಲು ಸಿಬ್ಬಂಧಿ ವರ್ಗದವರಿಗೆ ವಸತಿ ಗೃಹಗಳನ್ನು ಒದಗಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿವೇಶನವನ್ನು ವಶಪಡಿಸಿಕೊಂಡು ಮನೆಗಳನ್ನು ಕಟ್ಟುವುದಕ್ಕೆ ಹಂತ ಹಂತವಾಗಿ ಪ್ರಯತ್ನ ಮಾಡುತ್ತೇವೆ.

ಇನ್ನು ಅಪರಾಧಿಗಳು ಅಪೀಲ್ ಮಾಡಿಕೊಳ್ಳುವುದಕ್ಕೆ ಸರ್ಕಾರದ ವತಿಯಿಂದ ಅನುಕೂಲ ಮಾಡಿ ಕೊಡಬೇಕು. ಬಡವರಿಗೆ ಕಾಯಿದೆ ತಜ್ಞರ ಸಹಾಯವನ್ನು ಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಈ ಖೈದಿಗಳಿಗೆ ಶಿಕ್ಷೆಯನ್ನು ವಿಧಿಸಿದಾಗ ಯಾರು ವಕೀಲರ ಸಹಾಯ ಬೇಕೆಂದು ಕೇಳುತ್ತಾರೆಯೋ ಅವರನ್ನು ಕರೆಸಿ ಅವರಿಗೆ ಅಪೀಲು ಮಾಡುವುದಕ್ಕೆ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ.

ಶ್ರೀಮಾನ್ ಚಂದ್ರಶೇಖರ್ ಅವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ೧೯೭೬–೭೭ರಲ್ಲಿ ೫೩ಲಕ್ಷ ರೂಪಾಯಿ ಉತ್ಪತ್ತಿಯಾಯಿತು. ಲೇಬರ್ ಚಾರ್ಜ್ ಆಗ ಕಡಿಮೆ ಇತ್ತು. ಆದರೆ ೧೯೭೭–೭೮ರಲ್ಲಿ ಲೇಬರ್ ಚಾರ್ಜ್ ಜಾಸ್ತಿ ಮಾಡಿ ೪೦·೫ ಲಕ್ಷಕ್ಕೆ ಉತ್ಪತ್ತಿ ಇಳಿದಿದೆ. ಎಂದು ಮಾನ್ಯ ಸದಸ್ಯರು ಹೇಳಿದರು. ೧೯೭೬–೭೭ರಲ್ಲಿ ೫೩,೬೭,೦೦೦ ರೂಪಾಯಿ ಲೇಬರ್ ಚಾರ್ಜ್ ಏನು ಕೊಡುತ್ತಿದ್ದೆವು ಅದು ಕಡಿಮೆ ಇತ್ತು. ಆಗ ಗಾರ್ಡನ್‌ನಲ್ಲಿ ಕೆಲಸ ಮಾಡತಕ್ಕ ಖೈದಿಗಳಿಗೆ ಲೇಬರ್ ಚಾರ್ಜ್ ಕೊಡುತ್ತಾ ಇರಲಿಲ್ಲ. ಆಗ ಇಂಡಸ್ಟ್ರಿಯಲ್ ಲೇಬರರ್ಸ್‌ಗೆ ಮಾತ್ರ ಕೂಲಿಯನ್ನು ಕೊಡುತ್ತಿದ್ದೆವು. ಆದ್ದರಿಂದ ೭೭–೭೮ರಲ್ಲಿ ಗಾರ್ಡನ್‌ನಲ್ಲಿ ಕೆಲಸ ಮಾಡತಕ್ಕ ಖೈದಿಗಳಿಗೂ ಕೂಲಿಯನ್ನು ಕೊಡತಕ್ಕ ವ್ಯವಸ್ಥೆ ಆಯಿತು. ಆದ್ದರಿಂದ ಈ ಲೇಬರ್ ಚಾರ್ಜ್ ಜಾಸ್ತಿಯಾಗಿ ಖೈದಿಗಳು ಕಡಿಮೆಯಾದ್ದರಿಂದ ಉತ್ಪತ್ತಿ ಕಡಿಮೆಯಾಯಿತು.

ಇನ್ನು ಅಂಡರ್ ಟ್ರಯಲ್ ಅಪರಾಧಿಗಳನ್ನು ಆದಷ್ಟು ಬೇಗ ಕೋರ್ಟಿನ ಮುಂದೆ ಹಾಜರು ಮಾಡಿ ವಿಚಾರಣೆ ನಡೆಸಿ ಅವರನ್ನು ಬಿಡುಗಡೆ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದರು. ಅದು ಕೋರ್ಟ್‌ಗೆ ಸಂಬಂಧಪಟ್ಟ ವಿಷಯ. ಕೋರ್ಟಿನ ಹುಕುಮ್ ಪ್ರಕಾರ ಅವರು ಕೆಲಸ ಮಾಡಿಕೊಂಡು ಹೋಗುತ್ತಾರೆ. ಅಂಡರ್ ಟ್ರಯಲ್ಸ್ ಅಪರಾಧಿಗಳ ಮೇಲೆ ಅಪರಾಧವನ್ನು ಏನು ಹೊರಿಸುತ್ತಾರೆ ಅದು ಸಾಬೀತು ಆಗುವವರೆಗೆ ಅಂಥಹವರನ್ನು ಜೈಲಿನಲ್ಲೇ ಇಟ್ಟಿರುತ್ತಾರೆ. ಅಪರಾಧ ಸಾಬೀತಾಗದಿದ್ದರೆ ಕೋರ್ಟಿನ ಹುಕುಮ್ ಪ್ರಕಾರ ಅವರನ್ನು ಬಿಡುಗಡೆ ಮಾಡುತ್ತಾರೆ. ಈ ಅಂಡರ್ ಟ್ರಯಲ್ ಅಪರಾಧಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಮೇಘಾಲಯದ ಕೇಸಿನಲ್ಲಿ ಸುಪ್ರೀಮ್ ಕೋರ್ಟಿನವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆಂದು ಕೇಳಿದ್ದೇನೆ. ಅದನ್ನು ತರಿಸಿಕೊಂಡು ಹುಕುಮ್ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. Criminal Procedure ಕೋಡಿನ ಕಲಮ್ ೧೦೭ರ ಪ್ರಕಾರ ಅಂಡರ್ ಟ್ರಯಲ್ ಇದ್ದವರನ್ನು ಸಿ.ಆರ್.ಸಿ.ಸಿ. ೧೧೬ ಪ್ರಕಾರ ೬ ತಿಂಗಳೊಳಗಾಗಿ ಈ ಕೇಸುಗಳು ನಿಖಾಲೇಯಾಗದಿದ್ದರೆ the procedings may be droppe**d** ಅಂತಾ ಇದೆ. ಸುಪ್ರೀಮ್ ಕೋರ್ಟಿನಿಂದ ಜಜ್ಡ್‌ಮೆಂಟ್ ಬಂದ ತಕ್ಷಣ ಕೋರ್ಟ್ ಹುಕುಮ್ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ.

ಇನ್ನು ಶ್ರೀ ಡಿ. ಟಿ. ರಾಮು ಅವರು ಹೇಳಿದರು ; ಎಲ್ಲಾ ಜಿಲ್ಲೆಗಳಲ್ಲೂ open air ಜೈಲುಗಳನ್ನು ಮಾಡಬೇಕೆಂದು. ನಾವು ಅಪರಾಧಿಗಳನ್ನು ಕಡಿಮೆ ಮಾಡಬೇಕು. ಅದು ಬಿಟ್ಟು ಜೈಲುಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು ಹೋದರೆ ಹೆಚ್ಚು ಹೆಚ್ಚು ಜನರು ಅಪರಾಧಿಗಳು ಬರಲಿ ಎನ್ನುವ ಮನೋಭಾವ ಇರಬಾರದು. ಆದುದರಿಂದ ಜಿಲ್ಲಾ ಜೈಲುಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈಗ ಮಾಡಿರತಕ್ಕ ಜೈಲುಗಳನ್ನೇ ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಬೇಕು. ಏನಾದರೂ ಲೋಪದೋಷಗಳು ಇದ್ದರೆ ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಜೈಲು ಬೇಡಿಕೆಯ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ತಮ್ಮ ಬೆಂಬಲವನ್ನು ಕೊಟ್ಟು ಇದನ್ನು ಪಾಸು ಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ರಾಣೇಬೆನ್ನೂರಿನಲ್ಲಿರತಕ್ಕ ತಾಲ್ಲೂಕು ಜೈಲು ಏನಿದೆ ಆ ಜೈಲಿನಲ್ಲಿ ೨೪ ಗಂಟೆ ಕಾಲ ಖೈದಿಗಳನ್ನು ಸರ್ಕಸ್‌ನಲ್ಲಿ ಪ್ರಾಣಿಗಳನ್ನು ಬೋನಿನ ಒಳಗೆ ಇಟ್ಟಿರುವ ಹಾಗೆ ಇಟ್ಟಿರುತ್ತಾರೆ. ಅವರಿಗೇನಾದರೂ ಆಹಾರ ಕೊಡಬೇಕಾದರೆ ಕಂಬಿಗಳ ಮಧ್ಯದಲ್ಲಿ ಕೊಡುತ್ತಾರೆ. ಇಂಥ ಒಂದು ಪದ್ಧತಿ ಇವತ್ತಿನವರೆಗೂ ಬದಲಾವಣೆಯಾಗಿಲ್ಲ. ಇಂತದ್ದನ್ನು ತಾವು ಸುಧಾರಣೆ ಮಾಡುತ್ತೀರಾ ? ಮತ್ತು ಅಲ್ಲಿಯ ಖೈದಿಗಳಿಗೆ ಸ್ವಲ್ಪ ಪ್ರೈವೆಸಿಯನ್ನು ಒದಗಿಸಿ ಕೊಡುತ್ತೀರಾ ? ಅವರಿಗೆ ಒಳ್ಳೆಯ ಆಹಾರವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಅಲ್ಲಿರತಕ್ಕ ಪೋಲೀಸ್ ಸ್ಟೇಷನ್ ಕೂಡ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಪಂಪಾಪತಿ —ಈ ತೊಂದರೆ ರಾಣೇಬೆನ್ನೂರಿನಲ್ಲೂ ಇದೆ ಹಾಗೂ ನಂಜನಗೂಡಿನಲ್ಲೂ ಇದೆ. ಅಲ್ಲಿ ಖೈದಿಗಳಿಗೆ ತುಂಬಾ ತೊಂದರೆ ಇದೆ, ಅವರು ಜೈಲಿನಿಂದ ಬಿಡುಗಡೆಯಾಗುವವರೆಗೆ ಒಂದೇ ಜಾಗದಲ್ಲಿ

ಇರಬೇಕಾಗುತ್ತದೆ. ಅಲ್ಲಿ ತಿಗಣೆ, ಸೊಳ್ಳೆ, ಕೂರೆ ಕಾಟವನ್ನು ತಾಳಲಾರದೆ ಅವರು ಅಪರಾಧಿಗಳು ಅಲ್ಲದಿದ್ದರೂ ಅಪರಾಧಿಗಳು ಎಂದು ಒಪ್ಪಿಕೊಂಡು ಬೆಂಗಳೂರು ಸೆಂಟ್ರಲ್ ಜೈಲಿಗೆ ಬಂದು ಬಿಡುತ್ತಾರೆ. ಆದ್ದರಿಂದ ರಾಣೆಬೆನ್ನೂರು ಮತ್ತು ನಂಜನಗೂಡು ಲಾಕಪ್‌ಗಳಲ್ಲಿ ಅನುಕೂಲ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಟಿ. ಆರ್. ಶಾಮಣ್ಣ.—ಈಗ ಜೈಲ್ ಇಂಡಸ್ಟ್ರೀಸ್ ಸ್ವಲ್ಪ ಪಾಪ್ಯುಲರ್ ಆಗಿರುವುದರಿಂದ ಇನ್ನೂ ಹೆಚ್ಚಿಸುವುದಕ್ಕಾಗುವುದಿಲ್ಲವೇ, ಜೈಲಿನಿಂದ ಬಿಡುಗಡೆಯಾದ ಖೈದಿಗಳಿಗೆ ಪುನರ್ವಸತಿ ಕಲ್ಪಿಸುವುಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ರಾಮಭಟ್.—ಮಾನ್ಯ ಸಚಿವರು ಅಂಡರ್ ಟ್ರಯಲ್ ಪ್ರಿಸನರ್ಸ್‌ನ್ನು ಕೆಲವು ಸಬ್ ಜೈಲುಗಳಲ್ಲಿ ಇಡುತ್ತಿದ್ದೇವೆಂದು ಹೇಳಿದರು. ಒಂದು ದಿವಸ, ಎರಡು ದಿವಸ, ಒಂದು ವಾರ, ಒಂದು ತಿಂಗಳು ಎಷ್ಟು ಸಮಯ ಈ ನರಕಸದೃಶ ಸ್ಥಳದಲ್ಲಿ ಇಡುತ್ತೀರಿ ಎಂದು ನಾನು ಮೊನ್ನೆ ತಾನೇ ಹೇಳಿದೆ, ಎರಡು ದಿವಸ ಇಡಬೇಕಾಗುತ್ತದೆ ಎಂದು ತಾವು ಹೇಳಿದ್ದೀರಿ. ಇದು ನ್ಯಾಯವೇ ಎಂದು ಕೇಳುತ್ತೇನೆ, ಈ ಒಂದು ನರಕಸದೃಶದಲ್ಲಿರುವುದಕ್ಕೆ ಆಗುವುದಿಲ್ಲ. ಮಾನ್ಯ ಕಕ್ಕಿಲಾಯ ಅವರು ಮತ್ತು ಪಂಪಾಪತಿಯವರು ರಾಣೆಬೆನ್ನೂರಿನ ವಿಷಯ ಹೇಳಿದ್ದಾರೆ. ಅದಕ್ಕಿಂತ ಪುತ್ತೂರಿನ ಜೈಲು ಏನೂ ಕಡಿಮೆ ಇಲ್ಲ. ಆದುದರಿಂದ ಇದನ್ನು ಸುಧಾರಿಸಲಿಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ ?

SRI B. B. SAYANAK.—There is a Board of Visitors. Are only the members of the Board allowed or, have the M. L. As. the right to visit the jail ?

ಒಬ್ಬ ಸದಸ್ಯರು.—ಪ್ರಿಸನ್ಸ್ ರೂಲ್ಸ್‌ನಲ್ಲಿ ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಮತ್ತು ಓಲ್ಡ್ ಮೈಸೂರು ಭಾಗದಲ್ಲಿನ ಡಿಫಿಕಲ್ಟೀಸನ್ನು ಕೇಳಿದ್ದಾರೆ, ಅದರ ಬಗ್ಗೆ ಇನ್‌ಫಾರಂ ಮಾಡಲಿಕ್ಕೆ ಸಾಧ್ಯವೇ ?

ಶ್ರೀ ಎಂ. ಚಂದ್ರಶೇಖರ್.—ಜೈಲ್ ಮ್ಯಾನ್ಯುಯಲ್‌ನ್ನು ಖೈದಿಗಳ ಗಮನಕ್ಕೆ ತರುತ್ತಾರೆಯೋ ಎಂದು ಕೇಳುತ್ತೇನೆ. ಏಕೆಂದರೆ ಅದರ ಅನುಭವ ನಮಗೆ ಆಗಿದೆ. ಎಷ್ಟು ತೂಕ ಆಹಾರ ಕೊಡಬೇಕು, ಪ್ರತಿಯೊಂದು ಐಟೆಮ್ಸ್ ಕೊಡಬೇಕು ಎಂದು ಜೈಲ್ ಮ್ಯಾನ್ಯುಯಲ್‌ನಲ್ಲಿದೆ. ಆದರೆ ಆ ರೀತಿ ಕೊಡುವುದಿಲ್ಲ. ನಾವು ಇದ್ದಾಗ ಚಳುವಳಿ ಮಾಡಿ ಜೈಲ್ ಮ್ಯಾನ್ಯುಯಲ್ ತರಿಸಿಕೊಂಡು ನೋಡಿದೆವು. ಸರ್ಕಾರವೇನೋ ಹೆಚ್ಚಿನ ಸಂಖ್ಯೆಯಲ್ಲಿ ಕೊಡುತ್ತಿದೆ. ಆದರೆ ಜೈಲಿನವರು ಕೊಡುತ್ತಾ ಇಲ್ಲ. ರಾಜಕೀಯ ಖೈದಿಗಳಿಗೆ ಹೀಗಾದರೆ ಇನ್ನು ಸಾಮಾನ್ಯ ತಪ್ಪಿತಸ್ಥರಿಗೆ ಯಾವ ರೀತಿ ಜೈಲಿನ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಮೊನ್ನೆ ಹೊಸದಾಗಿ ಜೈಲ್ ಮ್ಯಾನ್ಯುಯಲ್ ಮಾಡಿದ್ದೀರಿ, ಅದನ್ನು ಖೈದಿಗಳ ಗಮನಕ್ಕೆ ತರುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ಹಿಂದೆ ಬೇರೆ ಬೇರೆ ಪ್ರದೇಶಕ್ಕೆ ಬೇರೆ ಬೇರೆ ಜೈಲ್ ಮ್ಯಾನ್ಯುಯಲ್ ಇದ್ದವು. ಹೈದರಾಬಾದ್ ಕರ್ನಾಟಕಕ್ಕೆ ಒಂದು, ಬಾಂಬೆ ಕರ್ನಾಟಕಕ್ಕೆ ಒಂದು ಜೈಲ್ ಮ್ಯಾನ್ಯುಯಲ್ ಇತ್ತು. ಈಗ ಎಲ್ಲಾ ಒಂದೇ ಒಂದು ಯೂನಿಫಾರಂ ಜೈಲ್ ಮ್ಯಾನ್ಯುಯಲ್ ಮಾಡಿದ್ದೇವೆ. ಮಾನ್ಯ ಸದಸ್ಯರು ಜೈಲ್ ಮ್ಯಾನ್ಯುಯಲ್‌ನ್ನು ಅಪರಾಧಿಗಳ ಗಮನಕ್ಕೆ ತರಬೇಕು ಎಂದು ಹೇಳಿದ್ದಾರೆ. ಯಾರು ಅದನ್ನು ಓದುತ್ತಾರೆ ಅವರಿಗೆ ಜೈಲ್ ಮ್ಯಾನ್ಯುಯಲ್‌ನ್ನು ತೋರಿಸುತ್ತೇವೆ ಆದರೆ ಅವರು ಅದರ ಕಡೆ ವಿಶೇಷ ಗಮನ ಕೊಡುತ್ತಿಲ್ಲ. ರಾಜಕೀಯ ಖೈದಿಗಳು ಮಾತ್ರ ಅದನ್ನು ನೋಡುತ್ತಾರೆ, ಉಳಿದವರು ಅದರ ಕಡೆ ಗಮನ ಕೊಡುತ್ತಿಲ್ಲ. ಮಾನ್ಯ ರಾಮಭಟ್ ಅವರು ಮತ್ತು ಕಕ್ಕಿಲಾಯ ಅವರು ಅಂಡರ್ ಟ್ರಯಲ್ ಪ್ರಿಸನರ್ಸ್‌ಗೆ ಸಬ್ ಜೈಲಿನಲ್ಲಿರತಕ್ಕ ವ್ಯವಸ್ಥೆ ಹೇಳಿದರು. ಎಲ್ಲಾ ಕಡೆ ನಮ್ಮ ರಾಜ್ಯದಲ್ಲಿ ತಾಲ್ಲೂಕು ಪ್ಲೇಸ್‌ನಲ್ಲಿರತಕ್ಕ ಸಬ್ ಜೈಲುಗಳು ಹಾಗೇ ಇವೆ, ಮುಂದೆ ಸಳಿಗಳನ್ನು ಹಾಕಿದಾರೆ, ಗೋಡೆ ಕಟ್ಟಿದರೆ ವೆಂಟಿಲೇಷನ್ ಇರುವುದಿಲ್ಲ, ಮತ್ತು ಸಳಿಗಳನಿಟ್ಟರು ಎಲ್ಲಾ ಒಳಗಿನ ಅಪರಾಧಿಗಳು ಸಿಬ್ಬಂದಿಗೆ ಕಾಣಿಸುತ್ತಾರೆ ಅಂತಾ ಹಾಗೆ ಮಾಡಿದ್ದಾರೆ. ದೊಡ್ಡ ದೊಡ್ಡ ಕಿಟಕಿ ಇಟ್ಟರೆ ಮುರಿದು ಹಾಕುತ್ತಾರೆ. ಸ್ವಲ್ಪ ದಿವಸ ಇರುವವರು ಬಂದ ತಕ್ಷಣ ಅವರಿಗೆ ಅನ್ನಿಸಬೇಕು. ನಾನು ಇಲ್ಲಿ ಬರಬಾರದಾಗಿತ್ತು

ಎಂದು ಸ್ವಲ್ಪ ಯೋಚನೆ ಮಾಡಬೇಕು. ಮನೆಯಲ್ಲಿದ್ದ ಹಾಗೆ ಇಡಲಿಕ್ಕೆ ಆಗುವುದಿಲ್ಲ, ಸ್ವಲ್ಪ ಮಾರ್ಪಾಟು ಮಾಡಬೇಕಾದರೆ ಸ್ವಲ್ಪ ದಿವಸ ಆಗುತ್ತದೆ. ೧೪೦–೧೫೦ ಜೈಲುಗಳನ್ನು ಹೊಸದಾಗಿ ಕಟ್ಟಿಸಲಿಕ್ಕೆ ಆಗುವುದಿಲ್ಲ. ಸಾಧ್ಯವಾದಷ್ಟು ಅಂಡರ್ ಟ್ರಯಲ್ ಪ್ರಿಸನರ್ಸ್‌ನ್ನು ಕೇಸ್ ಹಾಕಿದ ಮೇಲೆ ೭–೮ ದಿವಸ ಇಟ್ಟಿರುತ್ತಾರೆ, ಮುಂದೆ ಹಾಕಿದರೆ ಅಪರಾಧಿಗಳನ್ನು ಸೆಂಟ್ರಲ್ ಪ್ರಿಸನ್ಸ್‌ಗೆ ತೆಗೆದುಕೊಂಡು ಹೋಗುತ್ತಾರೆ. ಕಂಟಿನ್ಯೂಸಾಗಿ ಚೌಕಳಿ ಇದ್ದಾಗ ಸ್ವಲ್ಪ ದಿವಸ ಇರಬೇಕಾಗುತ್ತದೆ. ಶಕ್ಯ ಇದ್ದುದು ಮಾಡಲಿಕ್ಕೆ ಬರುತ್ತದೆ. ಇದನ್ನು ಸ್ವಲ್ಪ ಪರಿಶೀಲಿಸಿ ನೋಡೋಣ.

Regarding the question of Sri Sayanak whether the member of the Board of Visitors are allowed or all MLAs are allowed, all M.L.As are not allowed; only members of the Board of Visitors can visit it any time. That system of allowing everyboby is not followed.

ರೀ ಹ್ಯಾಬಿಲಿಟೇಷನ್ ಬಗ್ಗೆ ಹೇಳಬೇಕಾದರೆ ಮಾನ್ಯ ಸದಸ್ಯರಿಗೆ ಬುಕ್‌ಲೆಟ್ ಕೊಟ್ಟಿದ್ದೇವೆ. ಪೇಜ್ ೧೧ ರಲ್ಲಿ ಎಷ್ಟೆಷ್ಟು ಜನರಿಗೆ ಕೊಟ್ಟಿದ್ದೇವೆ ಎಂದು ಇದೆ. ಅವರು ಬಿಡುಗಡೆಯಾದ ನಂತರ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್‌ನವರು ಹಣ ಕೊಟ್ಟಿದ್ದಾರೆ. ಕಾರ್‌ಪೆಂಟರಿಯಲ್ಲಿ ತಯಾರಾದವರಿಗೆ ಆ ಕೆಲಸ ಮಾಡಲು ಸಾಮಾನುಗಳನ್ನು ಕೊಳ್ಳಲಿಕ್ಕೆ ೩೦೦ ರಿಂದ ೮೦೦ ರೂಪಾಯಿುವರೆಗೆ ಒದಗಿಸುತ್ತಿದ್ದಾರೆ, ಜಮೀನಿನಲ್ಲಿ ಅನುಭವವಿದ್ದವರಿಗೆ ಎಲ್ಲೆಲ್ಲಿ ಸರ್‌ಪ್ಲೆಸ್ ಲ್ಯಾಂಡ್ ಸಿಗುತ್ತದೆ ಆ ಸರ್‌ಪ್ಲೆಸ್ ಲ್ಯಾಂಡನ್ನು ಕೊಟ್ಟಿದ್ದಾರೆ, ಬಟ್ಟೆ ಹೊಲಿಯುವ ಕೆಲಸ ಮಾಡುವವರಿಗೆ ಟೈಲರಿಂಗ್ ಮಿಷನ್ ಕೊಂಡುಕೊಟ್ಟಿದ್ದೇವೆ, ಹೀಗೆ ನಾನಾ ವಿಧವಾದ ಸಹಾಯವನ್ನು ಮಾಡುತ್ತಾ ಇದ್ದೇವೆ. ಇದನ್ನು ತಾವು ಗಮನಿಸಬೇಕು. ಇವರಿಗೆ ಸಹಾಯ ಮಾಡುವುದಕ್ಕೆ ಸೆಟ್‌ಅಪ್ ಮಾಡಿದ್ದೇವೆ, ಅದರ ಪ್ರಕಾರ ಮಾಡುತ್ತಿದ್ದೇವೆ.

† SRI P. F. RODRIGUES (Minister of State for Housing).—Sir, during the debate for the last three days, some hon. Members of this House had adverted to the Fisheries Department and I am happy that most of them have welcomed this department and its functioning and its growth. As far as the marine fisheries are concerned, I am happy to say that we have achieved the green revolution. A long sea coast has become a bee-hive of activity with about 2000 boats and 500 mechanised boats. The introduction of purse-seine boats has revolutionised the fishing and our output has increased. We can have 300 boats; but at the moment, we have stopped at 200. If necessary. we will definitely increase them. On account of the introduction of the purse-seine boats. the increase in output has become doubled : in 1976-77 it was 63,742 tones.

1-30 P.M.

Whereas in 1978-79, it has come to Rs. 1,66,982 tonnes of fish has been brought out of the see till the end of March. As far as the marine fishery is concerned, the benefit has gone to the fishermen and the fishermen community themselves. To-day, they are engaging in this activity. and in this connection, I seek your indulgence to read a few sentences that have come in an International magazine

"FISHING NEWS INTERNATIONAL" printed and published in London which is a pride for Karnataka. It reads thus :-

"PURSERS BRING HOPE FOR BETTER TIMES IN SOUTH INDIA :

The Introduction of purse-seining has given a big boost to fishing along the coast of the southern Indian state of Karnataka, reports, FNI correspondent Trevor Drieberg.

Waters of Karnataka abound in mackerel and Sardinella. It is estimated that the State could export 60 tons of mackerel daily to the Persian Gulf countries and enquiries are already coming in.

The 300 km stretch of coast from Ullal to Marwar has been described as "an inexhaustible fish mine". Catches there vary widely between 40,000 and 120,000 tons a year. depening on whether the shoals approach the coast.

Until 1977, despite machanisation of boats over the past two decades, the large traditional rampaninets used accountted for 75 per cent of the mackerel and sarinella. Some 1,500 small mechanised boats working in the area concentrated mainly on trawling for shrimp.

DOUBLED. - Now purse seining is bringing promise of better times for local fishermen. The number of purse seiners has doubled this year to 100 and another 80 boats are building in yards along the cost.

The method was only recently introduced to Karnataka from Goa but local fishermen quickly learnt the technique which enables them to take in 600 to 800 tons a day.

In 1977 some 50 purse seiners netted a total of 30,000 tons of a 126,000-ton catch ; another 30,000 tons was taken by the small mechanised boats and the rest by the rampani nets."

It has also received the praise at the hands of the deliberations of the Task Force on Fisheries it reads thus :-

"It noted with great satisfication the arrangements in Karnataka where there are no areas of conflict between the traditional sector operating the rampani nets and the industrial sector operating the purseines. This has been brought about by judicious planning of involving the rampankars even at the stage of introduction of purse seine. About 50 groups of rampankars have been provided with purse seiners which

has triggered further development in the private sector. Under the system both the rampanies as well as the purse seiners are operating smoothly because of the common interest of the people involved in both these operations. The Task Force recommends that such system should be adopted in other States also wherever there is technical feasibility for introduction of purse seine..."

Our thinking to day has received a word of emulation by other marine States.

SRI MALLUR ANANDA RAO.—I rise on a point of order. I would ieke to know whether the Hon. Minister is making a statement or lrading the certificates given by the International Press or replying to the debate ?

MR. SPEAKER.—He is replying to the debate. He is telling certain things pertaining to his portfolio.

SRI P. F. RODRIGUES.—I am only saying how the International Press and other agencies have appreciated our work. If you need, I will circulate it. If a request was made, I would have circulated by how. I don't want to keep anything in hide. It further says :

"The situation in Goa developed during the last 3 years was considered in depth. The Task Force recommends that purse seine may be introduced in Goa on the bais of subsidies and loans as has been done in Karnataka. The purse seiners may be given only to those who are actually engaged in the rampan fishing operations. In view of the serious nature of the conflict the State may make available to the rampankars operating the rampni nets a substantial number of purse seiners immediately. The Task Force noted that Karnataka State has introduced 200 purse seiners during the last 3 years and is seized of the fact that the further introduction of purse seiners should be done after very careful consideration......

The Task Force was informed that Kerala State has proposed introduction of 300 purse seiners during the 6th Plan period. As serious conflicts are bound to arise between purse seiners and traditional boat seine operators, the Task Force recommends that purse seiners in Kerala waters should be given specificaily to those operating boat seines backed by adequate training and extension programmes. The State may also take suitable measures to see from the very inception that purse seiners thus introduced operate beyond

8 km and restrict the hours of fishing today time as in Karnataka waters."

SRI P. RAMDEV,—I would like to know whether the Hon. Minister is reading all these things for recording purpose only ?

ಶ್ರೀ ಪಿ. ಎಫ್. ರೊಡ್ರಿಗ್ಸ್.—ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ಆದರಿಂದ ಏನಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಧ್ಯಕ್ಷರೇ ಇಷ್ಟು ಮಾತ್ರಲ್ಲ, ಕರಾವಳಿ ಪ್ರದೇಶದಲ್ಲಿ ನಮ್ಮ ಹಲವಾರು ಯೋಜನೆಗಳು ಇವತ್ತು ನಡೆಯುತ್ತಿದೆ. ಮಲ್ಪೆ ಮೀನುಗಾರಿಕೆ ಬಂದರಿಗಾಗಿ ಇವತ್ತು ೪ ಕೋಟಿ ೨೬ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ನಿರ್ಮಾಣ ಮಾಡುತ್ತಿದ್ದೇವೆ. ಪ್ರಾಯಶಃ ಬರುವ ವರ್ಷದಿಂದ ಈ ಬಂದರು ರೆಡಿಯಾಗಿ ಕಾರ್ಯಾರಂಭ ಮಾಡಬಹುದು ಇದರಿಂದ ಸಮುದ್ರದ ಸಂಪತ್ತನ್ನು ಕಿನಾರೆಗೆ ತರುವ ಕಾರ್ಯ ನಡೆದಿದೆ ಇವತ್ತು ಹಲವಾರು ರಾಷ್ಟ್ರಗಳಿಂದ ಮೀನುಗಳಿಗೆ ಒಳ್ಳೆಯ ಬೇಡಿಕೆಗಳು ಬರುತ್ತಿವೆ, ಆ ಬೇಡಿಕೆಗಳನ್ನು ಪೂರೈಸುವುದಕ್ಕಾಗಿ ನಮ್ಮ ಸರ್ಕಾರ ಪರಿಶೀಲನೆ ಮಾಡುತ್ತಿದೆ. The Government will also encourage private entrepreneurs in the fishing industry so that more and more fish is brought ಮಂಗಳೂರಿನಲ್ಲಿ ಈಗ ಒಂದು ಹೊಸ ಮೀನನ್ನು ಮ್ಯಾಕರಲ್‌ನ್ನು ತಯಾರು ಮಾಡುತ್ತಿದ್ದೇವೆ. ಮತ್ತು ಪೆಣಂಬೂರು ಇಲ್ಲಿ ಹೊಸದಾಗಿ ಮೀನುಗಾರಿಕೆಗಾಗಿ ಬಂದರು ತಯಾರಾಗುತ್ತಿದೆ ಮತ್ತೆ ಹೋದ ವರ್ಷ ಮಾನ್ಯ ಮುಖ್ಯಮಂತ್ರಿಗಳವರು ಕದ್ರಿಯ ಹತ್ತಿರ ಇನ್ನೊಂದು ಬಂದರು ತಯಾರು ಮಾಡುವುದಕ್ಕೆ ಶಂಕುಸ್ಥಾಪನೆ ಮಾಡಿ ಬದಿಂದ್ದಾರೆ, ಅಲ್ಲಿ ಸಹ Our Marine fisheries are absolutely on top in the whole country and we wish to go further and use the wealth for the benefit of the people. In contrast, we have got our inland fisheries. ಒಳನಾಡಿನ ಪ್ರದೇಶವನ್ನು ಸಂಪೂರ್ಣವಾಗಿ ಡೆವಲಪ್ ಮಾಡಬೇಕಾದರೆ, we have to do lot of things. As far as Inland Fisheries are concerned, we are having about 4 lakhs hectares of water spread. We require about Rs, 40 Crores fish seed per year ಆದರೆ ಆದಕ್ಕೆ ಬೇಕಾಗುವ ಕೆಲವು ವಿಶೇಷ ರೀತಿಯ ಬೋಟುಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಏನು ಮಾಡುತ್ತಿದ್ದೇವೆಂದರೆ, at the moment, we have got about Rs. 10.44 Crores of fish seeds. ಹೆಚ್ಚು ಹೆಚ್ಚಾಗಿ ಬರುತ್ತಿದೆ. ಇದನ್ನು ಎಕ್ಸ್‌ಪ್ಯಾಂಡ್ ಮಾಡಬೇಕಾಗಿದೆ. ಹೆಚ್ಚು ಫೆಸಿಲಿಟೀಸ್‌ಗಳು ಬೇಕಾಗಿದೆ, ಹಣ ಬೇಕಾಗಿದೆ ಅದಕೋಸ್ಕರವಾಗಿ ಈ ಯೋಜನೆಗಳನ್ನು ನಾವು ಹಂತ ಹಂತವಾಗಿ ತೆಗೆದುಕೊಂಡು ಇದನ್ನು ಸಂಪೂರ್ಣವಾಗಿ ಮಾಡುವ ಯೋಚನೆಯಲ್ಲಿದ್ದೇವೆ. ಕೆಲವು ೪೦ ಫಿಶರೀಸ್ ಫಾರಂಗಳು ೩೨ ಹೆಕ್ಟಾರ್ ಪ್ರದೇಶದಲ್ಲಿ ಕಾರ್ಯಗಳು ನಡೆದಿದೆ. We are going to give more and more attention to this Inland Fisheries, and see that it is going to be developed. ಮೊದಲು ನಾವು ಈ ಫಿಶ್‌ಗಳನ್ನು ಕಲ್ಕತ್ತಾದಿಂದ ತರಿಸುತ್ತಿದ್ದೆವು. We have to pay very heavily the freight and other things. We have stopped it for the last 3 years and we are increasing these fish seeds in our own State.

Sir, in the course of debate some hon, Members have made suggestions, ಮಾನ್ಯ ಚೌಡಯ್ಯನವರು ಮಾತನಾಡುತ್ತಾ ನನ್ನ ಕ್ಷೇತ್ರಗಳಲ್ಲಿ ಟ್ಯಾಂಕುಗಳಿವೆ ಎಂದರು. ಆದರೆ, there are full of weeds. There are certain weeds that can be removed by fish itself. ಅವರು ಹೇಳಿದ ಪ್ರಕಾರ ವೀಡ್ಸ್ ಅನ್ನು ಫಿಷ್‌ನಿಂದಲೇ ತೆಗೆಯುವುದಕ್ಕಾಗುವುದಿಲ್ಲ. We will devote attention and see that these weeds are removed in conjection with the Irrigation Department, because all the tanks are belongs to Irrigation Department. We will try to remove them. ಇನ್ನು ಅವರು ಫಿಷರೀಸ್ ಕೋ ಆಪರೇಟಿವ್ ಸೊಸೈಟಿಗಳಿಗೆ ಹೆಚ್ಚು ಹಣ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ನಾವು ಮಾಡಲಿಕ್ಕೆ ತಯಾರಿದ್ದೇವೆ. Unfortunately

some of these Co-operative Socities believe in one way traffic but not two way traffic. This aspect of the matter has to be taken into consideration. These societies should come forward to serve the general public. They should always see the interest of the fishermen. Anyway, we will look into that aspect of the matter. Nonetheless ನಿಮ್ಮ ಕ್ಷೇತ್ರದಲ್ಲಿರತಕ್ಕ ೨ ಸೊಸೈಟಿಗಳಿಗೆ ನಾವು ಧನ ಸಹಾಯ ಮಾಡುತ್ತೇವೆ. If these societies respond well we will try to help them. ಆ ಎರಡು ಸೊಸೈಟಿಗಳು ಯಾವುವೆಂದರೆ, ಅರಕೇರಿ ಫಿಷರಿ ಕೋ ಆಪರೇಟಿವ್ ಸೊಸೈಟಿ ಮತ್ತು ಶ್ರೀರಂಗಪಟ್ಟಣ ಕನ್ನಿಕಾ ಪರಮೇಶ್ವರಿ ಕೊ ಆಪರೇಟಿವ್ ಸೊಸೈಟಿ ಎಂದು. ಈ ಬಗ್ಗೆ ತಾವು ಕೊಟ್ಟ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ. ಇನ್ನು ನಮ್ಮ ಜಿಲ್ಲೆಯ ಮಾನ್ಯ ಆನಂದ ಕುಂದ ಹೆಗಡೆಯವರು ಜಟ್ಟಿಗಳಿಗೆ ಮತ್ತು ಲ್ಯಾಂಡಿಂಗ್ ಮೆಕ್ಯಾನೈಸ್ಡ್ ಪೋರ್ಟ್‌ಗಳಿಗೆ ಹೆಚ್ಚು ಗಮನ ಕೊಡಬೇಕೆಂದು ಸಲಹೆ ಮಾಡಿದ್ದಾರೆ ನಮ್ಮ ಕರಾವಳಿ ಪ್ರದೇಶದಲ್ಲಿ ೧೫ ಜಟ್ಟಿಗಳಿವೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ೯ ಜಟ್ಟಿಗಳಿವೆ. ಇವುಗಳಿಗೋಸ್ಕರವಾಗಿ ೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ; ಮತ್ತು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಇಷ್ಟೇ ಅಲ್ಲದೆ ರಿವರ್ ಮೋಷನ್ ಅನ್ನು ಕೂಡ ಟ್ರೆಚ್ ಮಾಡಬೇಕೆಂದು ಅವರು ಹೇಳಿದ್ದಾರೆ. ತತ್ಸಂಬಂಧವಾಗಿ ಈಗ ತಾನೇ ಕುಂದಾಪುರದಲ್ಲಿ We have already done that, and we are moving towards Honnavara. But, unfortunately rains are about to start. After the monsoon is over we will do silting. Then there are about 81 Fishery Roads on a length of 70 miles. ಈ ವರ್ಷ ಈ ರಸ್ತೆಗಳಿಗೋಸ್ಕರ ೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ ಇಲ್ಲಿ ಹೊಸ ರಸ್ತೆಗಳನ್ನು ಮಾಡಬೇಕಾಗಿರುವುದರಿಂದ ನಾವು ಅಷ್ಟು ಹಣವನ್ನು ಈ ವರ್ಷದಲ್ಲೇ ಖರ್ಚು ಮಾಡಲಿದ್ದೇವೆ. ಕೆಲವು ಕಡೆಗಳಲ್ಲಿ ನಮ್ಮ ಮಾರ್ಕೆಟ್ ಯಾರ್ಡ್ಸ್ ಕೂಡ ಹೋಗಿದೆ, ವಿಶೇಷವಾಗಿ ಮಾನ್ಯ ಆನಂದ ಕುಂದ ಹೆಗಡೆಯವರು ಹೇಳಿದ ಹಂಗರಕಟ್ಟೆ ಕೋಡೆ ಮಾರ್ಗವನ್ನು ರಿಪೇರಿ ಮಾಡಿದರೆ ಮೀನುಗಾರರಿಗೆ ಮತ್ತು ಅಲ್ಲಿಯ ಇತರ ಜನರಿಗೂ ಕೂಡ ನಿಜವಾಗಿಯೂ ಬಹಳ ಅನುಕೂಲವಾಗುತ್ತದೆ ಆದ್ದರಿಂದ, ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಖಂಡಿತ ರಿಪೇರಿ ಮಾಡುತ್ತೇವೆ.

ಶ್ರೀ ಪಿ. ರಾಮದೇವ್.— ಆ ರಸ್ತೆ ಏನಿದೆ, ಅಲ್ಲಿಂದ ಬಂದರಿಗೆ ಹೋಗತಕ್ಕ ರಸ್ತೆಯಲ್ಲಿ ವಾಹನಗಳು ಓಡಾಡುವುದಕ್ಕೆ ಆಗುವುದಿಲ್ಲ, ಅಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ, ಆದ್ದರಿಂದ, ಅದನ್ನು ದಯವಿಟ್ಟು ಸರಿಪಡಿಸಿ, ಫಿಷರೀಸ್ ರೋಡನ್ನು ಅಭಿವೃದ್ಧಿ ಮಾಡಿ.

ಶ್ರೀ ಪಿ. ಎಫ್. ರೋಡ್ರಿಗ್ಸ್.— ಫಿಷರಿಗೆ ದಯಮಾಡಿ ಹೋಗಬೇಡಿ, ಇರತಕ್ಕ ಭಾರವೇ ಜಾಸ್ತಿಯಾಗಿದೆ. ಅದು ಫಿಷರಿ ರಸ್ತೆಯಲ್ಲ, ಪಿ.ಡಬ್ಲ್ಯೂ.ಡಿ. ರಸ್ತೆ. Let that baby with the P.W.D. It is not my baby, ಮತ್ತೊಂದು ಏನು ಹೇಳಿದ್ದಾರೆಂದರೆ, ಫಿಷರ್‌ಮ್ಯಾನ್ ಮಕ್ಕಳಿಗೆ ಫಿಷರೀಸ್ ಕಾಲೇಜಿನಲ್ಲಿ ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಎಂದು. It has to be done. But there is one little difficulty. The Fisheries College is run by the Agricultural University and under that Act provision is made for reservation of seats. I will lead section 5(2) of the Act :

> "Section 2. Subject to the provision of sub-section(1) the State Government may direct the University, shall reserve in colleges, seats for Scheduled Castes snd Scheduled Tribes and such socially and educationally backward class of citizens as may be declared by the State Government in this behalf and where such direction have been given the University shall make reservation accordingly".

ಈಗ ಏನಾಗಿದೆ ಎಂದರೆ ಆ ಯೂನಿವರ್ಸಿಟಿ ಆಕ್ಟ್‌ನಲ್ಲಿ there is no definition of the fisherman', That is the difficulty. We are aware there is some dissatisfaction among the fishermen community in the State.

At present preference is not being given to the fishermen children in spite of the recent ordinance. We have also issued an ordinance to reserve 15 percent seats in the Agriculture Colleges. The definition 'Fisheries' is included in the Agricultural Sciences. ಇದನ್ನು ತಿದ್ದುಪಡಿ ಮಾಡುವುದಕ್ಕೋಸ್ಕರ ಒಂದು ಸೂಚನೆಯನ್ನು ಡೈರೆಕ್ಟರ್ ಆಫ್ ಫಿಷರೀಸ್‌ಗೆ ಕೊಟ್ಟಿದ್ದೇವೆ. This is being examined by the Government and suitable orders will be passed so that the difficulties faced by the children of fishermen is mitigated; We will try to see that proper representation is given to the fishermen children in Fisheries Colleges at Mangalore.

ಇನ್ನು ೫ ಕಿಲೋಮೀಟರ್‌ಗಿಂತ ಹೆಚ್ಚು ದೂರ ಹೋಗಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ನೋಡುತ್ತೇವೆ. ಇನ್ನು ಮಾನ್ಯ ಕಡಿದಾಳ್ ದಿವಾಕರ್ ಅವರು ನಮ್ಮ ಕಡೆ ಹೊಳೆಗಳಲ್ಲಿ ನ್ಯಾಚುರಲ್ ಫಿಷಷ್ ಸಾಯುತ್ತಿವೆ ಎಂದು ಹೇಳಿದ್ದಾರೆ. ಅದು ಸರ್ಕಾರದ ಗಮನಕ್ಕೆ ಕೂಡ ಬಂದಿದೆ. There are so many things that are responsible for this. ಏಕೆಂದರೆ ಈ ನದಿಗಳಲ್ಲಿ ಎಕ್ಸ್‌ಪ್ಲೋಷನ್ ಹಾಕಿಕೊಂಡು ಮೀನುಗಳನ್ನು ಹಿಡಿಯುತ್ತಾರೆ, ಹಾಗೂ ಡೈನಾಮೇಟ್ ಕೂಡ ಹಾಕಿ ಹಿಡಿಯುತ್ತಿದ್ದಾರೆ. ಇವತ್ತಿನ ದಿವಸ ಮೆಡಿಷನ್ಸ್ ಹಾಕಿಕೊಂಡು ಮೀನುಗಳನ್ನು ಹಿಡಿಯುವುದರಿಂದ ಹಲವಾರು ಮೀನುಗಳು ಸಾಯುತ್ತಿವೆ. ಇದು ಇರತಕ್ಕ ಸಮಸ್ಯೆಯಾದ್ದರಿಂದ ಇದನ್ನು ನೋಟ್ ಮಾಡಿಕೊಳ್ಳುತ್ತೇನೆ.

The hon. Member Sri Ananda Kunda Hegde requested the Government to think kindly about fishermen. I wish to bring to the notice of this House that we have got what is called the Fishermen Distress Relief Fund. Out of this fund, we are giving to the fishermen who have lost either their boats or nets some relief. Of course, it is only marginal. We are interested in making it meaningful and we hope to do so by getting proper funds for their benefit,

The hon. Member Sri Hegde also referred to inland transport from Mangalore to Coondapur. That matter is under investig tion and the Ports Department is investigating it. With these observations I request the Hon, Members to vote both the Demands.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಯವರು).— ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯಲ್ಲಿ ಮಂಡಿಸರತಕ್ಕ ಬೇಡಿಕೆಗಳಲ್ಲಿ ಅನೇಕ ಮಾನ್ಯ ಸದಸ್ಯರು ಮೈನರ್ ಇರಿಗೇಷನ್ ಬಗ್ಗೆ, ಫಿಷರೀಸ್ ಬಗ್ಗೆ ಮತ್ತು ಜೈಲುಗಳ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಅದಕ್ಕೆಲ್ಲಾ ನಾನು ಉತ್ತರ ಕೊಡಬೇಕಾದದ್ದು ಇದೆ. ಈ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಸುಮಾರು ೩೧ ಜನ ಮಾನ್ಯ ಸದಸ್ಯರು ಇದರ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ನಮ್ಮ ಡಿಮ್ಯಾಂಡ್‌ಗಳು ಜಾಸ್ತಿ ಇವೆ. ಇವೆಲ್ಲಾ ಡಿಮ್ಯಾಂಡ್‌ಗಳ ವಿಚಾರದಲ್ಲಿ ನಾನು ಉತ್ತರ ಕೊಡುವಾಗ ಸ್ವಲ್ಪ ಧೀರ್ಘವಾದ ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಈ ಮಾನ್ಯ ಸಭೆ ನಾನು ಉತ್ತರ ಕೊಡುವಾಗ ದಯಮಾಡಿ ಗಮನವಿಟ್ಟು, ಎಲ್ಲಾ ವಿಚಾರಗಳನ್ನು ಲಾಲಿಸಬೇಕೆಂದು ನನ್ನ ಆಶೆಯನ್ನು ವ್ಯಕ್ತಪಡಿಸುತ್ತೇನೆ. ಸ್ವಾಮಿ, ಈಗ ಇರತಕ್ಕಂಥ ಎಲ್ಲಾ ಬೇಡಿಕೆಗಳಲ್ಲಿ ಯಾವುದನ್ನು ಪ್ರಥಮವಾಗಿ ತೆಗೆದುಕೊಳ್ಳಬೇಕೆಂಬುದನ್ನು ಯೋಚಿಸಿ, ಮೊದಲು ಈ ಪ್ಲಾನಿಂಗ ಬಗ್ಗೆ ಮಾತನಾಡುವುದು ಸೂಕ್ತ ಎಂದು ನಾನು ಭಾವಿಸಿದ್ದೇನೆ. ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಕೆಲವಾರು ವರ್ಷಗಳಿಂದ ಕೆಲಸ ಮಾಡುತ್ತಿದೆ. ನಾವು ಮಾಡಿಕೊಂಡು ಬರುತ್ತಿರತಕ್ಕಂಥ ಕಾರ್ಯಕ್ರಮದಲ್ಲಿ ಇಂದು

ನಮ್ಮ ರಾಜ್ಯ ಏನಾದರೂ ಹೆಚ್ಚಿನ ಸಾಧನೆ ಮಾಡುವುದಕ್ಕೆ ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಸಹಾಯ ಕವಾಗಿದೆ ಎನ್ನತಕ್ಕಂಥ ವಿಚಾರ ನಾನು ನಿಮ್ಮ ಮುಂದೆ ಹೇಳತಕ್ಕಂಥ ವಿಷಯಗಳಿಂದ ಸಾಬೀತಾಗುತ್ತದೆ. ಯಾವ ರಾಜ್ಯದ ಬಗ್ಗೆಯಾಗಲೀ ಪ್ರಥಮತಃ ಅದರ ಆದಾಯ ಏನಿದೆ ಎನ್ನುವುದನ್ನು ನಾವು ನೋಡ ಬೇಕು. ಆಧಾಯವನ್ನು ತಿಳಿದು ನಾವು ವೆಚ್ಚ ಮಾಡಬೇಕು. ನಾವು ಈಗ ನಮ್ಮ ರಾಜ್ಯದ ಆದಾಯ ವನ್ನು ಯಾವ ಪ್ರಮಾಣದಲ್ಲಿ ಹೆಚ್ಚಿಸಿದ್ದೇವೆ ಎನ್ನುವ ಬಗ್ಗೆ ಅಂಕಿಅಂಶಗಳನ್ನು ನಿಮಗೆ ಕೊಟ್ಟಿರತಕ್ಕಂಥ ಪುಸ್ತಕದಲಿ ಹೇಳಿದ್ದೇವೆ. ಅದನ್ನು ಎಲ್ಲಾ ಮಾನ್ಯ ಸದಸ್ಯರು ಓದಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಈ ಬಗ್ಗೆ ಕೆಲವು ಅಂಕಿಅಂಶಗಳನ್ನು ನಿಮ್ಮ ಮುಂದೆ ಇಡುವುದಕ್ಕೆ ನಾನು ಬಯಸುತ್ತೇನೆ, ರೆವೆನ್ಯೂ ಕ್ಯಾಪಿಟಲ್ ಮತ್ತು ರೆವೆನ್ಯೂ ಅಕೌಂಟ್ ಎಂದು ಈ ಆದಾಯದಲ್ಲಿ ನಾವು ೨ ಭಾಗ ಮಾಡಿ ದ್ದೇವೆ. ಈ ಎರಡು ಭಾಗದಿಂದ ೧೯೭೨-೭೩ನೇ ಸಾಲಿಗೆ ೪೬೫ ಕೋಟಿ ರೂಪಾಯಿಗಳ ಆದಯ ಇತ್ತು ಈಗ ೧೯೭೯-೮೦ನೇ ಸಾಲಿಗೆ ಈ ರೆವಿನ್ಯೂ ಕ್ಯಾಪಿಟಲ್ ಮತ್ತು ರೆವಿನ್ಯೂ ಅಕೌಂಟ್ ಈ ಎರಡು ಭಾಗ ಸೇರಿ ೧೦೨೫ ಕೋಟಿ ರೂಪಾಯಿಗಳ ಆದಾಯ ಇದೆ. ಅದೇ ರೀತಿ ನಮ್ಮ ಖರ್ಚು ಕೂಡ ೧೯೭೨-೭೩ ರಲ್ಲಿ ೪೧೧ ಕೋಟಿ ರೂಪಾಯಿಗಳು ಇದ್ದದ್ದು ಈ ಸಾರಿ ಬಡ್ಜೆಟ್ ಎಸ್ಟಿಮೇಟ್ ಪ್ರಕಾರ ೧೧೩೬ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡತಕ್ಕಂಥ ಅಂದಾಜು ಇಟ್ಟುಕೊಂಡಿದ್ದೇವೆ. ಇದು ೭ ವರ್ಷಗಳಲ್ಲಿ (ಈ ಸಂದರ್ಭದಲ್ಲಿ ಮಾನ್ಯ ಎಚ್. ಟಿ. ಕೃಷ್ಣಪ್ಪನವರು ಮಾನ್ಯ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು) ಆದಾಯ ಮತ್ತು ಖರ್ಚು ಹೆಚ್ಚು ಕಡಿಮೆ ೩ ಪಟ್ಟು ಹೆಚ್ಚಿದೆ ಎನ್ನತಕ್ಕಂಥಾದ್ದು ಈ ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ. ೭ ವರ್ಷ ಗಳಲ್ಲಿ ೪೧೧ ಕೋಟಿ ರೂಪಾಯಿಗಳಿಂದ ೧೧೩೬ ಕೋಟಿ ರೂಪಾಯಿಗಳ ವರೆಗೆ ಏರಿದೆ. ಈ ವರ್ಷದ್ದನ್ನು ಸೇರಿಸಿ ನಾನು ಅಂಕಿಅಂಶಗಳನ್ನು ಹೇಳುತ್ತಿದ್ದೇನೆ. ಇದನ್ನು ಬಹುಶಃ ಮಾನ್ಯ ಸದಸ್ಯರೆಲ್ಲರೂ, ಇದೊಂದು ದೊಡ್ಡ ಸಾಧನೆ ಎಂಬುದನ್ನು ಒಪ್ಪುತ್ತಾರೆ. ಅದೇ ರೀತಿಯಾಗಿ ಪ್ಲಾನ್ ಔಟ್‌ಲೇಯಲ್ಲಿ ನಾವು ಪ್ಲಾನ್‌ಗೋಸ್ಕರ ಏನು ಖರ್ಚು ಮಾಡುತ್ತೇವೆ ಎನ್ನುವುದನ್ನು ನೋಡು ವುದಾದರೆ ೧೯೭೨-೭೩ರಲ್ಲಿ ಆನ್ಯುಯಲ್ ಪ್ಲಾನ್‌ನಲ್ಲಿ ೧೨೭ ಕೋಟಿ ರೂಪಾಯಿಗಳು ಇದ್ದದ್ದು ಈಗ ೧೯೭೯-೮೦ನೇ ಸಾಲಿಗೆ ೩೮೫ ಕೋಟಿ ರೂಪಾಯಿಗಳಾಗಿದೆ. ಇದನ್ನು ಪರ್‌ಕ್ಯಾಪಿಟ ಔಟ್‌ಲೇ ಪ್ರಕಾರ ಹಂಚಿದರೆ ೧೯೭೨-೭೩ರಲ್ಲಿ ೪೨ ರೂಪಾಯಿಗಳು ಇದ್ದದ್ದು ಈಗ ೧೯೭೯-೮೦ ನೇ ಸಾಲಿಗೆ ೧೧೮ ರೂಪಾಯಿಗಳು ಬರುತ್ತದೆ. ಆದ್ದರಿಂದ ಒಟ್ಟಾರೆ ಮೊತ್ತವಾಗಿ ಪ್ಲಾನ್ ಔಟ್‌ಲೇ ಮತ್ತು ಪರ್‌ಕ್ಯಾಪಿಟ ಔಟ್‌ಲೇ – ಈ ಎರಡೂ ಕೂಡ ೭ ವರ್ಷಗಳಲ್ಲಿ ಹೆಚ್ಚು ಕಡಿಮೆ ೩ ಪಟ್ಟು ಜಾಸ್ತಿಯಾಗಿದೆ. ಅದೇ ರೀತಿಯಾಗಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಮತ್ತು ನಾನ್‌ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಎಂದು ಎರಡು ಭಾಗ ಮಾಡಿದರೆ, ೧೯೭೨ನೇ ಇಸವಿಯಿಂದ ೧೯೭೯ನೇ ಇಸವಿಯವರೆಗೆ ಈ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ೨೧೦ ಕೋಟಿ ರೂಪಾಯಿಗಳಿಂದ ೬೮೫ ಕೋಟಿ ರೂಪಾಯಿಗಳವರೆಗೆ ಈ ಸಾಲಿಗೆ ಏರಿದೆ ಅದೇ ರೀತಿಯಾಗಿ ಪರ್‌ಕ್ಯಾಪಿಟ ಇನ್‌ಕ್ರೀಸ್ ತೆಗೆದುಕೊಂಡರೆ ೧೯೭೨-೭೩ನೇ ಸಾಲಿಗೆ ೭೦ ರೂಪಾಯಿ ಗಳಷ್ಟು ಡೆವೆಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಇದ್ದದ್ದು ಈಗ ೧೯೭೮-೭೯ನೇ ಸಾಲಿಗೆ ೨೦೪ ರೂಪಾಯಿಗೆ ಏರಿದೆ. ಈ ಬಗ್ಗೆ ಆಲ್ ಇಂಡಿಯಾ ಆವರೇಜ್ ಏನಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಂಡರೆ ಅದು ೧೪೯ ರೂಪಾಯಿ ಇದೆ. ಈ ಆಲ್ ಇಂಡಿಯಾ ಆವರೇಜ್‌ಗಿಂತ ನಾವು ಇದರಲ್ಲಿ ಬಹಳ ಮುಂದೆ ಇದ್ದೇವೆ. ಅವರದು ೧೪೯ ರೂಪಾಯಿಗಳಾದರೆ ನಮ್ಮ ಕರ್ನಾಟಕದ ಪರ್‌ಕ್ಯಾಪಿಟ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಈಗ ೧೮೫ ರೂಪಾಯಿಗಳಾಗುತ್ತಿದೆ. ಆದ್ದರಿಂದ ನಮ್ಮದು ಅವರದ್ದಕ್ಕಿಂತ ಜಾಸ್ತಿ ಇದೆ, ಮತ್ತೆ ಬೇರೆ ರಾಜ್ಯಗಳಿಗೆ ಹೋಲಿಸಿಕೊಂಡರೆ ನಮ್ಮ ರಾಜ್ಯ ಮೂರನೇ ಸ್ಥಾನದಲ್ಲಿದೆ. ಹರಿಯಾಣ ಮೊದಲನೆ ಸ್ಥಾನದಲ್ಲಿದೆ, ಪಂಜಾಬ್ ಎರಡನೇ ಸ್ಥಾನದಲ್ಲಿದೆ ಮತ್ತು ನಾವು ಮೂರನೇ ಸ್ಥಾನದಲಿ ದ್ದೇವೆ. ಮಹರಾಷ್ಟ್ರ ಮತ್ತು ನಮ್ಮದು ಹೆಚ್ಚು ಕಡಿಮೆ ಒಂದೇ. ಹಾಗೆಯೇ ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ಖರ್ಚನ್ನೂ ಹೋಲಿಕೆ ಮಾಡಬೇಕಾಗುತ್ತದೆ, ಪ್ರಪೋರ್ಷನೇಟ್ ಆಗಿ ತೆಗೆದುಕೊಂಡರೆ ಅಭಿವೃದ್ಧಿ ಖರ್ಚು ೧೯೭೬-೭೭ರಲ್ಲಿ ಶೇಕಡ ೬೦ರಷ್ಟು ಇದ್ದದ್ದು ೧೯೭೮-೭೯ರಲ್ಲಿ ಶೇಕಡ ೬೩ಕ್ಕೆ ಏರಿದೆ. ಅಭಿವೃದ್ಧಿಯೇತರ ಖರ್ಚು ೧೯೭೬-೭೭ ರಲ್ಲಿ ಶೇಕಡ ೪೦ರಷ್ಟು ಇದ್ದದ್ದು ೧೯೭೮-೭೯ರಲ್ಲಿ ಶೇಕಡ ೩೭ಕ್ಕೆ ಇಳಿದಿದೆ. ಇದು ನಾವು ಶ್ಲಾಘನೆ ಪಡತಕ್ಕ ವಿಚಾರ. ಬಹುಶ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಶ್ಲಾಘನೆ ಮಾಡುತ್ತಾರೆಂದು ನನ್ನ ಭಾವನೆ.

೨-೦೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾನು ತಮಗೊಂದು ನೋಟ್ ಕೊಟ್ಟಿದ್ದೇನೆ. ಅದನ್ನು ತಾವು ನೋಡಬೇಕು. ಈಗ ತಾವು ಫಿಜಿಕಲ್ ಅಚೀವ್‌ಮೆಂಟನ್ನು ಹೇಳಿ. ಅದರಲ್ಲೇನಾಗಿದೆ ಎನ್ನುವುದು ಮುಖ್ಯ.

ಶ್ರೀ ಡಿ. ದೇವರಾಜ ಅರಸ್.— ತಾವು ಕೊಟ್ಟಿರುವ ನೋಟ್ ನನ್ನ ಬಳಿ ಇದೆ. ಅದನ್ನು ಓದಿದ್ದೇನೆ. ಫಿಜಿಕಲ್ ಅಚೀವ್‌ಮೆಂಟ್ ಏನಾಗಿದೆ ಎಂಬುವನ್ನು ಆ ವಿಚಾರ ಬಂದಾಗ ಹೇಳುತ್ತೇನೆ. ಈಗ ರೂಪಾಯಿಯ ಮೌಲ್ಯ ತೆಗೆದುಕೊಂಡರೆ, ಅದು ೧೯೭೨ರಲ್ಲಿ ೩೯ ಪೈಸೆ ಇತ್ತು, ೧೯೭೩ ರಲ್ಲಿ ೩೩ಪೈಸೆ ಇತ್ತು, ೧೯೭೮ರಲ್ಲಿ ೨೮ ಪೈಸೆ ಇತ್ತು, ಜನವರಿ ೧೯೭೯ಕ್ಕೆ ೨೭ ಪೈಸೆ ಇತ್ತು. ಇದನ್ನು ಗಣನೆಗೆ ತೆಗೆದುಕೊಂಡೇ ನಾನು ರಿಯಲ್ ಕಂಟೆಂಟ್ ಆಫ್ ದಿ ಔಟ್‌ಲೇ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ೬೬ ಪರ್ಸೆಂಟ್‌ಗೆ ಏರಿದೆ ಎಂದು ಹೇಳಿದ್ದು. ನಿನ್ನು ಗ್ರಾಸ್ ನ್ಯಾಷನಲ್ ಪ್ರಾಡಕ್ಟ್ ತೆಗೆದುಕೊಂಡರೆ ನಮ್ಮ ರಾಜ್ಯದ ವರಮಾನ ಹೀಗಿದೆ.— ೧೯೭೩-೭೪ನೇ ಸಾಲಿನಲ್ಲಿ ೩,೦೦೨ ಕೋಟಿ ರೂಪಾಯಿಗಳು ಮತ್ತು ಈಗ, ಅಂದರೆ ೧೯೭೮-೭೯ನೇ ಸಾಲಿನಲ್ಲಿ ೩,೯೫೭ ಕೋಟಿ ರೂಪಾಯಿಗಳು. ಇದರಲ್ಲಿ ಏರಿಕೆಯನ್ನು ನಾವು ಗಮನಿಸಬಹುದು, ಪ್ರಸ್ತುತ ಬೆಲೆಯ ತಲಾ ವರಮಾನ ತೆಗೆದುಕೊಂಡರೆ ೧೯೭೩-೭೪ರಲ್ಲಿ ೯೭೪ ರೂಪಾಯಿ ಇದ್ದದ್ದು ೧೯೭೮-೭೯ ರೊಳಗೆ ೧೧೬೨ ರೂಪಾಯಿಗಳಾಯಿತು. ಈಗ ಸ್ಥಿರ ಬೆಲೆ ಮತ್ತು ಪ್ರಸ್ತುತ ಬೆಲೆಯನ್ನು ನೋಡುವುದಾದರೆ ಅದು ಹೀಗಿದೆ.—

	ಪ್ರಸ್ತುತ ಬೆಲೆ	ಸ್ಥಿರ ಬೆಲೆ
೧೯೭೦-೭೧	೭೧೯	೭೧೯
೧೯೭೪-೭೫	೧೦೭೭	೬೯೯
೧೯೭೫-೭೬	೧೫೦೦	೭೦೨
೧೯೭೬-೭೭	೯೯೯	೬೩೧
೧೯೭೭-೭೮	೧೧೪೧	೭೩೦
೧೯೭೮-೭೯	೧೧೬೨	೭೪೬

ಇನ್ನು ಫಿಜಿಕಲ್ ಪ್ರೋಗ್ರೆಸ್ ಅಥವಾ ಟಾರ್ಗೆಟ್ಸ್ ನೋಡೋಣ. ಇದನ್ನು ಪರಿಗಣಿಸಲು ಕೆಲವು ಆಯ್ದ ಎಕಾನಮಿಕ್ ಇಂಡಿಕೇಟರ್ಸ್‌ನ್ನು ತೆಗೆದುಕೊಳ್ಳಲಾಗಿದೆ.

(ಲಕ್ಷ ಟನ್‌ಗಳಲ್ಲಿ)

	೧೯೭೩-೭೪	೧೯೭೭-೭೮	೧೯೭೮-೭೯
ಆಹಾರ ಧಾನ್ಯಗಳ ಉತ್ಪತ್ತಿ ಹೀಗಿದೆ:—	೬೬.೪	೭೧.೧	೭೫
ಹತ್ತಿ ಉತ್ಪತ್ತಿ ಹೀಗಿದೆ: (ಲಕ್ಷ ಬೇಲುಗಳಲ್ಲಿ)	೭.೧	೯	೧೧
ಎಣ್ಣೆ ಬೀಜಗಳ ಉತ್ಪತ್ತಿ		೭.೭	೧೦.೬
ಕಬ್ಬಿನ ಉತ್ಪತ್ತಿ	೯೩.೯	೧೧೧.೨	೧೧೨
ನೀರಾವರಿ ಸೌಲಭ್ಯವನ್ನು ಭಾರಿ, ಮಾಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಂದ ಹಾಗೂ ಬಾವಿಗಳಿಂದ (ಲಕ್ಷ ಹೆಕ್ಟೇರ್‌ಗಳಲ್ಲಿ)	೧೫.೧೫	೨೦.೩	೨೧.೨
ಜನರೇಷನ್ ಆಫ್‌ಎಲೆಕ್ಟ್ರಿಸಿಟಿ (ಮಿಲಿಯನ್ ಯೂನಿಟ್‌ಗಳಲ್ಲಿ)	೪೫೭೦	೪೭೨೩	೬೫೩೫
ಹಳ್ಳಿಗಳಿಗೆ ಮತ್ತು ಹ್ಯಾಮ್ಲೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸಿರುವುದು	೧೫,೪೭೨	೧೮,೪೫೮	೧೯,೦೮೦
ಪಂಪ್ ಸೆಟ್ಸ್ (ಲಕ್ಷಗಳಲ್ಲಿ)	೧.೯	೨.೬	೨.೭೩

ಇನ್ನು ಇಂಡಸ್ಟ್ರಿಯಲ್ ಕ್ಯಾಪಾಸಿಟಿ ಯುಟಿಲೈಜೇಷನ್‌ನ್ನು ಕೆಲವು ಕೈಗಾರಿಕೆಗಳ ಉದಾಹರಣೆಯೊಂದಿಗೆ ನೋಡಿದಾಗ ಇದರಲ್ಲಿ ಎಸ್ಟಾಬ್ಲಿಷ್ ಕ್ಯಾಪಾಸಿಟಿ ಮತ್ತು ಐಡ್ಲ್ ಕ್ಯಾಪಾಸಿಟಿ ಎಂದು ಎರಡು

ವಿಧಗಳಿವೆ. ಸಾಮಾನ್ಯವಾಗಿ ಕ್ಯಾಪಾಸಿಟಿ ಯುಟಿಲೈಜೇಷನ್ ಎಸ್ಟಾಬ್ಲಿಷ್ಡ್ ಕ್ಯಾಪಾಸಿಟಿಗಿಂತ ತುಂಬಾ ಕಡಿಮೆ ಇರುವುದು ಒಂದೊಂದು ಕಡೆ ಕಂಡುಬರುತ್ತದೆ. ಸಿಮೆಂಟ್, ಸೋಪ್, ಮೆಷಿನ್ ಟೂಲ್ಸ್, ಕೆಮಿಕಲ್ ಮಿಷಿನರಿ- ಇವುಗಳನ್ನು ತೆಗೆದುಕೊಂಡಾಗ ಕ್ಯಾಪಾಸಿಟಿ ಯುಟಿಲೈಜೇಷನ್ ಶೇಕಡ ೨೨ ರಿಂದ ಶೇಕಡ ೮೬ ವರೆಗೆ ವೇರೀಡ್ ಆಗಿರುವುದು ಕಂಡುಬರುತ್ತದೆ. ಅಂದರೆ, ೧೦೦ನ್ನು ೮೬ ಅಂತ ಇಟ್ಟು ಕೊಂಡರೆ ೧೪ ಪರ್ಸೆಂಟ್ ಐಡ್ಲ್ ಆಗುತ್ತೆ. ೨೨ ಅಂತ ಇಟ್ಟುಕೊಂಡರೆ ೭೮ ಪರ್ಸೆಂಟ್ ಐಡ್ಲ್ ಆಗುತ್ತದೆ. ಇದು ಯಾವುದಕ್ಕೆ ಅಂದರೆ, ಸೋಪ್ಸ್, ಸ್ಕೂಟರ್ಸ್ ಹಾಗೂ ಟೈರ್ಸ್; ಈ ಎಕ್ಸೆಸ್ ಕ್ಯಾಪಾಸಿಟಿ ನಾನು ಹೇಳತಕ್ಕದ್ದು ಆಲ್ ಇಂಡಿಯಾ ಪೊಜಿಷನ್; ನಮ್ಮ ಕರ್ನಾಟಕದ್ದು ಇನ್ನು ಬೆಟರ್ ಆಗಿದೆ. Degree of utilisation of capacity in our State from 37 per cent to 87 per cent. ಈ ಎಕ್ಸೆಸ್ ಆಫ್ ಕ್ಯಾಪಾಸಿಟಿ ಯಾವುದಕ್ಕೆ ಅಂದರೆ, ಸ್ಟೋರೇಜ್ ಬ್ಯಾಟರೀಸ್, ಸ್ಕೂಟರ್ಸ್ ಟೈರ್ಸ್ ಇತ್ಯಾದಿ. ೧೦೦ ಪರ್ಸೆಂಟ್ ಮೇಲೆ ಕೂಡ ಹೋಗಿದ್ದಾರೆ. ಇದರಲ್ಲಿ ಲೆಕ್ಕದಲ್ಲಿ ನಾವು ಇಂಡಸ್ಟ್ರಿಯಲ್ ಗ್ರೋತ್ ಪ್ರೊಡಕ್ಷನ್ ಅದಲ್ಲದೆ ಮಾಡದಿದ್ದರೆ: During 1978-79 it is estimated to be about 10 per cent as against all-India average of 8.5 per cent... ಹಾಗೆ ಮಾತನಾಡಿದಂಥ ಬಹುಮಂದಿ ಮಾನ್ಯ ಸದಸ್ಯರು ಎಂಪ್ಲಾಯಿಮೆಂಟ್ ಅಫರ್‌ಮೇಷನ್ ಸ್ಕೀಮನ್ನು ಒಳ್ಳೆಯ ಸ್ಕೀಮೆಂದು ಸರ್ವಸಾಮಾನ್ಯವಾಗಿ ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲಲ್ಲೇ ಕೆಲವು ಲೋಪ ದೋಷಗಳಿವೆಯೆಂದು ಇಬ್ಬರು ಮಾನ್ಯ ಸದಸ್ಯರು ತಮ್ಮ ಅಸಮಾಧಾನವನ್ನು ವ್ಯಕ್ತ ಮಾಡಿದ್ದಾರೆ. ಇವರ ದೃಷ್ಟಿ ಏನು ಅಂದರೆ ಹೆಚ್ಚು ಹಣ ಖರ್ಚು ಆಗಲಿಲ್ಲ ಎನ್ನುವುದು ಒಂದು; ಕೆಲವುಕಡೆ ದುರುಪಯೋಗ ಪಡಿಸುತ್ತಿದ್ದಾರೆನ್ನುವುದು ಇನ್ನೊಂದು. ಇರಬಹುದು, ಅದನ್ನು ಸರಿಪಡಿಸುವುದಕ್ಕೆ ನಾವು ನೀವು ಎಲ್ಲ ಸೇರಿ ಮಾಡಬೇಕಾಗಿದೆ. ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಂನ್ನು ಸುಮಾರು ೪೫ ತಾಲ್ಲೂಕುಗಳಲ್ಲಿ ಜಾರಿಗೆ ತಂದಿದ್ದೇವೆ. ಮತ್ತೆ ೪೫ ತಾಲ್ಲೂಕುಗಳನ್ನು ಈ ಯೋಜನೆಗೆ ಆಯ್ಕೆ ಮಾಡಿದ್ದೇವೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಸುಮಾರು ಒಂದೂವರೆ ಲಕ್ಷ ಜನಕ್ಕೆ ಈ ಯೋಜನೆಯಲ್ಲಿ ಉದ್ಯೋಗ ಕೊಡುವುದಕ್ಕೆ ಸಾಧ್ಯವಾಗಿದೆಯೆಂದು ಲೆಕ್ಕದಿಂದ ಗೊತ್ತಾಗಿದೆ. ಮುಂದಿನ ತಿಂಗಳು ಮಳೆಗಾಲ ಪ್ರಾರಂಭವಾದಂದರಿಂದ ಜನಗಳ ಸಂಖ್ಯೆ ಕಡಿಮೆಯಾಗಬಹುದು; ಈ ತಿಂಗಳ ಕೊನೆಯೊಳಗೆ ಎರಡು ಲಕ್ಷಕ್ಕೆ ಏರಬಹುದೆಂದು ನಿರೀಕ್ಷೆ ಮಾಡಲಾಗಿದೆ. ಉಳಿದಂಥ ತಾಲ್ಲೂಕುಗಳನ್ನು ೮೩ನೇ ಇಸವಿಯೊಳಗೆ ಕವರ್ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

ಮತ್ತೆ ಸ್ಟೈಫಂಡರಿ ಎಂಪ್ಲಾಯಿಮೆಂಟ್ ಬಗ್ಗೆ ಕೆಲವು ಸದಸ್ಯರು ಬೇಡ ಅನ್ನುವವರೆವಿಗೂ ಮಾತನಾಡಿದ್ದಾರೆ. ಅವರ ದೃಷ್ಟಿ ಏನು ಅಂದರೆ ನಾವು ಸುಮ್ಮನೆ ದುಡ್ಡು ಕೊಡುತ್ತಿದ್ದೇವೆ; ಅವರನ್ನು ಉಪಯೋಗಮಾಡಿಕೊಳ್ಳುತ್ತಿಲ್ಲ ಎನ್ನುವುದು. ಈ ಯೋಜನೆಯಿಂದ ಸೋಮಾರಿತನ ಬೆಳೆಸುವುದಕ್ಕೆ ಅವಕಾಶವಾಗಿದೆಯೆಂದು ಹೇಳಿದರು. ನಾವು ಕೊಡುತ್ತಿರುವ ಹಣದಿಂದ ೧೨ ಸಾವಿರ ಜನ ಪೋಸ್ಟ್‌ಗ್ರಾಜುಯೇಟ್ಸ್‌ಗಳಿಗೆ ಉದ್ಯೋಗ ಸಿಕ್ಕಿದೆ; ಇದರಲ್ಲಿ ಡಿಪ್ಲೊಮಾ ಆಗಿರುವವರು ಸೇರಿದ್ದಾರೆ. ತಾವುಗಳು ಹೇಳಿದಂತೆ ಕೆಲವುಕಡೆ ಈ ಜನರಿಂದ ಕೆಲಸ ತೆಗೆದುಕೊಳ್ಳುತ್ತಿಲ್ಲ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಈ ಸ್ಕೀಮೇ ಬೇಡ ಅಂತ ಆಧಾರವಾಗಿಟ್ಟುಕೊಂಡು ಹೇಳಿದ್ದು ಸಾಧುವಾಗಿ ಕಾಣಲಿಲ್ಲ. ಈ ಸ್ಕೀಮಿನಲ್ಲಿ ಕೆಲಸಮಾಡುವುದಕ್ಕೆ ಬೇಕಾದಷ್ಟು ಇದೆ; ಈ ಯೋಜನೆಯನ್ನು ಹೊಸದಾಗಿ ಪ್ರಾರಂಭ ಮಾಡಿರುವುದರಿಂದ ಕೆಲವು ತೊಂದರೆಗಳು ಬಂದಿರಬಹುದು. ಕೆಲವರು ಹಣ ತೆಗೆದುಕೊಂಡಿರಬಹುದು; ಆದರೆ ಹೆಚ್ಚು ನಿಗಾ ಕೊಡುವುದಕ್ಕೆ ಪ್ರಯತ್ನ ಮಾಡೋಣ.

ಮತ್ತೆ ಸಣ್ಣರೈತರ ಅಭಿವೃದ್ಧಿ ಏಜನ್ಸಿ ಹಾಗೂ ಮಾರ್ಜಿನಲ್ ಫಾರ್ಮರ್ಸ್ ಅಗ್ರಿಕಲ್ಚರ್ಸ್ ಲೇಬರ್ ಪ್ರೋಗ್ರಾಂನ್ನು ಮೊದಲಿಗೆ ೧೦ ಜಿಲ್ಲೆಗಳಲ್ಲಿ ಶುರು ಮಾಡಿದೆವು. ಪ್ರಸ್ತುತ ವರ್ಷದಲ್ಲಿ ಉಳಿದಂಥ ೯ ಜಿಲ್ಲೆಗಳನ್ನು ಈ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಒಟ್ಟು ೧೯ ಜಿಲ್ಲೆಗಳನ್ನು ಕವರ್ ಮಾಡಲಾಗಿದೆ. ಈ ಸ್ಕೀಮನ್ನು ಪ್ರಾರಂಭದಲ್ಲಿ ೧೦ ಜಿಲ್ಲೆಗಳಲ್ಲಿ ಶುರು ಮಾಡಿದಾಗ ಅನೇಕ ಮಾನ್ಯ ಸದಸ್ಯರು ನಮ್ಮ ಜಿಲ್ಲೆಗಿಲ್ಲ; ನಮ್ಮ ತಾಲ್ಲೂಕಿಗಿಲ್ಲ ಅಂತ ಹೇಳಿದ್ದು ನನಗೆ ಜ್ಞಾಪಕ ಇದೆ. ಹಿಂದಿನ ಸಾಲಿನಲ್ಲೂ ಮತ್ತು ಅದರ ಹಿಂದಿನ ಸಾಲಿನಲ್ಲೂ ಮಾನ್ಯ ಸದಸ್ಯರು ಹೇಳಿದ್ದರು; ಇವತ್ತು ಆ ಕೊರತೆ ಇಲ್ಲ; ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ಎರಡು ಯೋಜನೆಗಳನ್ನು ಜಾರಿಗೆ ತರುವ ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆಯಿಂದ ಕುಶಲಕರ್ಮಿಗಳಿಗೆ, ಕೃಷಿಕಾರ್ಮಿಕರಿಗೆ, ಅರ್ಧ ಎಕರೆ ಒಂದು ಎಕರೆ ಇರತಕ್ಕ ಮಾರ್ಜಿನಲ್ ಫಾರ್ಮರ್ಸ್‌ಗಳಿಗೆ; ೫ ಎಕರೆ ಒಳಗೆ ಇರತಕ್ಕ ಸಣ್ಣ ರೈತರಿಗೆ ಈ ಯೋಜನೆಯಡಿಯಲ್ಲಿ ಬರುತ್ತಾರೆ; ಇದರ ಉಪಯೋಗ ಇವರೆಲ್ಲರಿಗೂ ದೊರೆಯುತ್ತದೆ.

ವಿಶ್ವಬ್ಯಾಂಕಿನಿಂದ ಸಾಮಾನ್ಯವಾಗಿ ಅನೇಕ ಯೋಜನೆಗಳಿಗೆ ದುಡ್ಡು ಬರುತ್ತಿದೆ. ಕೇಂದ್ರದಲ್ಲಿ ಹೊಸ ಸರ್ಕಾರ ಬಂದಮೇಲೆ ೭೭ ಪರ್ಸೆಂಟ್ ಸಹಾಯ ರಾಜ್ಯಗಳಿಗೆ ಕೊಂಡುವಂತೆ ಮಾಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಲೇ ಬೇಕು. To that extent I must compliment them. But now we are asking for 100 per cent to pass on whatever loan assis. tance is fotrhcoming from the World Bank for a particular scheme– Again we are urging the Central Government to pass on the entire amount. ಅವರ ವಾದವೇ ಬೇರೆ. ನಿಮ್ಮ ಒಬ್ಬರಿಗೇ ಕೊಟ್ಟರೆ ಹೇಗೆ? ನಮಗೆ ನ್ಯಾಷನಲ್ ಗಿಲ್ಡ್‌ನಲ್ಲಿ ದುಡ್ಡು ಕಡಿಮೆಯಾಗುತ್ತದೆಂದು ಹೇಳುತ್ತಾರೆ. ಅದಕ್ಕಿಂತ ಮುಖ್ಯವಾಗಿ ಇನ್ನೊಂದು ವಿಚಾರ ಅವರಿಗೆ ಹಣ ಬರತಕ್ಕಂಥಾದ್ದರ ಬಗ್ಗೆ ಮುಕ್ಕಾಲು ಪರ್ಸೆಂಟ್ ಸರ್ವೀಸ್ ಚಾರ್ಜ್ ಅಂತ ಹಾಕುತ್ತಾರೆ. ಈ ವಿಚಾರವನ್ನು ನಾನು ರಾಷ್ಟ್ರೀಯ ಅಭಿವೃದ್ಧಿ ಸಮಿತಿಯಲ್ಲಿ ಒಂದುಸಾರಿ ಅಲ್ಲ; ಎರಡಾವರ್ತಿ ಹೇಳಿದ್ದೇನೆ. ಈ ವಿಚಾರದಲ್ಲಿ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳೂ ಕೂಡ ಹೇಳಿದ್ದಾರೆ. ಅವರು ಮುಕ್ಕಾಲು ಪರ್ಸೆಂಟ್ ಕೊಟ್ಟು ನಮಗೆ ಕೊಡತಕ್ಕ ಹಣಕ್ಕೆ ಐದುಕಾಲು ಪರ್ಸೆಂಟ್ ಬಡ್ಡಿ ಹಾಕುವುದು ನ್ಯಾಯವೆ? ಈ ಮಾನ್ಯ ಸಭೆ ಕೂಡ ಈ ಮಾತನ್ನು ಒಪ್ಪುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ನಮಗೆ ಹಣ ಸಾಲಕೊಟ್ಟು ಅದರ ಮೇಲೆ ಐದುಕಾಲು ಪರ್ಸೆಂಟ್ ಬಡ್ಡಿ ಹಾಕಿ ಸಂಪಾದನೆ ಮಾಡತಕ್ಕ ವ್ಯವಹಾರಕ್ಕೆ ಹೋಗಬಾರದು. ಕೇಂದ್ರಸರ್ಕಾರಕ್ಕೆ ಏನು ಖರ್ಚುಬೀಳುತ್ತದೋ ಅದನ್ನು ಹಿಡಿದುಕೊಳ್ಳಲಿ; ಇವರು ಮುಕ್ಕಾಲು ಪರ್ಸೆಂಟ್ ಕೊಟ್ಟು ನಮಗೆ ಹೆಚ್ಚಿಗೆ ನಾಲ್ಕುವರೆ ಪರ್ಸೆಂಟ್ ಬಡ್ಡಿ ಹಾಕುವುದು ಸರಿಯೆ ? ಇದು ಯಾವ ನ್ಯಾಯ? ಇದರಲ್ಲಿ ನ್ಯಾಯ ಇಲ್ಲ, ತಾವು ಇದನ್ನು ಕಡಿಮೆ ಮಾಡಲೇ ಬೇಕು, ಮುಕ್ಕಾಲು ಪರ್ಸೆಂಟ್ ಇದ್ದರೆ ಇನ್ನೂ ಒಂದು ಪರ್ಸೆಂಟ್ ಹಾಕಲಿ, ಬೇಕಾದರೆ ಎರಡು ಪರ್ಸೆಂಟ್ ಹಾಕಲಿ ಅದನ್ನು ಬಿಟ್ಟು ಎರಡೂವರೆ ಪರ್ಸೆಂಟ್ ನಮ್ಮಿಂದ ಹೆಚ್ಚು ವಸೂಲು ಮಾಡುತ್ತಾ ಇರುವುದು ನಮ್ಮ ರಾಜ್ಯಕ್ಕೆ ಅನ್ವಯಿಸುವುದೇ ಅಲ್ಲ ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಇದನ್ನು ಕಡಿಮೆಮಾಡಲೇ ಬೇಕು ಎಂದು ಹಿಂದೆ ಕೂಡ ಹೇಳುತ್ತಿದ್ದೆ ಈಗಲೂ ಕೂಡ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಈ ತೆರಿಗೆಗಳ ಬಗ್ಗೆ ಕೆಲವರು ಮಾನ್ಯ ಸದಸ್ಯರು ಈ ತೆರಿಗೆಗಳನ್ನು ಕರ್ನಾಟಕದಲ್ಲಿ ಜಾಸ್ತಿ ಹಾಕುತ್ತಿದ್ದಾರೆಂದು ಹೇಳುತ್ತಿದ್ದರು, ಈಗ ಒಂದು ಭಾವನೆ ಏನಿದೆ ಆ ಭಾವನೆ ಆಧಾರ ರಹಿತವಾದುದು ಅದನ್ನು ನಾನು ತಮ್ಮ ಮುಂದೆ ಅಂಕಿಅಂಶಗಳಿಂದ ಸ್ಪಷ್ಟಪಡಿಸುತ್ತೇನೆ. ಈಗ ನಮ್ಮಲ್ಲಿ ಸರ್ವೇಸಾಧಾರಣವಾಗಿ ಒಂದು ನಂಬಿಕೆ, ಭಾವನೆ ಏನಿದೆ, ಸರ್ಕಾರ ಎಲ್ಲಾ ಮಾಡಲಿಕ್ಕೆ ಇದೆ, ಟ್ಯಾಕ್ಸ್ ಕೊಡುವುದಕ್ಕಲ್ಲ ನಾವು ಎಂದು ಇದೆ. ಇವೊತ್ತು ಯಾರೇ ಅಧಿಕಾರಕ್ಕೆ ಬರಲಿ, ಯಾವ ಪಕ್ಷವೇ ಬರಲಿ, ಈ ಭಾವನೆಗೆ ಪ್ರೋತ್ಸಾಹ ಕೊಟ್ಟಿದ್ದೇ ಆದರೆ ಇದು ನಿಜಕೂ ದೇಶಕ್ಕೆ ಹಾನಿಕರವಾದುದು. ಈ ಭಾವನೆ ಬರಲಿಕ್ಕೆ ಇನ್ನೊಂದು ಹಿನ್ನೆಲೆ ಇದೆ, ಈ ತೆರಿಗೆಯನ್ನು ಯಾರು ಕೊಡುತ್ತಾರೆ, ಹೆಚ್ಚಾಗಿ ಯಾವುವರಿಂದ ಬರುತ್ತದೆ. ಈಗ ನಮಗೆ ಭೂ ಕಂದಾಯ ಏನು ಹೆಚ್ಚು ಬರುವುದಿಲ್ಲ. ಭೂ ಕಂದಾಯ ನಮಗಿರತಕ್ಕ ಆದಾಯದಲ್ಲಿ ಬಹಳ ಕಡಿಮೆ ಭಾಗ. ಆಗ ೫ ಎಕರೆಗಿಂತಲೂ ಕಡಿಮೆ ಇರತಕ್ಕವನು ಕಂದಾಯ ಕೊಡುವ ಹಾಗೆ ಇಲ್ಲ ಅದನ್ನು ಮಾಡಿದ್ದೇವೆ. ಹೆಚ್ಚು ಆದಾಯ ಬರತಕ್ಕವರು. ಹೆಚ್ಚು ಭೂಮಿ ಉಳ್ಳವರು ಭೂ ಕಂದಾಯ ಕೊಡುತ್ತಾರೆ. ಈಗ ನಾವು ಹೊಸದಾಗಿ ನಿರ್ಮಾಣ ಮಾಡುತ್ತಾ ಇರತಕ್ಕ ಪ್ರಾಜೆಕ್ಟ್‌ಗಳು ಏನಿವೆ ಅಲ್ಲಿ ಬೆಟರ್‌ಮೆಂಟ್ ಲೆವಿ ಕೊಡಿ ಎಂದು ಕೇಳುತ್ತಾರೆ ಎನ್ನುವುದು ಒಂದು ಕಡೆ ಮಾತು. ಇನ್ನೊಂದು ಕಡೆ ಫಾರೆಸ್ಟ್‌ನಿಂದ ಬರುವ ಆದಾಯ ಇದೆ, ಎಕ್ಸೈಜ್‌ನಿಂದ ಬರುವ ಆದಾಯ ಇದೆ. ಈಗ ದೊಡ್ಡ ಭಾಗದಲ್ಲಿ ಬರತಕ್ಕದ್ದು ಸೇಲ್ಸ್‌ಟ್ಯಾಕ್ಸ್‌ನಿಂದ. ಈಗ ನಾವು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ಹಾಕಿದ್ದೇವೆ. ಅದು ಏನು ಅಷ್ಟು ದೊಡ್ಡ ಪ್ರಮಾಣದಲ್ಲಿ ಬರುವುದಿಲ್ಲ. ಇದು ಹೆಚ್ಚು ಭಾಗ ಬರತಕ್ಕದ್ದು ಕಾಫಿ ಬೆಳೆಗಾರರಿಗೆ. ಇದರ ಜೊತೆಗೆ ಕೇಂದ್ರದಿಂದ ಡೆವಲ್ಯೂಷನ್ ಆಫ್ ಫಂಡ್ಸ್ ಅದು ಒಂದು ಭಾಗ ಬರುತ್ತದೆ; ಇತ್ತೀಚೆಗೆ ಈ ಸಾರಿ ತೀರ್ಮಾನ ಮಾಡಿದ್ದಾರೆ ಸೆಂಟ್ರಲ್ ಸ್ಟಾನ್ಸ್‌ಫರ್ಡ್ ಸ್ಕೀಮ್ ಎಂದು ಏನಿದೆ ಅದರಲ್ಲಿ ಒಂದು ಭಾಗ ಕೊಡುತ್ತೇವೆ ನೀವೇ ಮಾಡಿ ಎಂದು ಹೇಳಿದ್ದಾರೆ. ಇವೊತ್ತು ಟ್ಯಾಕ್ಸ್ ಹೆಚ್ಚಿಗೆ ಮಾಡುವುದು ಬೇಡ, ವಾಟರ್ ರೇಟ್ ಕೊಡುವುದು ಬೇಡ, ಬೆಟರ್‌ಮೆಂಟ್ ಲೆವಿ ಕೊಡುವುದು ಬೇಡ ಇದನ್ನು ಕಡಿಮೆ ಮಾಡಿ ಎಂದು ಹೇಳಿಕೊಂಡು ಹೋಗುವ ಮನೋಭಾವ ಏನಿದೆ ಇದರಿಂದ ಆಗತಕ್ಕ ಅನರ್ಥಕ ಪರಿಸ್ಥಿತಿ ಏನು ಅಂದರೆ ಈಗಿನ ಡೆವಲಪ್‌ಮೆಂಟ್ ಕಾರ್ಯ ಮಾಡಲಿಕ್ಕೆ ಆಗುವುದಿಲ್ಲ. I thir k Sri Armugham made a reference to how many farmers will be helped by that, he has referred to this point in bis

speech. He is partly right; but from the point of view of the nation and the State, we cannot avoid construction of big projects. ಇದರ ಜೊತೆಯಲ್ಲಿ ನನ್ನ ಒಂದು ಅಭಿಪ್ರಾಯವಿದೆ, ಅದನ್ನು ಈ ಸಭೆಯು ಕೂಡ ಒಪ್ಪುತ್ತದೆ. ಇವೊತ್ತು ಎಲ್ಲೆಲ್ಲಿ ಪ್ರಾಜೆಕ್ಟ್‌ಗಳನ್ನು ಕಟ್ಟಿ ನೀರು ಕೊಡುತ್ತಿದ್ದೇವೆ. ಅಲ್ಲಿ ಅವರಲ್ಲಿರತಕ್ಕ ಭೂಮಿಯನ್ನು ಸೀಲಿಂಗ್ ಲಿಮಿಟ್ ಬಿಟ್ಟು ಬಾಕಿ ಎಲ್ಲಾ ತೆಗೆದುಕೊಳ್ಳಬೇಕಾಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಇದನ್ನು ಮಾಡಲೇ ಬೇಕಾಗುತ್ತದೆ. ಇವೊತ್ತು ಈ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್‌ನಿಂದ ಯಾರು ಭೂಮಿ ಕಳೆದುಕೊಂಡಿರುತ್ತಾರೆ ಅವರಿಗೆ ಭೂಮಿ ಕೊಡಲಿಕ್ಕೆ ಆಗುತ್ತಿಲ್ಲ. ಮುಳುಗಡೆ ಆಗತಕ್ಕ ಕಾಡು ಒಂದು ಕಡೆ ಹೋಯಿತು. ನಾವು ನೀರು ಕೊಟ್ಟಮೇಲೆ ಭೂಮಿ ಬೆಲೆ ಜಾಸ್ತಿಯಾಗುತ್ತದೆ. ಇನ್ನು ಕೆಲವರಿಗೆ ಅಷ್ಟು ಭೂಮಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ ೨೧.೫ ಲಕ್ಷ ಹೆಕ್ಟೇರ್ಸ್ ಪೊಟೆನಷಿಯಲ್ ಕ್ರಿಯೇಟ್ ಮಾಡಿದ್ದೇವೆಂದು ಹೇಳಿದರೆ ಅಷ್ಟೊಂದು ನೀರು ಉಪಯೋಗ ಮಾಡುತ್ತಾ ಇಲ್ಲ. ಪೊಟೆನಷಿಯಲ್ ಕ್ರಿಯೇಟ್ ಮಾಡಿದ್ದೇವೆ, ಕಾರಣ ಏನು ಅನೇಕರಿಗೆ ಭೂಮಿ ಹೆಚ್ಚಾಗಿದೆ. ಚಾನಲ್ಸ್ ತೆಗೆದಿಲ್ಲ, ಉಪಚಾನಲ್ಸ್‌ಗಳೆಲ್ಲಾ ಆಗಿಲ್ಲ, ಅದು ಆಗದೇ ಇದ್ದರು ನೀರನ್ನು ಬಿಟ್ಟಿದ್ದಾರೆ ಎಂದು ಇದೆ. ಆ ರೀತಿ ಅಂದಮಾತ್ರಕ್ಕೆ ಈ ಸರದಿಯಲ್ಲಿ ಎಸ್‌ಕೇಪ್ ಆಗಲಿಕ್ಕೆ ಬಿಡುವುದಿಲ್ಲ. ಅದರ ಬಗ್ಗೆ ಪುನರ್ ವಿಮರ್ಶೆ ಮಾಡೋಣ. ನಾನು ಒಂದು ಸಾರಿ ಧಾರವಾಡದಿಂದ ಬಿಜಾಪುರಕ್ಕೆ ಹೋಗಬೇಕಾದರೆ ಒಬ್ಬ ರೈತ ಹೇಳಿದ ಸ್ವಾಮಿ, ನನಗೆ ೧೬ ಎಕರೆ ಭೂಮಿ ಇದೆ ಅದರಲ್ಲಿ ೮ ಎಕರೆ ನೀರು ನಿಂತು ಯಾವುದಕ್ಕೂ ಉಪಯೋಗಕ್ಕೆ ಬರುತ್ತಿಲ್ಲ ಇನ್ನು ಬಾಕಿ ೮ ಎಕರೆಗೆ ನೀರು ಬರುತ್ತದೆ, ಈಗ ಎಲ್ಲಾ ಭೂಮಿಗೂ ವಾಟರ್ ರೇಟ್ ಕೊಡಿ ಎಂದು ಹೇಳಿದರೆ ಯಾವ ನ್ಯಾಯ ಎಂದು. ನಮ್ಮ ಅಧಿಕಾರಿಗಳು ಸ್ಥಳಕ್ಕೆ ಹೋಗಿ ನೋಡದೆ ಈ ರೀತಿ ಬರೆದಿರುವುದು ಇದೆ. ಇವೊತ್ತು ಮಾನ್ಯ ಸದಸ್ಯರಾದ ಕಾಳೆ ಅವರು ಮತ್ತು ಮುಧೋಳ್‌ನಿಂದ ಬಂದಿರತಕ್ಕ ಸದಸ್ಯರು ಹೇಳುತ್ತಾ ಇದ್ದರು. ಇವೊತ್ತು ಪಾರ್ಟಿ, ಪಂಗಡ ಪ್ರಶ್ನೆಯಲ್ಲ, ತಾಲ್ಲೂಕು ಬೋರ್ಡ್ ಅಧ್ಯಕ್ಷರೇ ಆಗಲಿ, ನಮ್ಮ ಶಾಸಕರೇ ಆಗಲಿ, ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಸ್ಥಳ ಪರಿಶೀಲಿಸಿ ರಿಪೋರ್ಟ್ ಕೊಡಬಹುದು. ಇವೊತ್ತು ಅಧಿಕಾರಿಗಳು ಕೊಡತಕ್ಕಂತಹ ರಿಪೋರ್ಟ್‌ಗಿಂತಲೂ ನೀವು ಕೊಡತಕ್ಕ ರಿಪೋರ್ಟ್‌ನ್ನು ಒಪ್ಪುತ್ತೇನೆಂದು ಹೇಳಿದ್ದೇನೆ. ಇವೊತ್ತು ರೆಕಾರ್ಡ್ ಪ್ರಕಾರ ಯಾರ್‍ಯಾರು ಎಷ್ಟೆಷ್ಟು ಕಟ್ಟಿದ್ದಾರೆ ಅದನ್ನು ಪಂಚಾಯಿತಿಯವರೇ ಮಾಡಲಿ ಪರವಾಯಿಲ್ಲ ಅದನ್ನು ನಾನು ಒಪ್ಪಲಿಕ್ಕೆ ತಯಾರಿದ್ದೇನೆ. ಅವರು ನೀರು ಬಂದ ಮೇಲೆ ಕೊಡಲಿ. ನೀರಿನ ಬೆಟರ್‌ಮೆಂಟ್ ಲೆವಿ ಬೇಡ, ವಾಟರ್ ರೇಟ್ ಕೊಡುವುದಕ್ಕಾಗುವುದಿಲ್ಲ ಅಂದರೆ ಹೇಗೆ ಅದರಲ್ಲೂ ನಾವು ಮೊದಲನೇ ವರ್ಷ ಏನೂ ತೆಗೆದುಕೊಳ್ಳುವುದಿಲ್ಲ. ಇಯರ್‌ವಾರ್ ಇನ್‌ಕ್ರೀಸ್ ಮಾಡಿಕೊಂಡು ನಾಲ್ಕನೇ ವರ್ಷಕ್ಕೆ, ೫ ವರ್ಷಕ್ಕೆ ಪೂರ್ತಾ ವಾಟರ್ ರೇಟ್ ಕೊಡಬೇಕೆಂದು ಕೇಳುತ್ತೇವೆ. ಇವೊತ್ತು ಯಾವುದು ಕೊಡುವುದು ಬೇಡ ಅಂದರೆ, ನಾವು ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ನಮಗೆ ಇದರಿಂದ ಮೈನ್‌ಟಿನೆನ್ಸ್ ಚಾರ್ಜ್ ಕೂಡ ಬರುವದಿಲ್ಲ. ಇವನ್ನೆಲ್ಲಾ ಬಿಟ್ಟುಕೊಂಡು ಕುಳಿತರೆ ದೇಶದ ಡೆವಲಪ್‌-ಮೆಂಟ್ ಆ್ಯಕ್ಟಿವಿಟೀಸ್‌ಗೆ ದುಡ್ಡು ಹೇಗೆ ಕೊಡುವುದು. ಪ್ರತಿಯೊಂದು ಡೆವಲಪ್‌ಮೆಂಟ್ ಆ್ಯಕ್ಟಿವಿಟಿ ಬಂದಾಗ ಆಸ್ಪತ್ರೆಗೆ ಹಣ ಸಾಲುವುದಿಲ್ಲ, ಸ್ಕೂಲುಗಳಿಗೆ ಹಣ ಸಾಲುವುದಿಲ್ಲ, ರಸ್ತೆಗಳಿಗೆ ಹಣ ಸಾಲುವುದಿಲ್ಲ ಮೈನರ್ ಟ್ಯಾಂಕ್ಸ್‌ಗೆ ಹಣ ಸಾಲುವುದಿಲ್ಲ, ಮೇಜರ್ ಟ್ಯಾಂಕ್ಸ್‌ಗೆ ಹಣ ಸಾಲುವುದಿಲ್ಲ ಎಂದು ಒಂದು ಕಡೆ ಹೇಳುತ್ತೀರಾ. ಇನ್ನೊಂದು ಕಡೆ ಅದಕ್ಕೆ ಬಿಟ್ಟುಬಿಡಿ, ಇದಕ್ಕೆ ಬಿಟ್ಟುಬಿಡಿ ಅಂದರೆ ಹಣ ಎಲ್ಲಿಂದ ತರಬೇಕು, ಹೇಗೆ ಮಾಡಬೇಕು ...I am personally aware of that difficulty. How can I ask a person to pay the water rate when he has not received water at all to his land. ಇದು ಮೋಸ ನಡೆದಿದೆ ನಮ್ಮ ಅಧಿಕಾರಿಗಳು ಎಷ್ಟೋ ಕಡೆಗಳಲ್ಲಿ ಸ್ಥಳಕ್ಕೆ ಹೋಗಿ ಪರಿಶೀಲನೆಯನ್ನೇ ಮಾಡಿಲ್ಲ. ಕೂತಕಡೆಯಲ್ಲೇ ನಂಬರ್ ತೆಗೆದುಕೊಂಡು, ಚಾನಲ್ ಡ್ರಾಯಿಂಗ್ ನೋಡಿಕೊಂಡು ಅವರಿಗೆ ನೀರು ಕೊಟ್ಟಿದ್ದೇವೆಂದು ಮಾಡಿದ್ದಾರೆ. ಈ ರೀತಿ ನಡೆದಿದೆ. ಇದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ನಾವು ಪ್ರತಿಯೊಬ್ಬರ ವಿಚಾರದಲ್ಲೂ ಕೂಲಂಕುಷವಾಗಿ ಪರಿಶೀಲನೆ ನಡೆಸಬೇಕು. ಖಾಸಗಿ ಮುಖಂಡರು, ಶಾಸಕರು, ಇದನ್ನು ರೆಗ್ಯುಲರ್ ಆಗಿ ನೋಡಬೇಕು. ಇಲ್ಲವೇ ಪಂಚಾಯ್ತಿಯವರಾದರು ನೋಡಿ ಇಷ್ಟು ಕೊಟ್ಟಿದ್ದೇವೆಂದು ಹೇಳಿದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

೨-೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀರು ನಮ್ಮ ಜಮೀನಿಗೆ ಹೋಗುವುದಿಲ್ಲವೆಂದು ರೈತರು ಮಂಥೋಳದಲ್ಲಿ ಉಪವಾಸ ಕೂತಿದ್ದರು. ಮಂತ್ರಿ ನನ್ನನ್ನು ಕರೆದುಕೊಂಡು ಹೋಗಿ ಜಾಗವನ್ನು ತೋರಿಸಿದರು. ಅಲ್ಲಿ ಬರೇ ಒಂದು ಗುಂಡ್ಡ ಇದೆ.

ಶ್ರೀ ಡಿ. ದೇವರಾಜ ಅರಸ್.—ಅವರು ತಾಲ್ಲೂಕ್ ಆಫೀಸ್‌ಗೂ ಬೆಟರ್‌ಮೆಂಟ್ ಲೆವಿ ಹಾಕಿದ್ದಾರೆ When I was sitting and talking with representative, that was also included in betterment levy I am aware of both. But there are some people who want to escape keeping these people in front. Otherwise, where do we get money? ನಮ್ಮದು ಹೈಯಸ್ಟ ಟ್ಯಾಕ್ಸೇಷನ್ ಇರುವ ರಾಜ್ಯವೆಂದು ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈಗ ನಾನು ಈ ಟ್ಯಾಕ್ಸೇಷನ್ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. Among southern states per capita tax appear to be the highest. But in relation to per capita income the tax measure is less. The per capita income is only 11.96 percent.

ಶ್ರೀ ಜೆ. ಎಚ್. ಪಟೇಲ್.—ಟ್ಯಾಕ್ಸೇಷನ್ ಬಗ್ಗೆ ತಾವು ಸದರನ್ ಸ್ಟೇಟ್ಸ್‌ಗೆ ಸಂಬಂಧಪಟ್ಟಂತೆ ಹೇಳಿದಿರಿ. ರಿಸರ್ವ್ ಬ್ಯಾಂಕ್ ಬುಲೆಟಿನ್‌ನಲ್ಲಿ ಈರೀತಿ ಇದೆ:—

Punjab	...	11 percent income and per capita taxation.
Haryana	...	12.41
Maharashtra	...	11.49
Gujarath	...	11.46
Karnataka	...	12.75

It is the highest when compared to Haryana and Punjab.

SRI D. DEVARAJ URS.—There is some differences and variations n the estimate of per capita income in different states. That is why ilightly a different picture has emerged. Now I am giving you the sorrect figures.

c SRI J. H. PATEL.—These figures are based on Reserve Bank of India bulletin.

SRI D. DEVARAJ URS.—Now, that is why it has been verified by our planning Department and we have arrived at certain figures.

ಶ್ರೀ ಜೆ. ಎಚ್. ಪಟೇಲ್.—ಇಲ್ಲಿ ಎಷ್ಟು ತಪ್ಪಾಗುತ್ತದೆ ಎಂದರೆ, ತಾವು ಸ್ಟೇಟ್ ಪರ್ ಕ್ಯಾಪಿಟಾ ಇನ್‌ಕಂನ್ನು ೩ ರೀತಿಯಲ್ಲಿ ಹೇಳಿದ್ದೀರಿ. ಮೊದಲನೆಯದು ಡ್ರಾಫ್ಟ್ ಎಸ್ಟಿಮೇಟೆಡ್ ಪ್ಲಾನ್ ಪುಟ ೮ ರಲ್ಲಿ ೮೪೦ ರೂ. ಎಂದು ಹೇಳಿದ್ದೀರಿ. ಅದೇ ಕರ್ನಾಟಕದಲ್ಲಿ ಡ್ರಾಫ್ಟ್ ೫ ಇಯರ್ ಪ್ಲಾನ್‌ನಲ್ಲಿ ಪುಟ ೫೮ ರಲ್ಲಿ ೯೫೦ ರೂ. ಎಂದು ಹೇಳಿದ್ದೀರಿ, ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಭಾಷಣ ಮಾಡುತ್ತಾ ತಾವು ೧೦೪೫ ರೂ. ಎಂದು ಹೇಳಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಇದು ಲೇಟೆಸ್ಟ್ ಫಿಗರ್.

ಶ್ರೀ ಜೆ. ಹೆಚ್. ಪಟೇಲ್.—ಇಲ್ಲಿ ೮೪೦ ರೂ. ಎಂದು ಇದ್ದುದು ೧೦೪೫ ರೂ. ಆಗಬೇಕಾದರೆ, ೨೦೬ ರೂ. ಪರ್ ಕ್ಯಾಪಿಟಾ ಜಾಸ್ತಿಯಾಗಿದೆ. ಇದನ್ನು ನೋಡಿದರೆ ಕರ್ನಾಟಕವನ್ನು ನೀವು ಸ್ವರ್ಗ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಇನ್ನು ೧೦ ವರ್ಷದಲ್ಲಿ ಈ ಕರ್ನಾಟಕವನ್ನು ನಾವು ಸ್ವರ್ಗಮಾಡುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಅಲ್ಲಿನವರೆಗೂ ನೀವು ಇರಬೇಕಲ್ಲಾ!

ಶ್ರೀ ಡಿ. ದೇವರಾಜ ಅರಸ್.—ನಾವು ಇಲ್ಲದಿದ್ದರೂ ನೀವಾದರೂ ಇರುತ್ತೀರಲ್ಲಾ, ೧೦ ವರ್ಷಗಳವರೆಗೆ ಇದೇರೀತಿ ಟೆಂಪೋ ಆನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರನ್ನು ಕ್ರಮವಾಗಿ ಮಾಡಿಕೊಂಡು ಹೋದರೆ ಇನ್ನು ೧೦ ವರ್ಷದಲ್ಲಿ ಕರ್ನಾಟಕ ಖಂಡಿತ ಸ್ವರ್ಗವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸೋರಿಹೋಗುವುದನ್ನು ನಿಲ್ಲಿಸಿದರೆ ನಮ್ಮ ಕರ್ನಾಟಕ ಸ್ವರ್ಗವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನೀವು ತೂತು ಮಡಕೆ ಹೊತ್ತು ಅಭ್ಯಾಸವೆಂದು ಕಾಣುತ್ತದೆ.

ಶ್ರೀ ಎಸ್. ಆರ್.ಬೊಮ್ಮಾಯಿ.—ಇನ್ನೂ ಆ ಅವಕಾಶ ನಮಗೆ ಸಿಕ್ಕಿಲ್ಲ.

ಶ್ರೀ ಡಿ.ದೇವರಾಜ ಅರಸ್.—ಕಳೆದ ೨ ವರ್ಷಗಳಲ್ಲಿ ನಿಮ್ಮದು ಎಷ್ಟು ತೂತಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.—ದೊಡ್ಡ ಮಡಕೆಗೆ ದೊಡ್ಡ ತೂತು, ಸಣ್ಣ ಮಡಕೆಗೆ ಸಣ್ಣ ತೂತು.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಮಡಕೆಗೆ ದೊಡ್ಡ ತೂತೂ ಇಲ್ಲ, ಸಣ್ಣ ತೂತೂ ಇಲ್ಲ, ದದ್ದು ಮಡಕೆ; ನೀವು ಎಷ್ಟೇ ನೀರು ಹಾಕಿದರೂ ದದ್ದು ಮಡಕೆಯಲ್ಲಿ ನೀರೇ ನಿಲ್ಲುವುದಿಲ್ಲ.

Now if you take per capita figure of different states announced by the Prime Minister you will know the correct picture. I am requesting the hon. Members to know these figures as given by our Prime Minister in the last NDC meeting.

Per capita tax in relation to Per capita income Rs

Andhra Pradesh — per capita Tax revenue – 1978-79 : 107
" " income – 1974-76 : 928
that is 11.53%

Assam	...	...	8.34
Bihar	...	...	10.39
Gujarat	...	...	12.26
Haryana	...	...	12.51
Jummu and Kashmir		...	9.25
Kerala	...	...	12.45
Karnataka	...	...	11.96
Madya pradesh	...	...	11.60
Maharashtra	...	...	12.60
Orissa	...	...	8.32
Punjab	...	...	11.53
Rajastan	...	...	11.02
Tamil Nadu	...	...	11.89
West Bengal	...	...	10.45
Uttar Pradesh	...	...	10.63

All states average 11.07

Please understand that the developmental expenditure stands third in the whole country. ಹಾಗೆಯೇ ಪ್ಲಾನಿಂಗ್‌ನಲ್ಲಿ Decentralisation of planning ಎಂದು ಇದೆ. ನಮ್ಮ ರಾಜ್ಯದಲ್ಲಿ ಸ್ಟೇಟ್ ಲೆವೆಲ್ ಪ್ಲಾನಿಂಗ್ ಮತ್ತು ಡಿಸ್ಟ್ರಿಕ್ ಪ್ಲಾನಿಂಗ್ ಎಂದು ೨ ಭಾಗ ಮಾಡಿದ್ದೇವೆ. ಇದನ್ನು ೧೯೭೮-೭೯ ರಲ್ಲಿ ಇಂಟ್ರಡ್ಯೂಸ್ ಮಾಡಿದ್ದೇವೆ. ಡಿವಿಸಿಬಲ್ ಪ್ಲಾನಿಂಗನ್ನು ಎಲ್ಲ ಡಿಸ್ಟ್ರಿಕ್ಟ್‌ಗಳಿಗೂ ಡಿಸ್ಟ್ರಿಬ್ಯೂಟ್ ಮಾಡುತ್ತಿದ್ದೇವೆ.

This has been happening for the first time in Karnataka whereas no other states has been able to go so far.

District-wise distribution of divisible State Plan outlay 1978-79 is as follows.—

			(Rs. in lakhs)
Bangalore (Rural)	...	...	643.68
Belgaum	...	...	711.69
Bellary	...	...	466.74
Bidar	...	...	411.50
Bijapur	...	...	918.21
Chickmagalur	...	...	314.35
Chitradurga	...	...	594.85
Kodagu	...	...	183.62
Dharwar	...	...	791.14
Gulbarga	...	...	659.97
Hassan	...	...	404.56
Kolar	...	...	698.52
Mandya	...	...	392.53
Mysore	...	...	760.47
Uttara Kannada	...	...	392.56
Raichur	...	...	510.30
Shimoga	...	...	493.74
Dakshina Kannada	...	...	511.75
Tumkur	...	...	587.66
Bangalore (Urban)	...	...	404.28
		Total:	108,52.12

ಆದರೆ ಈ ಮೇಜರ್ ಇರಿಗೇಷನ್ ಸ್ಕೀಮನ್ನು ಈ ರೀತಿ ಡಿವೈಡ್ ಮಾಡುವುದಕ್ಕಾಗುವುದಿಲ್ಲ.

ಇನ್ನು ಭಾಗ್ಯಜ್ಯೋತಿ ಸ್ಕೀಮನ್ನು ಜಾರಿಗೆ ತರಲಾಗಿದೆ. ಇದರಲ್ಲಿ ೪೦ ಸಾವಿರ ಮನೆಗಳಿಗೆ ಈ ವರ್ಷದಲ್ಲಿ ದೀಪಗಳನ್ನು ಕೊಡಬೇಕೆಂದು ಗುರಿ ಇಟ್ಟುಕೊಳ್ಳಲಾಗಿದೆ. ಪ್ರತಿಯೊಂದು ಗ್ರಾಮದಲ್ಲಿಯೂ ಹತ್ತು ಹದಿನೈದು ಮನೆಗಳನ್ನು ಸೆಲೆಕ್ಟ್ ಮಾಡಿ ೪ ಸಾವಿರ ಹಳ್ಳಿಗಳಿಗೆ ಈ ಸಲ ದೀಪಗಳನ್ನು ಕೊಡಲು ಪ್ರಯತ್ನ ಮಾಡೋಣ. ಇಲ್ಲಿ ನಾವು ತಾಲ್ಲೂಕನ್ನು ಕವರ್ ಮಾಡಬಹುದು; ಆದರೆ ಎಲ್ಲ ೨೫-೩೦ ಸಾವಿರ ಹಳ್ಳಿಗಳನ್ನು ಕವರ್ ಮಾಡುವುದಕ್ಕಾಗುವುದಿಲ್ಲ. ಆದಕಾರಣ ೪ ಸಾವಿರ ಹಳ್ಳಿಗಳಲ್ಲಿ ೪೦ ಸಾವಿರ ಮನೆಗಳನ್ನು ಸೆಲೆಕ್ಟ್ ಮಾಡಬೇಕೆಂದು ಹೇಳಿದೆ. ಈ ವಿಚಾರದಲ್ಲಿ ತಾಲ್ಲೂಕ್ ಬೋರ್ಡ್ ಮೆಂಬರ್ಸ್ ಮತ್ತು ಎಂ.ಎಂ.ಎ.ಗಳು ಸೇರಿ ಯಾವ ಹಳ್ಳಿಗಳಲ್ಲಿ ಎಷ್ಟು ತೆಗೆದುಕೊಳ್ಳಬೇಕೆಂದು ಹೇಳಿದರೆ, ಅದರಂತೆ ಮಾಡೋಣ.

ಇನ್ನು ಕಾರವಾರ ಬಂದರು ಕೆಲಸವನ್ನು ಕೇಂದ್ರಸರ್ಕಾರದವರು ದುಡ್ಡು ಕೊಡಲಿ ಅಥವಾ ಬಿಡಲಿ,

ನಾವೇ ಆ ಕೆಲಸವನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ, ಮತ್ತು ಅದಕೆ ಹಣವನ್ನು ಒದಗಿಸಿದ್ದೇವೆ. ಅದನ್ನು ನಾವು ಮಾಡುವವರಿದ್ದೇವೆ. Now I come to major and medium irrigation schemes. ಈ ಸ್ಕೀಮು ಪ್ರಾರಂಭವಾದಾಗಿನಿಂದಲೂ ಇದರ ಒಟ್ಟು ಎಸ್ಟಿಮೇಟೆಡ್ ಕಾಸ್ಟ್ ೧೧೨೨ ಕೋಟಿ ರೂ.ಗಳು. ಇದರ ಪೈಕಿ ನಾವು ೧೯೭೯ ರಮಾರ್ಚಿ ತಿಂಗಳವರೆಗೆ ಖರ್ಚುಮಾಡಿರುವುದು ೪೮೯ ಕೋಟಿ ರೂ. ಗಳು. ಮೀಡಿಯಂ ಇರಿಗೇಷನ್ ಸ್ಕೀಮಿಂಗೆ ೧೧೪ ಕೋಟಿ ರೂ.ಗಳ ಎಸ್ಟಿಮೇಟ್ ಆಗಿದೆ. ಇದರಲ್ಲಿ ನಾವು ೪೮ ಕೋಟಿ ರೂ. ಗಳನು ಖರ್ಚು ಮಾಡಿದ್ದೇವೆ. ಅಂದರೆ‍ಇವೆರಡನ್ನೂ ಸೇರಿಸಿ ಒಟ್ಟು ೧೨೩೬ ಕೋಟಿ ರೂ. ಗಳ ಎಸ್ಟಿಮೇಟ್ ಆದರೆ, ನಾವು ಖರ್ಚು ಮಾಡಿರುವುದು ೫೩೭ ಕೋಟಿ ರೂ.ಗಳು. ಇದರಿಂದ ಪೊಟೆನ್ಸಿಯಲ್ ಅಫ್ ಇರಿಗೇಷನ್ ಕ್ರಿಯೇಟ್ ಮಾಡಿರ-ವುದು ಎಷ್ಟೆಂದರೆ, ೧೯೭೨ ನೇ ಇಸವಿಯಲ್ಲಿ ೫.೨ ಲಕ್ಷ ಹೆಕ್ಟೇರ್ಸ್, ಇದು ೧೯೭೭ರಲ್ಲಿ ೬.೩ ಲಕ್ಷ ಹೆಕ್ಟೇರ್ಸ್‌ಗೆ ಬಂತು ನಂತರ ೧೯೭೮ರಲ್ಲಿ ೭.೭ ಲಕ್ಷ ಹೆಕ್ಟೇರ್ಸ್‌ಗೆ ಬಂದರೆ, ೧೯೭೯ ರಲ್ಲಿ ೮.೨ ಲಕ್ಷ ಹೆಕ್ಟೇರ್ಸ್‌ಗೆ ಬಂತು The potential created is so much that the area irrigated is less. ಕೆಲವು ಕಡೆ ಇನ್ನೂ ನೀರನ್ನು ಉಪಯೋಗಿಸಿಕೊಳ್ಳು ವುದಕ್ಕೆ ಆಗಿಲ್ಲ. ಇನ್ನು ೧೯೭೨ರಲ್ಲಿ ಏರಿಯಾ ಇರಿಗೇಟೆಡ್ ಆಗಿರುವುದು ೪.೪ ಲಕ್ಷ ಹೆಕ್ಟೇರ್ಸ್, ೧೯೭೭ರಲ್ಲಿ ೫.೬ ಲಕ್ಷ ಹೆಕ್ಟೇರ್ಸ್, ೧೯೭೮ರಲ್ಲಿ ೬.೩೦ ಲಕ್ಷ ಹೆಕ್ಟೇರ್ಸ್, ೧೯೭೯ಕ್ಕೆ ಇದು ೬.೭೭ ಲಕ್ಷ ಹೆಕ್ಟೇರ್ಸ್‌ಗೆ ಬಂದಿದೆ. So, out of this capital expenditure, assets created - at an average of 10,000 rupees per acre - comes to about 2,000 erores roughly. That is the total asset created. WE HAVE GOT THE assistance of the World BANK. Now, we are also stressing on the conjunctive use of water. This is a matter which we have to take serious note of. Then, we have to introduce, in course of time, sprinkler irrigation. It is now in our experience that water that can be used for 78 acres by sprinkler irrigation, is now used for only ene acre. Overnight it cannot happen. Water is like gold; what is blood to a man it is to the State now. We have to to think of all these measures in course of time to see that water is conserved and larger areas get the benefit. ಅದಕ್ಕೋಸ್ಕರ ಇರಿಗೇಷನ್ ಬಗ್ಗೆ ರೈತರಿಗೆ ತಿಳಿವಳಿಕೆ ಕೊಡಲು ನಾವು ಏರ್ಪಾಡು ಮಾಡುತ್ತಿದ್ದೇವೆ ಮೇಜರ್ ಮತ್ತು ಮಿಡಿಯಂ ಇರಿಗೇಷನ್‌ಗೆ ಇನ್ನೂ ಜಾಸ್ತಿ ಹಣ ಕೊಡಬೇಕೆಂದು ಕೆಲವರು ಹೇಳಿದರು. If anybody, before the budget is closed. were to give a suggestion as to in what manner it is possible to increase the outlay. I will be very happy. If we can get the sources at least if most of these sources are available-, I would like to divert that increased revenue to irrigation projects,- these medium or major or even minor irrigation. But to-day, you know that the 1979-80 budget estimates for both medium and major irrigation is 100 crores, apart from minor irrigation. What was 20 crores to start with now we have increased to 100 crores this year. ಆಮೇಲೆ ಇನ್ನೊಂದು ವಿಚಾರವನ್ನು ಕೆಲವರು ಹೇಳಿದ್ದನ್ನು ನಾನು ಕೇಳಿದ ಹಾಗಿತ್ತು; ಕೆಲವು ಮಾನ್ಯ ಸದಸ್ಯರ ಮನಸ್ಸಿನಲ್ಲಿ ನಮ್ಮ ಭಾಗಕ್ಕೆ ಅನ್ಯಾಯ ಮಾಡಿದ್ದಾರೆ, ಇನ್ನೊಂದು ಭಾಗಕ್ಕೆ ಹೆಚ್ಚಿನ ಹಣ ಕೊಟ್ಟಿದ್ದಾರೆ, ಎನ್ನತಕ್ಕಂಥ ಭಾವನೆ ಇಲ್ಲವೆಂದು ನಾನು ಭಾವನೆ ಮಾಡುತ್ತೇನೆ, ಆದರೂ ಸಹ ಅದೇನಾದರು ಇದ್ದರೆ, ಅದನ್ನು ಅವರ ಮನಸ್ಸಿನಿಂದ ದೂರ ಮಾಡಲು ನಾನು ಕೆಲವು ಅಂಕಿಅಂಶಗಳನ್ನು ಈ ಸಂದರ್ಭದಲ್ಲಿ ಹೇಳಬೇಕೆಂದಿದ್ದೇನೆ. ಮೇಜರ್ ಅಂಡ್ ಮೀಡಿಯಂ ಇರಿಗೇಷನ್, ಇವರೆಡನ್ನೂ ಸೇರಿಸಿ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಭಾಗಗಳಿಗೆ ನಾವು ಸುಮಾರು ೨೧೪ ಕೋಟಿ ರೂ. ಗಳನು ಇಲ್ಲಿಯವರೆಗೆ ಖರ್ಚು ಮಾಡಿದ್ದೇವೆ. ಓಲ್ಡ್ ಮೈಸೂರು ರೀಜನ್‌ನಲ್ಲಿ ಏನು ಖರ್ಚು ಮಾಡಿದ್ದೇವೆಂದು ಹೇಳಿದರೆ ೧೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. By any standard, I am sure no one will have any chance

to blame me that I have made any invidious distinction between one region and the other. ಯಾರೋ ಒಬ್ಬ ಮಾನ್ಯ ಸದಸ್ಯರು ಆ ಮೂಲೆಯಲ್ಲಿ ಕುಳಿತುಕೊಂಡು ಹೇಳಿದ್ದಾರೆ. ಹಿಂದೆ ಇದ್ದಂಥವರು ಬಹಳ ದುಡ್ಡನ್ನು ಖರ್ಚುಮಾಡಿದರು, ನೀವು ಬಂದಮೇಲೆ ಬಹಳ ಅನ್ಯಾಯ ಮಾಡಿದ್ದೀರಿ ಎಂದು. ನಾನು ಮಾಡಿರುವ ಅನ್ಯಾಯವೇನು ಎಂದರೆ ನಿಮ್ಮ ಕಡೆಗೆ ಅರ್ಧಕ್ಕಿಂತ ಹೆಚ್ಚು ಖರ್ಚುಮಾಡಿರುತ್ತೇನಲ್ಲ, ಅದೇ ಅನ್ಯಾಯ ನಾನು ಮಾಡಿರುವುದು. ೨೧೪ ಕೋಟಿ ರೂಪಾಯಿಗಳಲ್ಲಿ ೧೨೭ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುವುದು ನಿಮ್ಮಿಂದ ಶಹಬಾಸಗಿರಿಯನ್ನು ಪಡೆಯಬೇಕೆಂದು ಅಲ್ಲ. ಕೃಷ್ಣಾನದಿ ಅಲ್ಲಿದೆ. ಅದನ್ನು ಇಲ್ಲಿ ತೆಗೆದುಕೊಂಡು ಬರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಕಾವೇರಿ ನದಿ ಪ್ರಾಜೆಕ್ಟ್‌ಗೆ ಹೆಚ್ಚಿನ ಹಣವನ್ನು ಒದಗಿಸಿಕೊಡುವುದಕ್ಕೆ ಕಷ್ಟವಾಗಿರುತ್ತದೆ. ಇನ್ನೂ ಕೂಡಪ್ಲಾನ್‌ಗೆ ಸೇರಿಸಿಲ್ಲ. ನಾನ್‌ಪ್ಲಾನ್ ಎಂದೇ ಮುಂದುವರಿಸಿಕೊಂಡುಬರುತ್ತಿದ್ದೇವೆ, ಅದು ಒಂದು ಕಾರಣವಿದೆ. ಅಲ್ಲಿ ದೊಡ್ಡ ಪ್ರಾಜೆಕ್ಟ್‌ಗಳಿವೆ ಹೆಚ್ಚು ಖರ್ಚುಮಾಡಬೇಕಾದ ಅಗತ್ಯವಿರುತ್ತದೆ. ಅದನ್ನು ಮಾಡೋಣ ಕೃಷ್ಣಾಪ್ರಾಜೆಕ್ಟ್ ಒಂದನ್ನೇ ಮುಗಿಸಬೇಕಾದರೆ ೫೦೦ ಕೋಟಿ ರೂಪಾಯಿಗಳು ಕಡಿಮೆ ಇಲ್ಲದೆ ಬೇಕಾಗುತ್ತದೆ. ಅವರು ನಮ್ಮ ಜನರೇ, ನಮ್ಮ ಕರ್ನಾಟಕದವರೇ ಖರ್ಚು ಮಾಡುವುದರಲ್ಲಿ ಆ ಕಡೆಯುವರಿಗೆ ಹೆಚ್ಚು ಈ ಕಡೆಯುವರಿಗೆ ಕಡಿಮೆ ಮಾಡ ಬೇಕು ಎನ್ನುವ ವ್ಯತ್ಯಾಸದ ಭಾವನೆ ನನ್ನಲ್ಲಿ ಇಲ್ಲ.

ಯಾರೋ ಒಬ್ಬ ಮಾನ್ಯ ಸದಸ್ಯರು ನಮಗೆ ಕಡಿಮೆಮಾಡಿದ್ದೀರಿ ಎಂದು ಹೇಳಿದರು. ಫಿಗರ್ಸ್ ಹೇಳಿದ ಮೇಲೆ ಅವರು ತಮ್ಮ ಅನುಮಾನವನ್ನು ಬಿಟ್ಟಿದ್ದಾರೆಂದು ನನ್ನ ನಂಬಿಕೆ. ಈಗ ಮೇಜರ್, ಮೀಡಿಯಮ್, ಇರಿಗೇಷನ್‌ಗೆ ಎಷ್ಟು ಪೊಟೆನ್‌ಷಿಯಲ್ ಯಾವ ಯಾವ ಟೈಮ್‌ಗೆ ಕ್ರಿಯೇಟ್ ಮಾಡಬೇಕು ಎನ್ನುವುದರಬಗ್ಗೆ ಹೇಳುತ್ತೇನೆ. ೧೯೭೨ರಲ್ಲಿ ಬರೇ ಮೇಜರ್ ಮತ್ತು ಮೀಡಿಯಮ್ ಸ್ಕೀಮ್ ಪೊಟೆನ್‌ಯಲ್ ೫ ಪರ್ಸೆಂಟ್ ಇತ್ತು. If you take cultivated area ೧೯೭೮ಕ್ಕೆ ೮ ಪರ್ಸೆಂಟ್ ಆಯಿತು. ಈಗ ಅಲ್ಟಿಮೇಟ್‌ಆಗಿ ಮುಗಿಸಿದರೆ ೨೭ ಪರ್ಸೆಂಟ್ ಬರಬೇಕು. including minor irrigation and other schemes. tanks, medium and major irrigation, all put together ೧೯೭೨ರಲ್ಲಿ ೧೨ ಪರ್ಸೆಂಟ್ ಇತ್ತು. ೧೯೭೮ಕ್ಕೆ ೨೧ ಪರ್ಸೆಂಟ್ ಆಯಿತು. ಮತ್ತೆ ಇದು ಅಲ್ಟಿಮೇಟ್ ಆಗಿ ಕಂಪ್ಲೀಟ್ ಆದರೆ ೪೨ ಪರ್ಸೆಂಟ್ ಆಗಬಹುದು. ಅದರ ಜೊತೆಗೆ ಗ್ರೌಂಡ್ ವಾಟರನ್ನೂ ಲೆಕ್ಕಕ್ಕೆ ತೆಗೆದುಕೊಂಡು ರಫ್‌ಲಿ ಹೇಳುವುದಾದರೆ ಇದು ೫೦ ಪರ್ಸೆಂಟ್ ಇರಿಗೇಷನ್ ನಮ್ಮ ರಾಜ್ಯದಲ್ಲಿ ತರಬೇಕು ಎನ್ನುವ ಗುರಿಯನ್ನು ಇಟ್ಟು ಕೊಂಡು ಕೆಲಸಮಾಡಬೇಕಾಗಿದೆ, ಸ್ವಾಮಿ ಇಷ್ಟೆಲ್ಲ ಆದಮೇಲೆ ಇದರಿಂದ ಒಂದು ವಿಚಾರ ಉದ್ಭವವಾಗುತ್ತದೆ. ನಾವು ಒಂದು ವಿವಾದರಹಿತ ಕನ್‌ಕ್ಲೂಷನ್‌ಗೆ ಬರಬೇಕಾಗುತ್ತದೆ. ಅದು ಏನು ಕನ್‌ಕ್ಲೂಷನ್ ಎಂದು ಹೇಳಿದರೆ ಈ ರಾಜ್ಯದಲ್ಲಿ ನಾವು ಸರ್ಕಾರವನ್ನು ರಚನೆ ಮಾಡಿ ೬-೭ ವರ್ಷಗಳಾಗಿ ಆಗಿನಿಂದಲೂ ಕಾರಭಾರವನ್ನು ನಡೆಸುತ್ತಿದ್ದೇವೆ. ಏನೂ ಆಗಲಿಲ್ಲವೆಂದು ಎಕ್ಸ್‌ಟ್ರೀಮ ಪಾಯಿಂಟ್ ಹಾಕುವವರೂ ಇದ್ದಾರೆ. ಆಫ್ ಕೋರ್ಸ್ ನೀವು ಇರಲಿ ಬೇರೆಯವರು ಪಾಪ ಅವರಿಗೆ ಗೊತ್ತಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಹೈದರಾಬಾದ್ ಕರ್ನಾಟಕಕ್ಕೆ ಎಷ್ಟು ಖರ್ಚು ಮಾಡಿರುತ್ತೀರಿ, ಬಾಂಬೆ ಕರ್ನಾಟಕಕ್ಕೆ ಎಷ್ಟು ಖರ್ಚುಮಾಡಿರುತ್ತಿರೆಂದು ಕೇಳಿದವರುಹೈದರಾಬಾದ್ ಕರ್ನಾಟಕದಿಂದ ಬಂದವರು.

ಶ್ರೀ ಡಿ. ದೇವರಾಜ ಅರಸ್.—ನಾರಾಯಣಪುರದ ಡ್ಯಾಮು ನೀರ್ ಎಲ್ಲಿಗೆ ಹೋಗುತ್ತದೆ. ಈಬಾಗೆಕ್ಕಿಲ್ಲ. ನೀರು ಆ ಬಾಗಕ್ಕೇನೆ ಹೋಗುವುದು. ರಾಯಚೂರು ಜಿಲ್ಲೆಗೆ ಎಷ್ಟು ಗುಲ್ಬರ್ಗಾಕ್ಕೆ ಎಷ್ಟು, ಜೇವರ್ಗಿ ತಾಲ್ಲೂಕಿಗೆ ಎಷ್ಟು ನೀರು ಹೋಗುತ್ತದೆಂಬುದನ್ನು ಕೇಳಲಿ, ಬೇಕಾದರೆ ಹೇಳೋಣ.

ಶ್ರೀ ಜೆ. ಎಚ್. ಪಟೇಲ್.—ತಮ್ಮ ಕಾಲದಲ್ಲಿ ಏನು ಆಗಲಿಲ್ಲವೆಂದು ಹೇಳುವುದಕ್ಕೆ ಕಾರಣಗಳು ಇರುತ್ತದೆ ಇಲ್ಲಿಯವರೆಗೂ ಅಂದರೆ ೧೯೬೦-೬೧ ರಲ್ಲಿ ಒಟ್ಟು ರಾಷ್ಟ್ರೀಯ ಉತ್ಪಾದನೆ ಶೇಕಡಾ ೫ ಪರ್ಸೆಂಟ್ ಕರ್ನಾಟಕದಲ್ಲಿ ಇತ್ತು. ತಾವು ಬಂದಮೇಲೆ ೧೯೭೩-೭೪ ಮತ್ತು ೧೯೭೭-೭೮ಕ್ಕೆ ೪.೫ ಪರ್ಸೆಂಟಿಗೆ ಇಳಿಯಿತು. ೧೯೭೭-೭೮ ಕ್ಕೆ ೩.೫ ಕ್ಕೆ ಬಂದಿತು. ಕರ್ನಾಟಕ ರಾಜ್ಯದ ನ್ಯಾಷನಲ್ ಇನ್‌ಕಮ್ ಈರೀತಿ ಇದೆ. ತಮ್ಮ ಮಗನಿಗೆ ೧೮ ವರ್ಷಕ್ಕೆ ಮೀಸೆ ಬಂದರೆ ಅದಕ್ಕೆ ತಾವು ಕಾರಣರಲ್ಲ. ಸ್ವಾಭಾವಿಕವಾಗಿ ಬೆಳೆಯುವಂತಾದ್ದು ಬೆಳೆದೇ ಬೆಳೆಯುತ್ತದೆ. ಅದಕ್ಕೆ ನಿಮ್ಮ ಶ್ರಮವೇನಿಲ್ಲ.

ಶ್ರೀ ಡಿ. ದೇವರಾಜ ಅರಸ್.—ವೀಸೆ ಬಂದಮೇಲೆ ಅವನು ನಮ್ಮ ಅಪ್ಪ ಅಲ್ಲ ಎಂದು ಹೇಳಲು ಬಹುದು. ಆ ವರ್ಗಕ್ಕೆ ನೀವು ಸೇರಿದವರು.

ಶ್ರೀ ಜೆ. ಎಚ್. ಪಟೇಲ್.—ಅಪ್ಪ ಅಲ್ಲ ಎನ್ನುವ ವಿಷಯವನ್ನು ನಾವು ಪ್ರಸ್ತಾಪ ಮಾಡಲಿಲ್ಲ, ನೀವು ಏತಕ್ಕೆ......

ಶ್ರೀ ಡಿ. ದೇವರಾಜ ಅರಸ್.—ನೀವು ಏನು ಪ್ರಸ್ತಾಪ ಮಾಡುತ್ತೀರಿ ಅದಕ್ಕೆ ತಕ್ಕಂತೆ ಉತ್ತರವನ್ನು ಕೊಡಬೇಕಲ್ಲ, ರಾಜ್ಯ ಅದರಪಾಡಿಗೆ ಅದು ನಡೆದುಕೊಂಡು ಹೋಯಿತು. ನಿಮ್ಮ ಎಫರ್ಟ್ಸ್ ಏನು ಇಲ್ಲವೆಂದು ಹೇಳಿದರೆ ನಾವು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಯಾವರೀತಿ ಎಂದರೆ ಭರತನ ರಾಜ್ಯದಲ್ಲಿ ರಾಜ ಬರುವುದು ಯಾರಿಗೆ ಗೊತ್ತು, ಅದಕ್ಕೆ ಒಂದು ಗಂಟೆಯನ್ನು ಕಟ್ಟಿಕೊಂಡು ಬಾ ಎಂದು ಹೇಳಿದಹಾಗಾಯಿತು. ಮೊದಲು ಭೂಮಿಯಮೇಲೆ ಬಂದ ಫಸಲನ್ನು ನಾನು ತೆಗೆದುಕೊಳುತ್ತೇನೆ. ಭೂಮಿಯ ಒಳಗಿನ ಫಸಲನ್ನು ನೀನು ತೆಗೆದುಕೋ ಎಂದು ಹೇಳಿ ಮತ್ತೆ ಭೂಮಿಯ ಒಳಗಿನ ಫಸಲನ್ನು ನಾನು ತೆಗೆದುಕೊಳ್ಳುತ್ತೇನೆ. ಭೂಮಿಯ ಮೇಲಿನ ಫಸಲನ್ನು ನೀನು ತೆಗೆದುಕೋ ಎನ್ನತಕ್ಕಂಥ ರೀತಿಯಲ್ಲಿ ನಾನು ರಾಜ್ಯಭಾರ ಮಾಡುತ್ತಿಲ್ಲ. ನಿಮ್ಮನ್ನು ಕೇಳಬೇಕಾದ್ದೆ ಇಲ್ಲ, ನೀವು ಎಲ್ಲೆಲ್ಲಿ ಏನೇನು ಮಾಡುತ್ತಿದ್ದೀರಿ ಆದೆಲ್ಲ ನಮಗೂ ಗೊತ್ತಿದೆ. ಸುಮ್ಮನೆ ಮಾತನಾಡಿ ಪ್ರಯೋಜನವಿಲ್ಲ. ಈಗ ಎರಡು ವರ್ಷದಲ್ಲಿ ಏನೇನು ಕತೆ ಆಯಿತು ಎನ್ನುವುದು ನಿಮ್ಮ ಪಾರ್ಟಿಯವರೇ ಹೇಳುತ್ತಿದ್ದಾರಲ್ಲ,

ಶ್ರೀ ಜೆ. ಎಚ್. ಪಟೇಲ್.—ಅವರ ಸಹಾಯಬೇಕು ಎಂದು ಹಗಲು ರಾತ್ರಿ ತಾವು ತಿರುಗಾಡುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್.—ಯಾರು ಯಾರಿಗೆ ಸಹಾಯಬೇಕು ಎನ್ನುವುದನ್ನು ಸ್ವಲ್ಪ ಕಾದುನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಆ ಮಾತಂತು ನಿಜ ಒಬ್ಬರಿಗೊಬ್ಬರಿಗೆ ಸಹಾಯ ಬೇಕು,

ಶ್ರೀ ಡಿ. ದೇವರಾಜ ಅರಸ್.—ಹಾವೇರಿ ನ್ಯಾಯ ಮಾಡಿದಿರಿ ನೀವು. ನಿಮ್ಮ ಪಕ್ಕದಲ್ಲಿಯೇ ಧಾರವಾಡ ತಾಲ್ಲೂಕು ಇದೆ. ಅವರಿಗೆ ಇದು ಗೊತ್ತಾಗುವುದಿಲ್ಲ. ನಿಮ್ಮ ಸೋಶಿಯಲಿಸ್ಟ್ ಫ್ರೆಂಡ್‌ಗೆ ಇದು ಗೊತ್ತಾಗುವುದಿಲ. ಸೋಶಿಯಲಿಸ್ಟ್ ಫ್ರೆಂಡ್ ನಿಮಗೆ ಹೇಳುತ್ತಿರುವುದು ನಮಗೆ ಆಶ್ಚರ್ಯವಾಗಿರುತ್ತದೆ. ಈಗ ಇಷ್ಟೊಂದು ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಇರುವಾಗ ಅದೆಲ್ಲ ಆಗಬೇಕಾದರೆ ಅಡ್ಮಿನಿಸ್ಟ್ರೇಟೀವ್ ಮೆಷಿನರಿ ಕುಸಿದುಬಿದ್ದಿದೆ, ಚೆನ್ನಾಗಿ ನಡೆಯುತ್ತಿಲ್ಲ ಎಂದೆಲ್ಲ ಮಾನ್ಯ ಸದಸ್ಯರಾದ ಶ್ರೀ ಮಂಳೂರು ಆನಂದರಾಯರು ಅವರದೇದಾಟಿಯಲ್ಲಿ ಅವರದೇ ಶೈಲಿಯಲ್ಲಿ ಡ್ರೆಮಟ್ರಿಕ್ ಆಗಿ ನಾನು ಊರಲ್ಲೇ ಇರುವುದಿಲ್ಲ. ಏನು ನಡೆಯುತ್ತಿಲ್ಲ ಎಂದೆಲ್ಲ ಹೇಳಿದರು. ಆದರೆ ನಾನು ಹೇಳುವುದೇನೆಂದರೆ ಅಡ್ಮಿಸಿಸ್ಟ್ರೇಷನ್ ಮುಂದುವರಿಯಲು ಗೇರ್‌ಅಪ್ ಮಾಡದೆಹೋದರೆ ರೆವಿನ್ಯೂ ಬರುವುದು ಹೇಗೆ, ಟಾರ್‌ಜೆಟ್ ಎಕ್ಸ್‌ಪೆಂಡಿಚರ್ ಮಾಡುವುದು ಹೇಗೆ. ಇಷ್ಟೆಲ್ಲ ಉತ್ಪಾದನೆ ಮಾಡುವುದು ಹೇಗೆ. ಸ್ವಾಮಿ ನಾನೇನು ಜಗ್ಲರಿ ಫಿಗರ್ಸ್‌ನ್ನು ತಮ್ಮ ಮುಂದೆ ಇಟ್ಟಿಲ್ಲ. ನಮ್ಮಲ್ಲಿ ಏನಾದರೂ ಲೋಪದೋಷಗಳಿದ್ದರೆ, ಯಾವುದು ಎಲ್ಲಿದೆ ಎಂದು ಹೇಳುವುದು ನಿಮ್ಮ ಕರ್ತವ್ಯ ನೀವು ಹೇಳಲೇಬೇಕು. ತೋರಿಸಲೇಬೇಕು. ಹಾಗೆಂದಾಕ್ಷಣ ನಮ್ಮ ಅಡ್ಮಿನಿಸ್ಟ್ರೇಷನ್ ಎಲ್ಲಾ ಫಸ್ಟ್ ಕ್ಲಾಸಾಗಿದೆ ಎಂದು ಹೇಳುತ್ತಿಲ್ಲ. ಕೆಲವು ಲೋಪದೋಷಗಳಿರಬಹುದು, ನಾವು ಹೇಳುವಾಗ ಕಂಪಾರೇಟೀವಾಗಿ ತೆಗೆದುಕೊಳ್ಳುತ್ತೇನೆ. ಓವರಾಲ್ ಪಿಕ್‌ಚರ್ ನೋಡಿ ಹೇಳುತ್ತೇವೆ. ಈಗ ಯಾರೋ ಒಬ್ಬ ಗುಮಾಸ್ತ ಸಾಗುವಳಿ ಚೀಟಿ ಕೊಡುವುದಕ್ಕೆ ತಾಲೂಕ್ ಆಫೀಸಿನಲ್ಲಿ ೫ ರೂಪಾಯಿ ಲಂಚ ತೆಗೆದುಕೊಂಡಿರುತ್ತಾನೆ ಅಂತ ಇಟ್ಕೊಳ್ಳಿ. ಅಥವಾ ಓಲ್ಡ್ ಏಜ್ ಪೆನ್‌ಷನ್ ಕೊಡಿಸುವಾಗ ೧೦ ರೂಪಾಯಿ ಕೊಟ್ಟರೆ ನಾನು ಕೊಡಿಸುತ್ತೇನೆ ಎಂದು ಯಾರಾದರೂ ಹೇಳಿ ತೆಗೆದುಕೊಂಡ ಎಂದು ಇಟ್ಕೊಳ್ಳಿ. ಆಗ ಗುಮಾಸ್ತನನ್ನೇ ಏತಕ್ಕೆ ಬೈಯುತ್ತಿರಿ ? ಕೆಲವು ಪುಡಾರಿಗಳು ಈ ಕೆಲಸ ಮಾಡುವವರಿಲ್ಲವೆ ? ಸರ್ಕಾರೀ ಗುಮಾಸ್ತ ಮಾತ್ರ ಅಲ್ಲ. ಕೆಲವು ಪುಡಾರಿಗಳೂ ಕೂಡ ನಿಮಗೆಲ್ಲಾ ಪೆನ್‌ಷನ್ ಕೊಡಿಸುತ್ತೇನೆ ಎಂದು ನೂರಾರು ಅರ್ಜಿ ತೆಗೆದುಕೊಂಡು ಒಬ್ಬೊಬ್ಬರ ಹತ್ತಿರ ೧೦-೧೦ ರೂಪಾಯಿ ಕೊಡಿ ಎಂದು ಹೇಳುತ್ತಾರೆ. ಸ್ಲಂಗಳಲ್ಲೂ ಆ ರೀತಿ ಮಾಡುವವರಿದ್ದಾರೆ. ಈ ವಿಚಾರ ಎಲ್ಲಾ ನಿಮಗೆ ಗೊತ್ತಿದೆ. ಹಾಗೆಂದಾಕ್ಷಣ

ಇಡೀ ಆಡಳಿತ ಯಂತ್ರವೇ ಕೆಟ್ಟುಹೋಗಿದೆ ಎಂದು ಹೇಳುವುದು that is not the way to look at things nor is that the practice from the beginning. ನಾವು ಯಾವುದನ್ನು ನೋಡಬೇಕಾದರೂ ಓವರ್ ಆಲ್ ಪಿಕ್‌ಚರ್ ತೆಗೆದುಕೊಂಡು ನೋಡಬೇಕಾಗುತ್ತದೆ. ಸುಮ್ಮಸುಮ್ಮನೆ ಇವರೇನೂ ಪ್ರಯೋಜನ ಇಲ್ಲ, ಇವರ ತಲೆ ಎಲ್ಲಾ ಗುಂಗುರಾಗಿದೆ, ಆದ್ದರಿಂದ ಇವರ ತಲೆನೇ ಸರಿಯಿಲ್ಲ. ಇವರು ಈ ತರಹ ಇದ್ದಾರೆ, ಆದ್ದರಿಂದ ಇವರು ಮಾಡುವುದೆಲ್ಲಾ ಸರಿಯಾಗಿಲ್ಲ -ಹೀಗೆಲ್ಲಾ ಹೇಳುವುದು ಸರಿಯಿಲ್ಲ. ನಮ್ಮಲ್ಲೂ ಕೆಲವು ಲೋಪದೋಷಗಳಿರಬಹುದು. ಆದರೆ over all trend and the progress ನೋಡಬೇಕು. If you take the overall progress you will be knowing how far we have progressed. Is there any halt over the progress made so far ? You have to appreciate that, Then only you will see that there is lot of progress.

3–00 P. M.

ಶ್ರೀ ಎಸ್ ಆರ್. ಬೊಮ್ಮಾಯಿ,—ನಾನು ತಮಗೆ ಕೆಲವು ಫಿಗರ್ಸ್ ಕೊಟ್ಟು ಅಭಿವೃದ್ಧಿ ಕಾರ್ಯ ಎಲ್ಲೆಲ್ಲಿ ಯಾವರೀತಿಯಾಗಿದೆ, ಕಡಿಮೆ ಉತ್ಪನ್ನ, ಕಡಿಮೆ ಕರಭಾರ ಇದ್ದಾಗ ಯಾವರೀತಿ ಆಗಿದೆ, ೮ ವರ್ಷದಿಂದ ಎಷ್ಟು ಕರಭಾರ ಜಾಸ್ತಿಯಾಗಿದೆ, ಉತ್ಪನ್ನ ಎಷ್ಟರಮಟ್ಟಿಗಾಗಿದೆ ಎಲ್ಲಾ ತಿಳಿಸಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಎಲ್ಲದಕ್ಕೂ ನಾನು ಉತ್ತರ ಬರೆದು ಕಳಿಸುತ್ತೇನೆ. ಅದು ತಪ್ಪಾಗಿದ್ದರೆ ಅದನ್ನು ಹೇಳಿ. ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸ್ನೇಹಿತರೊಬ್ಬರು total income of India ೩.೫ ಪರ್ಸೆಂಟ್‌ಗೆ ಇಳಿದಿದೆ ಎಂದು ಹೇಳಿದ್ದಾರೆ. ಅದು ನನಗೆ ಗೊತ್ತಿಲ್ಲ. ಆದರೆ ನಾನು ಕೊಡತಕ್ಕ ಅಂಕಿಅಂಶವನ್ನು ಮಾನ್ಯ ಸದಸ್ಯರು ನೋಟ್ ಮಾಡಿಕೊಳ್ಳಲಿ. Total income of India for 1977–78 is Rs. 78,012 Crores. This is the gross National Income. The total income of Karnataka during the same period Rs, 3,957 crores. It comes to about 5% when compared to All India figure......

SRI J. H. PATEL.—I am basing my statistics of the Reserve Bank.

SRI D. DEVARAJ URJ.—I am prepared to contest your figures. These are authenticated figures. If this is proved incorrect I am prepared to openly apologise to this House. ನಾನು ನನ್ನ ಹತ್ತಿರ ಇರುವ ಅಂಶವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. The figures have been called out from Economic Survey conducted by the Government of India for the year 1977–78. This is the aut ority on which I am speaking. ತಾವು ತಮಗೆ ಏನಾದರೂ ಗೊತ್ತಿದ್ದರೆ ಹೇಳಿ. Even now I would request the hon. member to have a discussion with me. ತಮ್ಮದೇನಾದರೂ ಸರಿಯಾಗಿದ್ದರೆ ನೋಡೋಣ. ನಾನು ಹೇಳಿದ್ದು ನನಗೆ ಸಿಕ್ಕಿರುವ ಆಧಾರದಿಂದ. ಆಮೇಲೆ ಕಬಿನಿ ಜಲಾಶಯದ ಬಗ್ಗೆ ಮಾನ್ಯ ಬಸಪ್ಪನವರು ಅದಕ್ಕೆ ಹೆಚ್ಚಿಗೆ ಹಣ ಬೇಕು ಮತ್ತೆ ಅದಕ್ಕೆ ಒಂದು ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಬೇಕು ಎಂದು ಹೇಳಿದ್ದಾರೆ. ಲಿಫ್ಟ್ ಇರಿಗೇಷನ್ ಸ್ಕಿಂ ಕಡಿಮೆ ದುಡ್ಡಿನದೇನಲ್ಲ. ೨೫-೩೦ ಕೋಟಿ ರೂಪಾಯಿಗಿಂತ ಹೆಚ್ಚು ಹಣ ಅದಕ್ಕೆ ಬೇಕಾಗುತ್ತದೆ. ಮೊದಲು ಕಾಂಟೂರ್ ಇರಿಗೇಷನ್ ಮುಗಿಸೋಣ. ಮಾನ್ಯ ಸದಸ್ಯರು ಹೇಳಿದ ವಿಚಾರವೂ ಗಮನದಲ್ಲಿದೆ. ಆದರೆ ಎಲ್ಲದಕ್ಕೂ ಈಗಲೇ ಎಲ್ಲಿಂದ ಹಣ ತರಲಿ ? ಅದನ್ನೂ ಮುಂದೆ ನೋಡೋಣ. ಆದರೆ ಈಗಲೇ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. We have to take it

up at the second stage. This is in our total scheme of Kabini project. ಮತ್ತೆ ಮಾನ್ಯ ಸದಸ್ಯರು ಸಂಗಮೇಶ್ವರ ದೇವಸ್ಥಾನ ಮುಳುಗಡೆಯಾಗುತ್ತದೆ ಎಂಬ ಭೀತಿಯನ್ನು ವ್ಯಕ್ತಪಡಿಸಿದ್ದಾರೆ. We will take all possible steps to see that the temple is not sub-merged. ಬಾಗಲಕೋಟೆಯಲ್ಲಿ ಕೂಡ ಒಂದು ಸಮಸ್ಯೆ ಇದೆ. ಈ ಬಗ್ಗೆ ನಾನು ಮಾತು ಕೊಟ್ಟಂತೆ ಈಗಾಗಲೇ ತಜ್ಞರ ಸಮಿತಿಯನ್ನು ನೇಮಿಸಿದ್ದೇನೆ. ಅವರು ಈ ಬಗ್ಗೆ ನೋಡುತ್ತಾರೆ. ಸಾವಿರಾರು ಎಕರೆ ಒಳ್ಳೆ ಫಲವತ್ತಾದ ಭೂಮಿ ನೀರಿನಲ್ಲಿ ಮುಳುಗಿಹೋಗುತ್ತದೆ ಆದ್ದರಿಂದ ಇದನ್ನು ತಪ್ಪಿಸುವುದಕ್ಕಾಗುತ್ತದೆಯೋ ಎಂದು ಅನೇಕರು ಅಲ್ಲಿಗೆ ಹೋದಾಗ ಹೇಳಿದ್ದಾರೆ, ಆ ತಾಲ್ಲೂಕಿನ ಸದಸ್ಯರೂ ಹೇಳುತ್ತಿದ್ದಾರೆ. ನಾವು ಬರತಕ್ಕ ನೀರನ್ನು ಉಪಯೋಗಮಾಡಿಕೊಳ್ಳ ಬೇಕಲ್ಲವೇ ? ನಾವು ಇಷ್ಟು ಕಷ್ಟಪಟ್ಟು ಟ್ರಿಬ್ಯುನಲ್ ಮುಂದೆ ಹೋಗಿ ಕೃಷ್ಣಾ ವಾಟರ್ ಡಿಸ್ಪ್ಯೂಟ್ ನಲ್ಲಿ ಹೋರಾಟ ಮಾಡಿ ಅದರಿಂದ ನೀರನ್ನು ತೆಗೆದುಕೊಂಡು ಬಂದು ನಾವು ಉಪಯೋಗ ಮಾಡಿಕೊಳ್ಳ ದಿದ್ದರೆ ಏನು ಪ್ರಯೋಜನ? ನಮಗೆ ಬರಬೇಕಾದ ಪಾಲು ನಮಗೆ ಬರಲಿಲ್ಲ ಎಂಬ ಬೇಡಿಕೆ ಇದ್ದೇ ಇದೆ. ಎಲ್ಲಾ ತೀರ್ಮಾನವಾದಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ನೀರಿನ ಉಪಯೋಗ ಮಾಡಲೇ ಬೇಕು. ಇದನ್ನು ಬೇರೆ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೇ ಇಲ್ಲವೇ ಎಂಬುದನ್ನು ತಜ್ಞರ ಅಭಿಪ್ರಾಯ ದಂತೆ ಪುನರ್‌ಪರಿಶೀಲನೆ ಮಾಡೋಣ ಈಗಾಗಲೇ ತಜ್ಞರ ಸಮಿತಿಯವರು ಆ ಕೆಲಸದಲ್ಲಿ ನಿರತರಾಗಿದ್ದಾರೆ ಮಾನ್ಯ ಸದಸ್ಯರಾದ ಕಡಿದಾಳ್ ದಿವಾಕರ್ ಅವರು areas coming under forest sub-mersion ಬಗ್ಗೆ ಹೇಳಿದರು. ಅವರು ಮಲೆನಾಡಿನಿಂದ ಬಂದಿರುವವರು, ಕಾಡು ನೀರಿನಲ್ಲಿ ಮುಳುಗಿ ಹೋಗುತ್ತದೆ ಎಂಬ ವ್ಯಥೆಯಿಂದ ಹೇಳಿದ್ದಾರೆ, ನಿಜ. ಅವರು ಹೇಳುವುದು ಸರಿಯೆ, ಎಷ್ಟು ಮುಳುಗಡೆಯಾಗುತ್ತದೆ ಅಷ್ಟನ್ನು ಅಫಾರ್‌ಸ್ಟೇಷನ್ ಮಾಡಿ ಮರ ಬೆಳೆಸುವುದಕ್ಕೆ ಸ್ಕೀಂ ಹಾಕಿಕೊಂಡಿ ದ್ದೇವೆ. ಆಮೇಲೆ ಮಾನ್ಯ ಸದಸ್ಯರಾದ ಬಸವರಾಜ್ ಪಾಟೀಲರು ನಾರಾಯಣಪುರ ಬಲದಂಡೆ ಯೋಜನೆ ಬಗ್ಗೆ ಮಾತನಾಡುತ್ತಾ ಲಿಫ್ಟ್ ಇರಿಗೇಷನ್ ಮತ್ತು ನಾಲೆ ಎರಡೂ ಆಗಬೇಕು ಎಂದು ಹೇಳಿ ದ್ದಾರೆ. ಅವರ ಗಮನಕ್ಕೆ ನಾನು ತರುವುದು ಇಷ್ಟೆ. ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್ ಮಾಡಬೇಕು ಎಂದು ನಮ್ಮ ಯೋಜನೆಯಲ್ಲಿದೆ. ಆದರೆ ಯಾವಾಗ ಮಾಡಬೇಕು ಎಂಬುದನ್ನು ತಮಗೆ ಹೇಳುತ್ತಿದ್ದೇನೆ, ಅದು ಸೆಕೆಂಡ್ ಸ್ಟೇಜ್‌ನಲ್ಲಿ ಬರಬೇಕಾದ್ದಿದೆ. ಲಿಫ್ಟ್ ಇರಿಗೇಷನ್ ಹಾಗೂ ರೈಟ್ ಬ್ಯಾಂಕ್ ಕೆನಾಲ್ ಎರಡೂ ಸಧ್ಯಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಮೊದಲೇ ಏತಕ್ಕೆ ತೆಗೆದುಕೊಳ್ಳ ಬಾರದು ಎಂದು ಮಾನ್ಯ ಸದಸ್ಯರು ಹೇಳುವುದಾದರೆ ಈಗಾಗಲೇ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ಪ್ರಾಜೆಕ್ಟ್ ಇದೆ. ಆದರೆ ಗುಲ್ಬರ್ಗ ಜಿಲ್ಲೆಯಲ್ಲಿ ಅತೀ ಕಡಿಮೆ ನೀರಾವರಿ ಪ್ರದೇಶ ಇದೆ. ಗುಲ್ಬರ್ಗ ಜಿಲ್ಲೆಯವರಿಗೆ ನೀರಾವರಿ ಸೌಕರ್ಯ ಬಹಳ ಕಡಿಮೆ ಇದೆ. ಆದ್ದರಿಂದ ಮೊದಲು ಅವರಿಗೆ ಅನುಕೂಲ ಮಾಡಿಕೊಡಬೇಕು. ಫ್ಲೋ ಇರಿಗೇಷನ್‌ಗೆ ಫಸ್ಟ್ ಸ್ಟೇಜಿಗೆ ವಿಶ್ವಬ್ಯಾಂಕಿನವರು ದುಡ್ಡು ಕೊಟ್ಟಿದ್ದಾರೆ. ಸೆಕೆಂಡ್ ಸ್ಟೇಜಿಗೆ ಬೇರೆ ದುಡ್ಡು ತರಬೇಕು. ಇನ್ಯಾವುದಾದರೂ ರೀತಿಯಲ್ಲಿ ಇದಕ್ಕೆ ಹಣ ತರಬೇಕು ಅಥವಾ ವಿಶ್ವಬ್ಯಾಂಕಿನವರು ಕೊಡಬಹುದು, ಅದನ್ನು ನೋಡೋಣ. ಫಸ್ಟ್ ಸ್ಟೇಜ್‌ಗೆ ೩೦೦ ಕೋಟಿ ರೂಪಾಯಿ ಬೇಕಾಗಿದೆ. ಈಗ ಖರ್ಚು ಮಾಡಿರುವುದು ೬೨ ಕೋಟಿ ರೂಪಾಯಿ. ಇನ್ನೂ ೨೩೮ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ.

SRI M. C. BASAPPA.—According to the World Bank the entire project has to be completed with in 5 years......

SRI D. DEVARAJ URS,—They have not given the money for the entire project. It is for the first phase. First stage is different from first phase. We are going to develop 2½ lakh acres only with World Bank assistance as it is today. That is called the phase of the stage. For the first stage Rs. 300 crores are required. So for we have spent Rs. 62 crores. The balance will have to be spent during a period of 5 years and we have to create a potential of 2½lakh acres, out of a total of 10,10,000 acres coming under the first stage of the project. I think I have made the position clear. This

is first phase which we propose to complete in 1983. The balance of work in the first stage will take another 10 years and the total potential will be 10,10,000 acres. I hope the hon Member Sri Basavaraj Patil will appreciate how it is not possible to take up the right bank canal or the lift irrigation scheme in the first stage.

ಆಮೇಲೆ ಶ್ರೀಮಾನ್ ಗಂಗಾಧರನ್‌ರವರು ಇವತ್ತು ಬಂದಿಲ್ಲ ಎಂಬುದಾಗಿ ಕಾಣುತ್ತದೆ. ಅವರು ನಿನ್ನೆ ಒಂದು ಸಲಹೆಯನ್ನು ಹೇಳಿದರು. ಕ್ವಾಲಿಟಿ ಕಂಟ್ರೋಲ್ ಮಾಡುವುದಕ್ಕಾಗಿ ಒಂದು ವಿಜಿಲೆನ್ಸ್ ಸೆಲ್‌ನ್ನು ಇಡಬೇಕಾಗುತ್ತದೆಂದು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಕ್ವಾಲಿಟಿ ಕಂಟ್ರೋಲ್ ಡಿವಿಜನ್ ಎಂಬುದಾಗಿ ಚೀಫ್ ಇಂಜಿನೀಯರ್ ಕೈಕೆಳಗೆ ಇದೆ. ಅದೇ ರೀತಿ ಆಡಿಟ್ ಸೆಲ್ ಎಂಬುದಾಗಿ ವಿಜಿಲೆನ್ಸ್ ಕೈಕೆಳಗೆ ಇದೆ. ಅದಕ್ಕೆ ಒಬ್ಬರು ಚೀಫ್ ಇಂಜಿನೀಯರ್ ಇದ್ದಾರೆ. ಅಪ್ಪರ್ ಕೃಷ್ಣ ಯೋಜನೆಯಲ್ಲಿ ಇಲ್ಲದಿದ್ದರೆ ಒಂದು ಸೆಲ್‌ನ್ನು ಕ್ರಿಯೇಟ್ ಮಾಡುತ್ತೇವೆ. ಇದ್ದರೆ ಅದನ್ನೇ ಮುಂದುವರಿಸುತ್ತೇವೆ.

ಆಮೇಲೆ ಅವರು ಇನ್ನೊಂದು ವಿಚಾರವನ್ನು ಹೇಳಿದರು. ಆದೇನೆಂದರೆ, ಕಂಟ್ರಾಕ್ಟ್‌ದಾರರೆಲ್ಲಾ ಹೊರಗಡೆಯಿಂದ ಬಂದು ಬಿಡುತ್ತಾರೆ. ನಮ್ಮ ಕರ್ನಾಟಕದ ಕಂಟ್ರಾಕ್ಟ್‌ದಾರರಿಗೆ ಸಿಕ್ಕುವುದಿಲ್ಲ ಎನ್ನುವ ಮಾತನ್ನು ಹೇಳಿದರು, ಈ ವಿಷಯದಲ್ಲಿ ಮಾತ್ರ ತಮಗೆ ಒಂದು ಸಲಹೆಯನ್ನು ಹೇಳುತ್ತೇನೆ. ಯಾರಾದರೂ ಕಂಟ್ರಾಕ್ಟ್‌ದಾರರು ಕೆಲಸ ಮಾಡುವುದಕ್ಕಾಗಿ ಬರುತ್ತಾರೆ, ಅವರನ್ನು ಅವರು ಹೊರಗಡೆಯವರು, ಇವರು ಒಳಗಡೆಯವರು ಎಂಬುದಾಗಿ ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೆಲ್ಲಾ ನಾವು ಗ್ಲೋಬರ್ ಟೆಂಡರ್ಸ್ ಎಂಬುದಾಗಿ ಕರೆಯುತ್ತೇನೆ, The World Bank while giving us assistance by way of loan have put conditions that we have to call for global tenders. Whether somebody comes from France or Germany to tender here or not is a different question. But that is the condition they put. When they stipulate like that how can we say that it must be confined to a Karnataka contractor. We want to see that advantage is taken by the lowest tenderer. ಲೋಯಸ್ಟ್ ಟೆಂಡರ್‌ದಾರರು ಯಾರು ಬರುತ್ತಾರೆ ಅವರಿಗೆ ಕೊಡುತ್ತೇವೆ. ಕರ್ನಾಟಕದವರು ಲೋಯಸ್ಟ್ ಟೆಂಡರನ್ನು ಕೊಟ್ಟರೆ ಇವರಿಗೇ ಕೊಡುತ್ತೇವೆ. ಕೆಲಸ ಮಾಡುವುದಕ್ಕೆ ಶಕ್ತಿ ಇದ್ದರೆ, Of course there are certain conditions, experiences, etc. We cannot say we will not entertain anybody from outside. ಹಾಗೇನೇ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ, ಕಬಿನಿ ಜಲಾಶಯವನ್ನು ನಿರ್ಮಾಣ ಮಾಡುವಾಗ ಕೆಲಸ ಮಾಡುತ್ತಿದ್ದವರನ್ನು ನಾವು ನೋಡಿದ್ದೇವೆ. ಅವರನ್ನು ಚವಾಳೀಸ್ ಎಂಬುದಾಗಿ ಹೇಳುತ್ತೇನೆ. ಅವರು ಕಲ್ಲನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೊತ್ತುಕೊಂಡು ಹೋಗುತ್ತಾರೆ. ಅಂತಹವರು ನಮ್ಮ ಮೈಸೂರು ಭಾಗದ ಪೂರ್ವ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿದ್ದಾರೆ. ಅವರೇ ಬಂದು ಆ ಕಲ್ಲುಗಳನ್ನು ಹೊರುತ್ತಿದ್ದರು. ಎಲ್ಲರೂ ಬಂದು ಆ ಕೆಲಸವನ್ನು ಮಾಡುವುದಕಾಗುವುದಿಲ್ಲ. ಅದೇ ರೀತಿ ಕಲ್ಲನ್ನು ಹೊಡೆಯಬೇಕು, ಅಥವಾ ಡ್ರೆಸ್ ಮಾಡಬೇಕೆಂದರೆ You cannot produce so many bovies or vodders who are capable of doing this work. It is only from Andhra you have to get them. There are certain types of earth work which could never be done by anyone of these people in the Karnataka State. In Andra also there is a particular place from where the contractors bring those labourers. They are the only people to day who are capable to doing this work. If you say that everything should be confined to Karnataka, that is not possible. ಅದೇ ರೀತಿ ಬಾವಿ ತೋಡುವ ಜನ ನಮ್ಮ ಹಳೇ ಮೈಸೂರು ಭಾಗದಲ್ಲಿ ಎಲ್ಲಿ ಹೋದರೂ ಬಾವಿಯನ್ನು ತೋಡತಕ್ಕಂತಹ

ಜನ ಇಲ್ಲ. ಆದರೆ ಅಂತಹ ಜನ ಬಳ್ಳಾರಿಯಲ್ಲಿ ಸಿಕ್ಕುತ್ತಾರೆ. ಬಳ್ಳಾರಿಯಲ್ಲಿ ಒಳ್ಳೆಯ ಬಾವಿಯನ್ನು ತೋಡುವ ಅನುಭವಿಕರು ಇದ್ದಾರೆ, ಅವರನ್ನು ಬಿಟ್ಟರೆ ಕೇರಳದವರು ಬರುತ್ತಾರೆ. ಅವರು ೧೦ ಮಂಕರಿ ಮಣ್ಣನ್ನು ಹಾಕುವುದರಲ್ಲಿ ಇವನು ೨ ಮಂಕರಿ ಮಣ್ಣನ್ನು ತೆಗೆದು ಹಾಕಿ ಮುದುರಿಕೊಂಡು ಬಿದ್ದಿರುತ್ತಾರೆ. ಇನ್ನೂ ಎಂಪ್ಲಾಯಮೆಂಟ್ ಅಫರ್‌ಮೇಟೀವ್ ಸ್ಕೀಂನಲ್ಲಿ ನಮ್ಮ ಕರ್ನಾಟಕದ ಜನಗಳಿಗೆ ಮಾತ್ರ ಕೆಲಸ ಕೊಡಿ ಎಂಬುದಾಗಿ ಹೇಳಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಡ್ಯಾಂ ಕಟ್ಟುವ ಕೆಲಸವನ್ನೂ ಕನ್ನಡಿಗರಿಗೇ ಕೊಡಿ, ಇವರಿಗೆ ಕೊಡಿ, ಅವರಿಗೇ ಕೊಡಿ ಎಂಬುದಾಗಿ ಹೇಳಿದರೆ ಹೇಗೆ ಸಾಧ್ಯ ? ಸಾಧ್ಯವಾಗುವುದಿಲ್ಲ, These are certain things one must have to understand.

ಇನ್ನು ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ತಕ್ಕೇಡ್‌ರವರು ಹರಿನಾಲಾ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಡಿ, ಬಿಟ್ಟುಬಿಡಿ ಎಂಬುದಾಗಿ ಹೇಳಿದರು ರೈಲು ಗಾಡಿಯ ಅನುಭವವನ್ನು ಹೇಳುತ್ತಿದ್ದೇನೆ. ನೀವು ಒಳಗಡೆ ಕುಳಿತ್ತಿದ್ದಾಗ ಹೊರಗಡೆಯಿಂದ ಯಾರಾದರು ಬಂದು ಸ್ವಾಮಿ ಬಾಗಿಲು ತೆಗೆಯಿರಿ ನಾನು ಒಳಕ್ಕೆ ಬರುತ್ತೇನೆ, ಸ್ವಲ್ಪ ಜಾಗ ಕೊಡಿ ಎಂಬುದಾಗಿ ಕೇಳಿದರೆ ನೀವು ಹೋಗಲಿ ಎಂಬಂದಾಗಿ ತಿಳಿದುಕೊಂಡು ಜಾಗ ಕೊಟ್ಟರೆ, ಆಗ ಇನ್ನೊಬ್ಬ ಬಂದು ಬಾಗಿಲು ತೆಗೆಯಿರಿ ಕೇಳಿದಾಗ ನೀವು ಸುಮ್ಮನಿದ್ದರೂ ಅವನು ಸುಮ್ಮನೆ ಇರುವುದಿಲ್ಲ, ಜಾಗ ಇಲ್ಲ ಹೋಗಯ್ಯ ಎಂಬುದಾಗಿ ಹೇಳಿಬಿಡುತ್ತಾರೆ. ಆದರೆ ಈ ವಿಚಾರದಲ್ಲಿ ಆ ರೀತಿ ಆಗಬಾರದು. ಮಲಪ್ರಭಾ ನೀರು ಬರುವವರೆಗೂ ಅಯ್ಯೋ ನಮಗೆ ನೀರು ಕೊಟ್ಟರೆ ಸಾಕು ಎಂಬುದಾಗಿ ಮಾತನಾಡುತ್ತಿದ್ದವರು, ಮಲಪ್ರಭಾ ನೀರು ಬಂದ ಮೇಲೆ ಚಿಕ್ಕ ಚಿಕ್ಕದಾಗಿ ಮಾತನಾಡುತ್ತಾ, ಹರಿನಾಲಾ ಪ್ರಾಜೆಕ್ಟನ್ನು ಬಿಡಿ ಎಂಬುದಾಗಿ ಹೇಳುವುದಕ್ಕೆ ಹೊರಟಿದ್ದಾರೆ ಅದು ಯೋಜನೆಯಲ್ಲಿ ಸೇರಿದೆ. ಅದನ್ನು ಮಾಡುವ ಯೋಜನೆಯಲ್ಲಿದ್ದೇವೆ. ಅಲ್ಲಿ ೪೦ ಇಂಚು ಮಳೆ ಬರುತ್ತಿದೆ, ಸುಮ್ಮ ಸುಮ್ಮನೆ ನೀರು ಕೊಡಬೇಡಿ ಎಂಬುದಾಗಿ ಮಾನ್ಯ ತಕ್ಕೇಡ್‌ರವರು ಹೇಳಿದರು. ಅಲ್ಲಿ ೨೦ ಇಂಚುಗಿಂತ ಕಡಿಮೆ ಮಳೆ ಬರತಕ್ಕಂತಹ ಪ್ರದೇಶ ಅದು. ಸೌಂದತ್ತಿಯಲ್ಲಿ ಅದಕ್ಕಿಂತ ೫ ಇಂಚು ಕಡಿಮೆ ಮಳೆ ಬರಬಹುದು. ಆದರೆ ಇಲ್ಲಿ ಹರಿನಾಲಾ ಪ್ರಾಜೆಕ್ಟನ್ನು ಮಾಡುವುದರಿಂದ ಅಲ್ಲಿಯ ಜನ ಕಬ್ಬು ಬೆಳೆಯುತ್ತಾರೆ. ಇದರಲ್ಲಿ ತಪ್ಪು ಏನಿದೆ ?

ನಂತರ ಮೀಡಿಯಂ ಇರಿಗೇಷನ್‌ಗೆ ಫಂಡ್ಸನ್ನು ಕಡಿಮೆ ಒದಗಿಸಿದ್ದೇವೆಂದು ಹೇಳಿದ್ದಾರೆ. ಅದು ನಿಜ. ಇಲ್ಲ ಎಂಬುದಾಗಿ ಹೇಳುವುದಿಲ್ಲ. ಆದರೆ ಎಲ್ಲದಕ್ಕೂ ಹಣವನ್ನು ಒದಗಿಸುವಾಗ ಕಡಿಮೆಯಾಗಿ ಕಾಣಿಸುತ್ತದೆ. ನಾನು ಮೊದಲೇ ಹೇಳಿದ ಹಾಗೆ ಯಾವುದಾದರೂ ಒಂದು ಸಂದರ್ಭದಲ್ಲಿ ನನಗೆ ಸ್ವಲ್ಪ ಹಣ ಜಾಸ್ತಿ ಬರುವ ಸಂಗತಿ ದೊರಕಿದರೆ ಖಂಡಿತವಾಗಿ ಈ ಮೀಡಿಯಂ ಇರಿಗೇಷನ್ ಯೋಜನೆಗೆ ಇನ್ನೂ ಸ್ವಲ್ಪ ಜಾಸ್ತಿ ಹಣವನ್ನು ಕೊಡುತ್ತೇನೆ.

ಇನ್ನು ಮುಂದೆ ಪವರ್ ಪ್ರಾಜೆಕ್ಟಿನ ವಿಚಾರವನ್ನು ಪ್ರಸ್ತಾಪ ಮಾಡುವುದು ಇದೆ. ಮೊದಲನೆಯದಾಗಿ ಕಾಳಿನದಿ ವಿಚಾರವನ್ನು ತೆಗೆದುಕೊಂಡರೆ, ನಾಗಜರಿ ಪವರ್ ಸ್ಟೇಷನ್ ಮುಗಿಯುವ ಹಂತದಲ್ಲಿದೆ. ಈ ವರ್ಷದ ಜುಲೈ ತಿಂಗಳಿಂದ ೧೩೫ ಮೆಗಾವಾಟ್ಸ್ ಪವರನ್ನು ಪ್ರಡ್ಯೂಸ್ ಮಾಡುವುದಕ್ಕೆ ಸಿದ್ಧವಾಗಿದೆ ಎಂಬುದನ್ನು ನಾನು ಈ ಮಾನ್ಯ ಸಭೆಗೆ ತಿಳಿಸುವುದಕ್ಕೆ ಸಂತೋಷಪಡುತ್ತೇನೆ. ಇನ್ನುಳಿದ ೫ ಯುನಿಟ್‌ಗಳಿವೆಯಲ್ಲಾ, ಅವುಗಳನ್ನು ಇನ್ನು ೬ ೮ ತಿಂಗಳೊಳಗೆ ಒಂದೊಂದನ್ನು ಹಾಕಿಕೊಂಡು ಹೋಗಬೇಕಾದುದು ಇದೆ. ಮತ್ತೆ ತಾವುಗಳೆಲ್ಲರೂ ಒಪ್ಪುವುದಾದರೆ, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಿಳಿಸಬೇಕೆಂದಿದ್ದೇನೆ. ಟನಲ್‌ನಲ್ಲಿ ನೀರನ್ನು ಬಿಡುವುದಕ್ಕಿಂತ ಮುಂಚಿತವಾಗಿ ನಮ್ಮ ಇಡೀ ಸಭೆಯು ಹಾಗೂ ಮೇಲ್ಮನೆಯ ಸದಸ್ಯರನ್ನು ೨ ಅಥವಾ ೩ ಬ್ಯಾಚ್‌ಗಳನ್ನಾಗಿ ಮಾಡಿ, ಈ ಕಾಳಿ ನದಿ ಪ್ರಾಜೆಕ್ಟ್ ಏನಿದೆ ಅದನ್ನು ತಾವುಗಳೆಲ್ಲರೂ ನೋಡಿಕೊಂಡು ಬರಬೇಕೆಂಬುದು ನನ್ನ ಇಚ್ಛೆ. ಏಕೆಂದರೆ ನೀರನ್ನು ಬಿಟ್ಟಮೇಲೆ ಆ ಟನಲ್ ಎಲ್ಲವನ್ನೂ ನೋಡುವುದಕ್ಕಾಗುವುದಿಲ್ಲ. ಇದು ನೋಡಬೇಕಾದಂಥಾ ಕಾರ್ಯ. ತಾವೆಲ್ಲರೂ ಕೂಡ ತಮ್ಮ ರಾಜ್ಯದಲ್ಲಿ ಇದನ್ನು ನೋಡಿ ಹೆಮ್ಮೆ ಪಡಬೇಕಾದಂಥಾ ಕಾರ್ಯವಾಗಿದೆ. ಆದುದರಿಂದ ಈ ಬಗ್ಗೆ ಅಲ್ಲಿಗೆ ಹೋಗಲು ತಮಗೆ ಯಾವಾಗ ಸೂಕ್ತ ಎಂದು ಹೇಳುತ್ತಿರೊ, ಆವಾಗ ಸೂಕ್ತ ವ್ಯವಸ್ಥೆ ಮಾಡೋಣ. ಇದಕ್ಕೆ ಸಂಬಂಧ ಪಟ್ಟಂತೆ ನಿಮ್ಮ ಚೀಫ್ ವಿಪ್ಸ್ ಇದ್ದಾರೆ. ಮತ್ತು ತಮ್ಮ ಪಕ್ಷದವರು ಇದ್ದಾರೆ. ಮೇಲ್ಮನೆಯ ಸದಸ್ಯರೂ ಸೇರಿ ಯಾರ್ಯಾರಿಗೆ ಹೇಗೇಗೆ ಅನುಕೂಲವೊ ಆರೀತಿಯಾಗಿ ೨–೩ ಬ್ಯಾಚ್ ಮಾಡಿ ಅಲ್ಲಿಗೆ ಕಳುಹಿಸಿಕೊಟ್ಟು ಸೂಪಾ

ಶ್ರೀ ಜೆ.ಹೆಚ್. ಪಟೇಲ್.—ಗ್ರೋವರ್ ಬರೆದಿಟ್ಟಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅದಕ್ಕೂ ಬರ್ರೀನೆ ತಡೆಯಿರಿ ಅವರೇ ಬರೆದಿದ್ದಾರೋ ? ನೀವು ಬರೆಸಿದ್ದೀರೋ ಗೊತ್ತಾಗುತ್ತೆ.

5-00 p.m.

I have categorically mentioned in the meeting of the Police Superintendents and the Constables that;

a) no police officer including the constable or anybody, each officer must deal with the other constables with affection and also see that they are treated as human beings ;

b) the officers should not be influenced under any circumstances by any political figure or party or individuals when they are to discharge their duty ;

c) the Superintendent of Police in his jurisdication should nows and then visit the police stations and find out what type of work i ; going on ; whether the Sub Inspector is discharging his duty or notet When the new Inspector of Police took charge, he has circulatale more than one circular on the above lines among all his subordinaate

officers and in this circular he has specifically stated how a constable should be treated by his superior ; how their grievances, if any, should be heard from time to time by the police offiicers andhoow they should behave with the public and how they should be free from any influence. Now and then Regional Conferences are held wherein all the police officers and the constables will be asked to participate and come out with their grievances. This is how we have been trying to solve the problems of officers and the constables.

I am glad, many suggestions have come from all the speakers regarding giving facilities and other conveniences to the police officers and the constables and in this connection I would like to point out what we purpose to do and what we have done.

I have taken note of the consensus regarding the sympathy expressed by the hon. members with regard to the plight of the constabulary. I have decided to introduce certain measures to see that they are treated better.

First of all 15 days leave ; even duining holidays, as you pointed out, they have to be on duty. What we propose to do now is to compensate these holidays. We have decided to sanction extra salary for these 15 days both to the constable as well as to the Head constable.

Compensation for injury and death while on duty : Many a time you are aware, they meet with hazards, they get beaten by missiles and sometimes they also risk their lives. We have decided to give extra ex-gratia of Rs. 10,000 if it is a question of death on duty. We are already giving Rs. 10,000/-. This ex-gratia additional Rs. 10,000 will be given to the families which suffer Regarding injury, major fracture or minor injury, we have now decided to give them upto Rs. 5,000 depending on the nature of injury.

Police Inspectors to be made gazetted : Most of the members who spoke about making the Police Inspectors as gazetted officers. I have taken note of your desire and I do accept your suggestios that hereafter we will take steps to make these Police Inspectors an Gazetted Officers.

It was rightly pointed out that the Police Head Constable and the Police Constable has no channel for improving his propects. A police constable at the most think of becoming a Head constable Now there are policemen who are now coming forward for recruitment, amongst them there are B.As. and M.As. So, what we now

propose to do is, we are now going to increase the strength-an additional 500 posts of Head Constables, that means there will be 500 new posts available for the constabulary, they will have the change of becoming Head Constables.

Regarding illtreatment of constabulary by senior officers, suitable instructions have been issued by the IGP and he will certainly take care of such instances.

Regarding the Grievance Machinery : The Regional Conference re held wherein anybody including the constable has a right to attend and speak out any kind of grievance.

Housing and welfare activities of Police : I think Karnatak can boast of doing far better than any other State. Regarding housing, we have given facilities of houses for all the constabulary, but if you take percentage wise we have done very much better than many. This year we have provided nearly one crore of rupees for housing. I will have an opportunity to see that something more is provided by way of housing grant for the police department.

Regarding welfare activities, they have a Police Benevolent fund for which government is subscribing every year an amount and they have got over a crore of rupees in that fund. Out of this fund almost all the children of policemen including that of Sub-Instectors are paid examination fees Rs. 500 and every child of constable upto 10th standard, the cost of the books and other stationery required will be met out of this fund.

Even students of these police officers who are studying in tehnical and post graduate courses are given Rs. 500/- p.a. from his fund. These are some of the welfare measures that we have taken for the benefit of policemen.

I would like to mention one more thing and I think I have mentioned it once at the national level. If the other politic l parties in the State were to agree, amongst us we should arrive as a certain understanding, a kind of code of conduct so that all of us should be in a position to take those things as our guide lines while dealing with law and order problem or to political problems when the policemen are to be involved to solve these problems.

Otherwise what happens-whenever there is a ruling party the opposition party always wants to take advantage of any incident and blame the Government and the police, thinking that it is the only way to beat down the party in power. Or the party in power always waysto justiy whatever it has done ; and in the procesy

we run into two extreme ends. Instead, whenever ther is any-incident occurs there are chances–whether this party or that part–at local level–of going and trying to influence in favour or otherr wise I would suggest in such matters or any communal clash or even any agitation of violent character, we should have an under-standing that none of us need intervene unless it is found to be beyond certain limits–whether the police man acted arbitrarily and have caused trouble to the persons concerned unnecessarily and have harassed or beaten them. We must have some restraint in this matter. That would go long way in keeping all those undesi-rable developments that we see around us.

ಶ್ರೀ ಜೆ. ಹೆಚ್. ಪಟೇಲ್.—ಪೋಲೀಸರ ಬಗ್ಗೆ ನಾನು ಕೇಳುವುದಿಷ್ಟೆ. ಪೋಲೀಸರಿಗೂ ಮತ್ತು ಜನರಿಗೂ ಇರತಕ್ಕ ಸಂಬಂಧ ಸುಧಾರಣೆಯಾಗಬೇಕು. ಇದಕ್ಕೆ ತಾವು ಏನು ವ್ಯವಸ್ಥೆ ಮಾಡುತ್ತೀರಿ ? ಏಕೆಂದರೆ ಇವತ್ತು ಜನರು ಪೋಲೀಸರನ್ನು ನೋಡಿದರೆ ಕೆಟ್ಟವರನ್ನಾಗಿ ನೋಡುತ್ತಾರೆ. ಒಂದು ರೀತಿಯ ಭಯದಿಂದ ನೋಡುತ್ತಾರೆ, ಅದೇ ಪೋಲೀಸರು ಜನರನ್ನು ನೋಡಿದರೆ ಏನೋ ಒಂದು ರೀತಿಯ ಸಂಶಯಾಸ್ಪದ ರೀತಿಯಿಂದ ನೋಡುತ್ತಾರೆ. ಇದು ನಮ್ಮ ರಾಜ್ಯದಲ್ಲೇ ಅಲ್ಲ, ಇಡೀ ದೇಶದಲ್ಲೇ ಈ ಒಂದು ಭಾವನೆ ಬೆಳೆದು ಬಂದಿದೆ. ಆದರೆ ಅದೇ ಬೇರೆ ದೇಶಗಳಲ್ಲಿ ತೆಗೆದುಕೊಂಡರೆ ಪೋಲೀಸರನ್ನು ಜನಗಳು ತಮ್ಮ ಸಹೋದರ, ಅಥವಾ ಸ್ನೇಹಿತನಂತೆ ಕಾಣುತ್ತಾರೆ. ಅವನನ್ನು ನಂಬುತ್ತಾರೆ, ಅವನಿಗೆ ಗೌರವ ಕೊಡುತ್ತಾರೆ. ಆದರೆ ನಮ್ಮ ದೇಶದಲ್ಲಿ ಈ ಪೋಲೀಸರನ್ನು ಜನಗಳು ನಂಬುವುದು ಇಲ್ಲ, ಪ್ರೀತಿಸುವುದೂ ಇಲ್ಲ. ಇದು ಏಕೆ ಹೀಗೆ ಎಂದರೆ ನಮ್ಮ ದೇಶದಲ್ಲಿ ಬ್ರಿಟಿಷರು ಇದ್ದಾಗ ಇವರನ್ನು ಸಾಕಿದ ನಾಯಿಗಳಂತೆ ಇಟ್ಟುಕೊಂಡಿದ್ದರು. ಯಾರಿಗೆ ಕಚ್ಚು ಎಂದರೆ ಅವರಿಗೆ ಕಚ್ಚುತ್ತಿದ್ದವು. ಈ ಒಂದು ಮನೋಭಾವ ಪೋಲೀಸರು ಹೋಗಿ ಜನಗಳಿಗೂ ಮತ್ತು ಪೋಲೀಸರಿಗೂ ಮಧ್ಯೆ ಒಳ್ಳೆಯ ಸಂಬಂಧ ಇರುವಂತೆ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಬೇರೆ ದೇಶಗಳಿಗೆ ನಮ್ಮ ದೇಶವನ್ನು ಹೋಲಿಕೆ ಮಾಡುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಬೇರೆ ದೇಶದಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ಗೆ ಇರತಕ್ಕ ಅಧಿಕಾರ ನಮ್ಮ ದೇಶದಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರ್‌ಗೂ ಇಲ್ಲ. ಯಾರಾದರೂ ಡ್ರೈವಿಂಗ್ ಮಾಡಿಕೊಂಡು ಹೋಗುವವರು ರಾಂಗ್ ಸೈಡ್ ಹೋದರೆ ಅವರನ್ನು ಹಿಡಿದು ದಂಡ ವಿಧಿಸುತ್ತಾರೆ. ಛಾರ್ಜ್ ಷೀಟ್ ಹಾಕಿ ಕೋರ್ಟ್‌ಗೆ ಕರೆದುಕೊಂಡು ಹೋಗುತ್ತಾರೆ. ಪೋಲೀಸರನ್ನು ನೋಡಿದರೆ ಸ್ವಲ್ಪ ಭೀತಿಯೂ ಇರಬೇಕು. ಭೀತಿ ಇಲ್ಲದಿದ್ದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಸಮಾಜವನ್ನು ಒಳ್ಳೆಯ ದಾರಿಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. ನಮ್ಮಲ್ಲಿ ಶಿಸ್ತು ಬಹಳ ಮುಖ್ಯವಾಗಿ ಇರಬೇಕಾಗಿದೆ. ತಾವು ನೋಡಿರಬಹುದು, ಕೇರಳದಲ್ಲಿ, ಕೊಡಗಿನಲ್ಲಿ, ಮಲೆನಾಡಿನ ಇನ್ನೂ ಕೆಲವು ಭಾಗಗಳಲ್ಲಿ ಮಕ್ಕಳು ಸ್ಕೂಲಿಗೆ ಹೋಗಬೇಕಾದರೆ ಯಾವಾಗಲೂ ರಸ್ತೆಯ ಎಡ ಭಾಗದಲ್ಲೇ ಹೋಗುತ್ತಿರುತ್ತವೆ. ಆ ಮಕ್ಕಳಿಗೆ ಹಾರ್ನ್ ಮಾಡಿ ದೂರ ಹೋಗಿ ಎಂದು ಯಾರೂ ಹೇಳಬೇಕಾಗಿಲ್ಲ. ಅದೇ ಇಲ್ಲಿ ತೆಗೆದುಕೊಂಡರೆ, ರಸ್ತೆಯ ಮಧ್ಯಭಾಗದಲ್ಲಿ ಹೋಗುತ್ತಿರುತ್ತಾರೆ, ಪೋಲೀಸರು ಬಂದು ರಸ್ತೆ ಮಧ್ಯದಲ್ಲಿ ಹೋಗಬೇಡಿ, ಅಂಚಿನಲ್ಲಿ ಹೋಗಿ ಎಂದು ಹೇಳಿದರೆ, ನೀನು ಯಾರಯ್ಯ ನನ್ನನ್ನು ಕೇಳುವುದಕ್ಕೆ ? ಎಂದು ಅವರು ಪೋಲೀಸರ ಮೇಲೆಯೇ ಜಗಳಕ್ಕೆ ಹೋಗುತ್ತಾರೆ. ನಂತರ ಪೋಲೀಸ್‌ನವರು ನಮಗೆ ಹೊಡೆದರು, ಎಂದು ಹೇಳುತ್ತಾರೆ. ಪರಿಸ್ಥಿತಿ ಹೀಗಿರುವಾಗ ನಾವು ಏನು ಲಾ ಅಂಡ್ ಆರ್ಡರ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು ? ಅದೇ ರೀತಿ ಆಟೋ ರಿಕ್ಷಾದವರು ರಾಂಗ್ ಸೈಡ್ ಬಂದು ಭರ್‌ರ್‌ರ್ ಎಂದು ತಿರುಗಿಸಿಕೊಂಡು ಹೊರಟು ಹೋಗುತ್ತಾರೆ. ಅವರನ್ನು ಹಿಡಿದು ಕೇಳುವುದಕ್ಕೆ ಹೋದರೆ ಅವರೂ ಕೂಡ ಪೋಲೀಸರು ನಮ್ಮನ್ನು ಹೊಡೆದರು, ಎಂದು ಮುಷ್ಕರ ಹೂಡಿದ್ದಾರೆ. ಪೋಲೀಸರಿಂದ ನಮಗೆ ಗೌರವ, ಪ್ರೀತಿ ಸಿಕ್ಕಬೇಕಾದರೆ ನಾವೂ ಕೂಡ ಅವರಿಗೆ ಗೌರವ, ಪ್ರೀತಿಗಳನ್ನು ತೋರಿಸಬೇಕು. ತಾವು ಇದನ್ನು ಒಪ್ಪದಿದ್ದರೆ ನಾನು ತಮ್ಮನ್ನು ಒಂದು ಮಾತು ಕೇಳುತ್ತೇನೆ. ಅಮೆರಿಕಾ ಆಗಲಿ, ಜಪಾನ್ ಆಗಲಿ

ಅಲ್ಲಿ ಪೋಲೀಸರಿಗೂ, ಜನಗಳಿಗೂ ಗಲಾಟೆ ಆಗುವುದೇ ಇಲ್ಲವೆ ? ಅಲ್ಲಿ ಲಾಠಿ ಛಾರ್ಜ್ ಆಗುವುದಿಲ್ಲವೆ ? ಟಿಯರ್ ಗ್ಯಾಸ್ ಬಿಡುವುದಿಲ್ಲವೆ ? ಇದು ಕಮ್ಯುನಿಸ್ಟ್ ಕಂಟ್ರಿಗಳಲ್ಲಿ ಸ್ವಲ್ಪ ಕಡಿಮೆ ಇರುತ್ತದೆಂದು ಮಾನ್ಯ ಕಕ್ಕಿಲಾಯ ಅವರು ಹೇಳಬಹುದು. ಅಲ್ಲಿ ಈ ರೀತಿ ಗಲಾಟೆಗಳಾದರೆ ಇದಕ್ಕಿಂತಲೂ ಹೆಚ್ಚಿಗೆ ಏಟು ಬೀಳುತ್ತವೆ. ನಮ್ಮಲ್ಲಿ ಏನಾಗಿದೆ ಎಂದರೆ ಇಂಥ ಒಂದು ಕೇಸ್ ಸಿಕ್ಕಿದರೆ ಸಾಕು ಪೇಪರ್‌ಗಳಲ್ಲಿ ಅದಕ್ಕೆ ಬಣ್ಣ ಕಟ್ಟಿ, ಉತ್ಪ್ರೇಕ್ಷೆ ಮಾಡಿ ಬರೆಯುವುದು ಬೆಳೆದು ಬಂದಿದೆ. ಪೋಲೀಸರು ಹೊಡೆಯದಿದ್ದರೂ ನನ್ನ ಕೆನ್ನೆಗೆ ಹೊಡೆದ, ಬೆನ್ನಿಗೆ ಗುದ್ದಿದ ಎಂದು ಬರೆಯುತ್ತಾರೆ. ಹೀಗಾದರೆ ಪೋಲೀಸರ ಮಾರೆಲ್ ಹೇಗೆ ಉಳಿಯುತ್ತದೆ ಇನ್ನೊಂದು ಉದಾಹರಣೆ ಹೇಳುವುದಾದರೆ ನಮ್ಮ ಮಗು ತಪ್ಪು ಮಾಡಿದಾಗ ಹೊಡೆಯುತ್ತೇವೆ. ಅದು ಇನ್ನೂ ಅಳುವುದಕ್ಕೆ ಪ್ರಾರಂಭಿಸಿದಾಗ ಮತ್ತೊಂದು ಏಟು ಹೊಡೆದು ಬಾಯಿ ಬಿಟ್ಟೀಯೆ ಹುಷಾರ್ ಎಂದು ಹೇಳುತ್ತೇವೆ. ಇನ್ನೂ ಜಾಸ್ತಿ ಅಳುವುದಕ್ಕೆ ಪ್ರಾರಂಭಿಸಿದಾಗ ಬಾಯಿ ಮುಚ್ಚು ಉಸಿರು ಬಿಟ್ಟೀಯೆ ಎಂದು ಮತ್ತೆ ಹೊಡೆಯುತ್ತೇವೆ. ಅಂದರೆ ನಾವೆಲ್ಲರೂ ಇದರ ಬಗ್ಗೆ ದೀರ್ಘಾಲೋಚನೆ ಮಾಡಬೇಕು. This minimum values of conduct if we are able to evolve perhaps we would go a long way.

ಶ್ರೀ ಜೆ. ಹೆಚ್. ಪಟೇಲ್.— ಸ್ವಾಮಿ, ಈ ಸಂದರ್ಭದಲ್ಲಿ ತಾವು ನನ ಮಾತನ್ನು ಅಪಾರ್ಥ ಮಾಡಿಕೊಳ್ಳದಿದ್ದರೆ ಸ್ವೀಡನ್‌ನ ಪ್ರಧಾನ ಮಂತ್ರಿಗಳಿಗೆ ಸಂಬಂಧಿಸಿದಂತೆ ಒಂದು ಮಾತನ್ನು ಇಲ್ಲಿ ಉದಾಹರಣೆಗಾಗಿ ಹೇಳಬಯಸುತ್ತೇನೆ. ಅಲ್ಲಿ ಚುನಾವಣೆಗೆ ಮುಂಚಿತವಾಗಿ ನಡೆದಂಥ ಒಂದು ಘಟನೆ. ಒಂದು ದಿನ ಸಂಜೆ ಸ್ವೀಡನ್‌ನ ಪ್ರಧಾನಮಂತ್ರಿ ತನ್ನ ಕಾರ್‌ನ್ನು ವೇಗವಾಗಿ ಡ್ರೈವ್ ಮಾಡಿಕೊಂಡು ಬರುತ್ತಿದ್ದ. ಆಗ ಅಲ್ಲಿದ್ದ ಒಬ್ಬ ಸಾಮಾನ್ಯ ಪೋಲಿಸ್ ಪೇದೆ ಈ ಕಾರನ್ನು ನಿಲ್ಲಿಸಿ ನೀನು ಬಹಳ ವೇಗವಾಗಿ ಹೋಗುತ್ತಿದ್ದಿ, ಅಲ್ಲದೆ ಕುಡಿದಿದ್ದಿ ನಿನ್ನ ಮೇಲೆ ಕೇಸ್ ಹಾಕಬೇಕಾಗಿದೆ ಎಂದು ಹೇಳಿದ. ಅದಕ್ಕೆ ಆ ಪ್ರಧಾನ ಮಂತ್ರಿಯವರು ಕಾರ್‌ನಿಂದ ಕೆಳಗೆ ಇಳಿದು ನಾನು ಯಾರು ಗೊತ್ತೆ ? ನಾನು ಈ ದೇಶದ ಪ್ರಧಾನಮಂತ್ರಿ, ನನ್ನನ್ನೂ ತಡೆದು ನಿಲ್ಲಿಸುತ್ತೀಯಾ ? ಎಂದು ಕೇಳಿದರು. ಅದಕ್ಕೆ ಆ ಪೋಲಿಸ್‌ನವನು ಹೇಳಿದ, ನೀವು ಯಾರಾದರೆ ನಮಗೇನು ? ತಪ್ಪು ಮಾಡಿದವರನ್ನು ಶಿಕ್ಷಿಸುವುದು ನಮ್ಮ ಕರ್ತವ್ಯ ನೀವು ಏನು ಕಾನೂನನ್ನು ಜಾರಿಗೆ ಕೊಟ್ಟಿದ್ದೀರಿ ಅದನ್ನು ನಾನು ಪಾಲಿಸುತ್ತಿದ್ದೇನೆ. ನಿಮ್ಮ ಡ್ರೈವಿಂಗ್ ಲೈಸೆನ್ಸ್ ತೋರಿಸಿ ಎಂದು ಕೇಳಿದ. ಆಗ ಆ ಪ್ರಧಾನಿ ಹತ್ತಿರ ಲೈಸೆನ್ಸ್ ಇರಲಿಲ್ಲ. ತಕ್ಷಣ ಅವರು ಹತ್ತಿರದಲ್ಲೇ ಎಲ್ಲೋ ಹೋಗಿ ತಮ್ಮ ಕಾರ್ಯದರ್ಶಿಗೆ ಫೋನ್ ಮಾಡಿ, ತಮ್ಮ ಡ್ರೈವಿಂಗ್ ಲೈಸೆನ್ಸ್ ತಂದು ಆ ಪೋಲಿಸ್‌ಗೆ ತೋರಿಸಿ ಎಂದು ಹೇಳಿ, ಪೋಲಿಸ್‌ನ ಚಲನ್‌ಗೆ (ನಮ್ಮಲ್ಲಿ ಅಕ್ನಾಲೆಡ್ಜ್‌ಮೆಂಟ್) ರುಜು ಹಾಕಿ ಮನೆಗೆ ಹೋದರು. ಅವರು ತನಗೆ ಅಧಿಕಾರವಿದೆಯೆಂದು ಆ ಪೋಲಿಸ್ ಮೇಲೆ ಜಬರ್‌ದಸ್ತಿ ಮಾಡಬಹುದಾಗಿತ್ತು ಆದರೆ ಮಾಡಲಿಲ್ಲ. ಈ ರೀತಿ ಅವರು ಕಾನೂನಿಗೆ ಗೌರವ ಕೊಟ್ಟಿದ್ದರಿಂದ ಅಲ್ಲಿನ ಜನರು ಮತ್ತೊಮ್ಮೆ ಅವರನ್ನೇ ಪ್ರಧಾನ ಮಂತ್ರಿಯಾಗಿ ಆರಿಸಿದರು. ಅಂದರೆ ಆ ಜನ ಕಾನೂನಿಗೆ ಅಷ್ಟು ಗೌರವ ಕೊಡುತ್ತಾರೆ. ಆದರೆ ನಮ್ಮ ದೇಶದಲ್ಲಿ ಒಬ್ಬ ಛೋಟಾ ಮಂತ್ರಿ ಎದುರಿಗೆ ಪೋಲಿಸರು ಮಾತನಾಡುವಂತಿಲ್ಲ. ಒಬ್ಬ ಎಂ.ಎಲ್.ಎ. ತನಗೆ ಪೋಲಿಸ್‌ನವನು ಸೆಲ್ಯೂಟ ಮಾಡಲಿಲ್ಲವೆಂದು ಕೆನ್ನೆಗೆ ಹೊಡೆಯುವ ಮಟ್ಟಕ್ಕೆ ಹೋಗಿದ್ದೇವೆ. ಅಂದರೆ ನಮ್ಮ ದೇಶದಲ್ಲಿ ಕಾನೂನಿಗೆ ಬೆಲೆ ಇಲ್ಲದಂತೆ ಆಗಲು ನಾವೇ ಕಾರಣರಾಗಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.— ಈ ವಿಚಾರದಲ್ಲಿ ನಾವೂ, ನೀವೂ ಒಟ್ಟಿಗೆ ಕೂಡಿ ಕೋಡ್ ಆಫ್ ಕಾಂಡಕ್ಟ್ ರೂಪಿಸಬೇಕು.

ಅನಂತರ ನೀವು ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ. ಅವೆಲ್ಲವನ್ನೂ ಕೂಲಂಕುಶವಾಗಿ ಪರಿಶೀಲನೆಮಾಡಿ ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೀತಿ ಮಾಡಬೇಕೋ ಮಾಡೋಣ' ಎಲ್ಲವನ್ನು ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ

ಇನ್ನು ಅಡ್ಮಿನಿಸ್ಟ್ರೇಷನ್ ಇಂಪ್ರೂವ್‌ಮೆಂಟ್ ಬಗ್ಗೆ ಹೇಳಿರುತ್ತೀರಿ, ಪೋಲೀಸ್ ಸ್ಟೇಷನ್‌ಗೆ ಕಂಪ್ಲೈಂಟ್ಸ್ ಕೊಡುವುದಕ್ಕೆ ಬಂದರೆ ಅದಕ್ಕೆ ಅಕ್ನಾಲೆಡ್ಜ್‌ಮೆಂಟ್ ಕೊಡತಕ್ಕಂಥ ಏರ್ಪಾಡು ಮಾಡಬೇಕೆಂದು ಹೇಳಿರುತ್ತಾರೆ. ಅದನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತೇನೆ. ಸೈನ್‌ಟಿಫಿಕ್ ಮೊಬೈಲ್ ಲ್ಯಾಬರೇಟರಿಯನ್ನು ಮಾಡಬೇಕೆಂದು ಸಲಹೆಯನ್ನು ಕೊಟ್ಟಿರುತ್ತಾರೆ, ಅದನ್ನು ಮಾಡಲು

ಏರ್ಪಾಡು ಮಾಡುತ್ತೇನೆ. ಫಾರ್ಮೇಷನ್ ಆಫ್ ಸಿಟಿಸನ್ಸ್ ಕಮಿಟಿಯನ್ನು ಮಾಡಬೇಕೆಂದು ಹೇಳಿರುತ್ತಾರೆ ಈಗಾಗಲೇ ಅದನ್ನು ಕೆಲವೊಂದು ಮುಖ್ಯವಾದ ಜ್ಯುರಿಸ್‌ಡಿಕ್ಷನ್‌ಗಳಲ್ಲಿ ಮಾಡಿದ್ದೇವೆ. ಪ್ರತಿಯೊಂದು ಪೋಲೀಸ್ ಸ್ಟೇಷನ್‌ಗಳಲ್ಲೂ ಮಾಡಬೇಕೆಂದು ಸಲಹೆಯನ್ನು ಕೊಟ್ಟಿರುತ್ತೀರಿ ಅದಕ್ಕೆ ಏನು ಮಿತಿ ಇರುತ್ತದೋ ಅದನ್ನು ನೋಡಿ ಮಾಡಿಸೋಣ. ಇನ್‌ವೆಸ್ಟಿಗೇಷನ್ ಆಫ್ ಕೇಸಸ್‌ಗಳು ಸರಿಯಾಗಿ ನಡೆಯುತ್ತಿಲ್ಲವೆಂದು ದೂರು ಇರುತ್ತದೆ. We will ask the senior police officers to supervise the investigation of crimes. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಕ್ರೈಮ್ ವಿಚಾರಗಳನ್ನು ತೆಗೆದುಕೊಂಡಾಗ ಬೇರೆ ರಾಜ್ಯಗಳಿಗೆ ಹೋಲಿಸಿನೋಡಿದರೆ ಇಲ್ಲಿ ಕ್ರೈಮ್ ನಂಬರ್ ಜಾಸ್ತಿ ಕಂಡುಬಂದರೂ ಕಳೆದ ವರ್ಷದಲ್ಲಿ ಅದರಲ್ಲೂ ಜನರಲ್ ಎಲೆಕ್ಷನ್ ಆಯಿತು. ಅಸೆಂಬ್ಲಿ, ತಾಲ್ಲೂಕ್ ಬೋರ್ಡ್, ಚುನಾವಣೆಯೂ ನಡೆಯಿತು. ಪಂಚಾಯತಿ ಚುನಾವಣೆಯೂ ನಡೆಯಿತು, ಚಿಕ್ಕಮಗಳೂರು ಚುನಾವಣೆಯೂ ನಡೆಯಿತು, ಈಗ ಮುನಿಸಿಪಲ್ ಚುನಾವಣೆಗಳು ನಡೆಯುತ್ತಿವೆ. ಇಷ್ಟೆಲ್ಲ ಚುನಾವಣೆಗಳು ನಡೆಸಿದರು ಶಾಂತಿಯಿಂದ, ಸಮಾಧಾನದಿಂದ ಲಾ ಅಂಡ್ ಆರ್ಡರ್ ಚೆನ್ನಾಗಿ ಮೆನ್‌ಟೈನ್ ಮಾಡಿಕೊಂಡು ಬಂದಿರುತ್ತಾರೆ. ತಾವು ಕೂಡ ಶಹಬಾಸ್‌ರಿಯನ್ನು ಕೊಟ್ಟಿದ್ದೀರಿ. ಇನ್ನೂ ಹೆಚ್ಚಿಗೆ ಕೊಡಬೇಕಾಗಿತ್ತೆಂದು ಹೇಳುತ್ತೇನೆ.

ಅನಂತರ We are considering whether it is possible to bring in an amendment to Police Act or some other Act, or whether to request the Central Government to give more powers for the Police Sub-Inspector and downward level, ಎತಕ್ಕೆಂದರೆ ಪಿಟಿ ಕೇಸಸ್‌ಗಳಿಗೆಲ್ಲ ಕೋರ್ಟಿಗೆ ಹೋದರೆ ಅದು ಎಷ್ಟೋ ದಿವಸಗಳು ತೆಗೆದುಕೊಳ್ಳುತ್ತದೆ. ಈಗ ಸೈಕಲ್ ಸವಾರರು ವ್ರಾಂಗ್ ಸೈಡ್‌ನಲ್ಲಿ ಹೋಗುವುದು, ಸಿಗ್ನಲ್ ಲೈಟ್ಸ್ ಇವುಗಳ ನಿಯಮವನ್ನು ಉಲ್ಲಂಘನೆ ಮಾಡುವುದು ಇಂಥದಕ್ಕೆಲ್ಲ ಸ್ಥಳದಲ್ಲೇ ೨-೩ ರೂಪಾಯಿಗಳ ಫೈನ್ ಹಾಕಿ ಒಂದು ಚೀಟಿಯನ್ನು ಕೊಟ್ಟು ಬ್ಯಾಂಕಿನಲ್ಲಿ ಕಟ್ಟತಕ್ಕಂಥ ಸಲಹೆಯನ್ನು ಏನು ಕೊಟ್ಟಿರುತ್ತಾರೆ ಅದು ಒಂದು ಒಳ್ಳೆಯ ಸಲಹೆಯಾಗಿರುತ್ತದೆ, ಕಾರುಗಳಾದರೆ ಅದರ ನಂಬರ್‌ಗಳನ್ನು ಗುರುತುಮಾಡಿಕೊಳ್ಳಬಹುದು, ಆದರೆ ಸೈಕಲ್‌ಗಳಾದರೆ ಸುಳ್ಳು ಅಡ್ರಸ್‌ಕೊಟ್ಟು ಹೋದರೂ ಗೊತ್ತಾಗುವುದಿಲ್ಲ. Nevertheless I will get it examined. If it is possible to do some thing at the State level I will do something. If not, I will request the Central Government-Home Department-whether the Police Sub-Inspector and downward level officers can be vested with such authority.

ಇನ್ನು ಸಪ್ರಷನ್. ಇಮ್‌ಮಾರಲ್ ಟ್ರಾಫಿಕ್ ಗ್ಯಾಮಬ್ಲಿಂಗ್ ಇವೆಲ್ಲ ಜಾಸ್ತಿಯಾಗಿದೆ, ಮಟಕ ಪ್ರಕರಣಗಳು ಜಾಸ್ತಿಯಾಗಿದೆ ಎಂತಲೂ ಕೂಡ ಅನೇಕ ಸದಸ್ಯರು ತಿಳಿಸಿದರು. ಇಷ್ಟೆಲ್ಲ ಆಗುವುದೆಲ್ಲ ಎಲ್ಲಿ ಎಂದರೆ ಇಂಡಸ್ಟ್ರಿಯಲೈಸೇಷನ್ ಎಲ್ಲಿ ಇರುತ್ತದೋ ಅಲ್ಲಿ ಇದೆಲ್ಲ ಇದ್ದೇ ಇರುತ್ತದೆ. ರಾಮಾಯಣ ಕಾಲದಲ್ಲಿಯೂ ಇತ್ತು. ವೇದಗಳ ಕಾಲದಲ್ಲಿ ಇರಲಿಲ್ಲವೆಂದಲ್ಲ. ಕೆ. ಮುನ್‌ಷಿಯವರ ಪುಸ್ತಕವನ್ನು ಓದಿದರೆ ತಿಳಿಯುತ್ತದೆ. ಲೋಪಮುದ್ರೆ ಕಾಲದಲ್ಲಿ ತಡಿಕೆಯ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದರು. ಲೋಪಮುದ್ರೆ ಒಬ್ಬ ಸುಂದರವಾದ ಯುವತಿ ಆಕೆ ಗಂಡ ಅಗಸ್ತ್ಯ ಮಹರ್ಷಿ ಆಕೆ ಮನೆಯಲ್ಲಿ ಒಂದು ದಿವಸ ಮಲಗಿರಬೇಕಾದರೆ ಯಾರೋ ಒಬ್ಬ ಆಕೆಯನ್ನು ಮೋಹಿಸಲು ಪ್ರಯತ್ನ ಪಟ್ಟಾಗ ತಪ್ಪಿಸಿಕೊಳ್ಳಲು ಆಕೆ ಅವನ ಜೊತೆಯಲ್ಲಿ ಕಾದಾಡಬೇಕಾಯಿತು. ಪುರಾಣ ಇತಿಹಾಸದಲ್ಲಿ ಈ ರೀತಿಯಾದ ಕತೆಗಳು ಇರಬೇಕಾದರೆ ಈಗಿನ ಕಾಲದಲ್ಲಿ ಆರೀತಿ ಏನಾದರೂ ಆದರೆ ನೇರವಾಗಿ ಪೋಲೀಸ್‌ನವರ ಮುಂದೆ ಎಳೆದುಕೊಂಡು ಹೋಗಿ ನಿಲ್ಲಿಸಿಬಿಡುತ್ತಾರೆ

These are all matters in a society, which can never be completely eliminated. In an industrial civilisation it is still worse. In Germany, they have allowed prostitution openly. Our attitude is totally hypocritical. If there is prostitution, you license it. If you want to catch hold of this person or that person, what is the

use ? 10 persons will do it to-morrow. We are indulging in some of the matters which are impossible to be corrected. On the othe hand, we do not take interest in matters, where we have taken more interest. I am not arguing for prostitution. In a society certain evils are persistent from age old time; even now they do persist and here is a society where free love is not allowed. In the western society a boy and a girl can marry ; no parent will take objection. They can go to a cinema. Here can you allow your daughter to go with some other boy ? You begin to look upon them with suspicion. She is socially ostracized for it ಒಬ್ಬರು ಸದಸ್ಯರು ಹೇಳಿದರು ರಾತ್ರಿ ೧೨ ಗಂಟೆಯ ಹೊತ್ತಿನಲ್ಲಿ ಹೆಣ್ಣುಮಕ್ಕಳು ತಿರುಗಾಡುವುದಕ್ಕೆ ಆಗುವುದಿಲ್ಲವೆಂದು ಬೆಂಗಳೂರು ನಗರದಲ್ಲಿ ಹೀಗಾಗುತ್ತಿರುತ್ತದೆ. ಆದರೆ ಈಗಿನ ಸಂದರ್ಭದಲ್ಲಿ ಹುಡುಗ ಹುಡಿಗಿಯನ್ನು ಹೊತ್ತುಕೊಂಡು ಹೋಗುವುದಿರಲಿ. ಹುಡುಗಿಯೇ ಹುಡುಗನನ್ನು ಹೊತ್ತುಕೊಂಡು ಹೋಗುವಂಥ ಕಾಲಬಂದಿರುತ್ತದೆ. ಹುಡುಗಿಯರು ಏನು ಮಾಡುತ್ತಿದ್ದಾರೆಂದರೆ ಕಾರಿನಲ್ಲಿ ಹೋಗುತ್ತಿರುವವರನ್ನು ಈ ರೀತಿ ಕೈಚಾಚಿ ಹೆಬ್ಬೆರಳನ್ನು ತೋರಿಸಿ ಲಿಫ್ಟ್ ಕೊಡುತ್ತೀರಾ ಎಂದು ಕೇಳುತ್ತಾರೆ. ಅವರು ಕರೆಯತಕ್ಕಂಥ ವಿಧಾನ ನೋಡಿದರೆ ದಾರಿಯಲ್ಲಿ ಹೋಗತಕ್ಕಂಥ ಜನರ ಮನಸ್ಸಿಗೆ ಎಡೆ ಕೊಟ್ಟಂತಾಗುತ್ತದೆ.

ಶ್ರೀಮತಿ ಎಸ್. ಪ್ರಮೀಳ.— ಮಾನ್ಯ ಮಂತ್ರಿಗಳು ಇದಕ್ಕೆಲ್ಲ ಎನ್‌ಕರೇಜ್ ಮಾಡುತ್ತೀರಾ ಎಂದು ಹೇಳುತ್ತೇನೆ. ಲೆಜಿಸ್ಲೇಚರ್ ಹೋಮ್‌ನಲ್ಲಿ ಗ್ಯಾಮ್‌ಲಿಂಗ್ ನಡೆಯುತ್ತಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲವೆ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್—ಅದೆಲ್ಲಾ ಸರಿಯೇ. ಆದರೆ......

ಶ್ರೀ ಗಟ್ಟಿ ಚಂದ್ರಶೇಖರ್—ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಬರೀ ಹೆಂಗಸರೇ ಸೇರಿಕೊಂಡು ಇಸ್ಪೀಟ್ ಆಡುತ್ತಾರಂತೆ. ನಾವು ಅಲ್ಲಿ ಹೋಗುವುದಕ್ಕಾಗುತ್ತದೆಯೇ ? ಆದ್ದರಿಂದ ಇಲ್ಲಿ ಸೇರಿಕೊಂಡು ಇಸ್ಪೀಟ್ ಆಡುತ್ತೇವೆ,

5-30 P.M.

SRI D. DEVARAJ URS—Matka gambling ಜಾಸ್ತಿಯಾಗಿದೆ ಎಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ ಅದು ಬಹಳ ವೈಪರೀತ್ಯಕ್ಕೆ ಹೋಗಿದೆ. I must frankly admit that we have not been able to effectively control it I don't know whether it is possible to completely control it but I can only promise this House that myself and the Department will try out utmost to see that this matka gambling if not completely eliminated is to a large extent minimised. There may be some other methods of effectively tackling it and I am not in a position to state what are those methods but I will go deeper into this matter. ಹೆಂಗಸರಿಗೇ ಬೇರೆ ಪೋಲೀಸ್ ಸ್ಟೇಷನ್‌ಗಳನ್ನು ಮಾಡಿ ಎಂದು ಹೇಳಿದ್ದಾರೆ. I don't know whether it is practicable but still, we have 7 Women PSIs mostly in the City areas, I think. We have got 49 Women Head Constables and 202 Women PCs all over the State. ಕೆಲವು ಸಂದರ್ಭದಲ್ಲಿ we have to take certain help ವಿಮೆನ್ ಪೋಲೀಸರನ್ನು ಎಲ್ಲಿ ಹಾಕಬೇಕೋ ಅಲ್ಲಿ ಹಾಕೋಣ ಅವರ ಸಂಖ್ಯೆ ಇನ್ನೂ ಹೆಚ್ಚಬೇಕು ಎಂದು ಹೇಳಿದರೆ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ, ಆದರೆ ಇವರನ್ನೇ ಹೆಚ್ಚಿಗೆ ತೆಗೆದುಕೊಂಡರೂ ಕಷ್ಟವಾಗುತ್ತವೆ. ಇದು ನಿಮಗೂ ಗೊತ್ತು. ಮಾನ್ಯ ಸದಸ್ಯರು ಹೆಂಗಸರಿಗೇ ಬೇರೆ ಪೋಲೀಸ್ ಸ್ಟೇಷನ್ ಮಾಡಿ ಎಂದರೆ ಹೇಳಿದ್ದಾರೆ,

ಶ್ರೀಮತಿ ಎಸ್. ಪ್ರಮಿಳ—ಆಂಧ್ರಪ್ರದೇಶದಲ್ಲಿ ಮಾಡಿದ್ದಾರೆ.

ಶ್ರೀ ಡಿ, ದೇವರಾಜ ಅರಸ್—ಅವರು ಮಾಡಿದ್ದಾರೆ......ನೋಡೋಣ. ಮತ್ತೆ ಕೆಲವು ಮಾನ್ಯ ಸದಸ್ಯರು ಲ್ಯಾಂಡ್ ಡಿಸ್ಪ್ಯೂಟ್ ವಿಚಾರದಲ್ಲಿ ಪೋಲೀಸರು ತಲೆಹಾಕುತ್ತಿದ್ದಾರೆ ಎಂದು ಹೇಳಿದರು. ಅವರು ಇಂಟರ್‌ಫಿಯರ್ ಮಾಡಬೇಕಾದಾಗ ಮಾಡಲೇಬೇಕು ಎಂದು ಹೇಳುವವನು ನಾನು. ಈಗ ನಾವು ಅನೇಕ ಸುಧಾರಣೆಗಳನ್ನು ತರುತ್ತಿದ್ದೇವೆ. ಸೋಷಿಯೋ ಎಕನಾಮಿಕ್ ಮೆಷರ್ಸ್ ಬರುತ್ತಿದೆ. ಲ್ಯಾಂಡ್ ಟೆನೆನ್ಸಿ ಆಕ್ಟ್ ಇದೆ. ನಿಮಗೆಲ್ಲಾ ಗೊತ್ತಿದೆ ಎಷ್ಟೋ ಸಾರಿ ಟ್ರಿಬ್ಯುನಲ್‌ನಲ್ಲಿ ಅವಾರ್ಡ್ ಕೊಟ್ಟಿದ್ದರೂ ಕೂಡ ಮಾಲೀಕರು ಗೇಣಿದಾರನಿಗೆ ಹೊಡೆಯುತ್ತಾರೆ, ಬಡಿಯುತ್ತಾರೆ, ಏನೆಲ್ಲಾ ಮಾಡುತ್ತಿದ್ದಾರೆ. ಆಗ ಪೋಲೀಸಿನವರು ಆ ವಿಚಾರ ನನಗೆ ಸಂಬಂಧಪಟ್ಟಿಲ್ಲ, ನೀನು ಬೇಕಾದರೆ ಕೋರ್ಟಿಗೆ ಹೋಗು ಎಂದು ಸುಮ್ಮನೆ ಇರುವುದಕ್ಕಾಗುತ್ತದೆಯೇ ? Is it the way if you really want to help the weaker sections ? ಹರಿಜನರಿಗೆ ಇಲ್‌ಟ್ರೀಟ್ ಮಾಡಿದರೆ ಪೋಲೀಸರು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ ? Debt liquidation Act ಮಾಡಿದ್ದೇವೆ ಆದರೂ ಕೆಲವರು ನಾನು ಕೊಟ್ಟ ಸಾಲ ಕೊಡು ಎಂದು ಹೆದರಿಸುತ್ತಿರುತ್ತಾರೆ. ಆಗ ಆಗ ಇವನು ಪೋಲೀಸರಿಗೆ ದೂರು ಹೇಳದೇ ಇನ್ಯಾರಿಗೆ ಹೇಳಬೇಕು ? ಪೋಲೀಸರು ಇಂಟರ್‌ಫಿಯರ್ ಮಾಡಬಾರದು ಎಂದು ಹೇಳಿದರೆ ಅದು ಹೇಗೆ ಸಾಧ್ಯ ? ನಮ್ಮ programme, policy, approach, ಏನಿದೆ ಅದರಂತೆ ಕಾನೂನು ರಕ್ಷಣೆ ಮಾಡುವುದಕ್ಕೆ ಪೋಲೀಸರಿದ್ದಾರೆ, ಕಾನೂನಿನಿಂದ ಯಾವ ಜನಕ್ಕೆ ರಕ್ಷಣೆ ಸಿಗಬೇಕೋ ಅದನ್ನು ಕೊಡುವುದು ಅವರ ಜವಾಬ್ದಾರಿ. ಆಗ ಅವರಿಗೆ ಅದು ಮಾಡಬೇಡ, ಇದು ಮಾಡಬೇಡ ಎಂದು ಹೇಳಿ ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ. ಅದೆಲ್ಲಾ ಮಾಡಬೇಡ ಎಂದರೆ ಪೋಲೀಸರಿರುವುದು ಬರೀ ಲೆಫ್ಟ್ ರೈಟ್ ತೋರಿಸಿಕೊಂಡಿರುವುದಕ್ಕಾ ಇರುವುದು ? ನಾನು ಇನ್ನು ಎರಡು ವಿಚಾರಗಳನ್ನು ಈಗ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಸಿ.ಒ.ಡಿ. ವಿಚಾರ; ಇನ್ನೊಂದು ಸಬ್-ಇನ್‌ಸ್ಪೆಕ್ಟರ್ ರೆಕ್ರೂಟ್‌ಮೆಂಟ್ ವಿಚಾರ. ೧೯೭೨ನೇ ಇಸವಿಯಲ್ಲಿ ಸಬ್-ಇನ್‌ಸ್ಪೆಕ್ಟರ್ಸ್‌ಗೆ ರೆಕ್ರೂಟ್‌ಮೆಂಟ್ ನಡೆಯಿತು. ೧೯೭೦ರಲ್ಲೂ ನಡೆದಿತ್ತು. ಅದರ ಹಿಂದೆಯೂ ನಡೆದಿತ್ತು. ೧೯೭೩ನೇ ಇಸವಿಯಲ್ಲಿ ನಾನು ಮುಖ್ಯಮಂತ್ರಿಯಾಗಿ ಬಂದಮೇಲೆ ಕೂಡ ರೆಕ್ರೂಟ್‌ಮೆಂಟ್ ನಡೆದಿದೆ. By the time I took over as Chief Minister in 1972, the recruitment had been over. ಅಷ್ಟು ಹೊತ್ತಿಗಾಗಲೇ ಒಂದು ಜನಜ್ಞನಿತವಾದ ಅಭಿಪ್ರಾಯ ಎಲ್ಲರಲ್ಲೂ ಇತ್ತು. ಅದೇನೆಂದರೆ ಸಬ್-ಇನ್‌ಸ್ಪೆಕ್ಟರ್ ಕೆಲಸಕ್ಕೆ ೨೫-೩೦ ಸಾವಿರ ರೂಪಾಯಿ ಕೊಟ್ಟು ಆಗಿದ್ದಾರೆ ಎಂಬುದು. ಆದರೆ ೧೯೭೩ರಿಂದೀಚೆಗೆ ಯಾರು ಬೇಕಾದರೂ ಪ್ರೂವ್ ಮಾಡಲಿ ಸಬ್-ಇನ್‌ಸ್ಪೆಕ್ಟರ್ ಕೆಲಸಕ್ಕೆ ಲಂಚ ಕೊಟ್ಟು ಸೇರುತ್ತಿದ್ದಾರೆ ಎಂಬುದನ್ನು. I will take it as a challange. ಈ ರೀತಿ ಹೇಳುವುದಕ್ಕೆ ಏನು ಕಾರಣ ಎಂದರೆ ಹಿಂದೆ ಇದ್ದಂಥ ನೂರಾರು ಜನ ಸಬ್-ಇನ್‌ಸ್ಪೆಕ್ಟರ್‌ಗಳು ಯಾರಾಗಿದ್ದಾರೆ ಅವರು ಅಲ್ಲಲ್ಲಿ ಮಾತನಾಡಿರುವುದು ನಿಜ, ನಾವೆಲ್ಲಾ ಲಂಚ ಕೊಟ್ಟು ಕೆಲಸಕ್ಕೆ ಬಂದಿದ್ದೇವೆ, ಆ ದುಡ್ಡನ್ನೆಲ್ಲಾ ಹೇಗೆ ಸಂಪಾದನೆ ಮಾಡಬೇಕು ಎಂದು ಹೇಳಿರಬಹುದು. Naturally it spreads but the impression that will be gained is that Oh! everybody has come into service in this form only. ಒಂದು ಭಾವನೆ ಜನಗಳಲ್ಲಿ ಬಂದಿರುವುದರಿಂದ ಅದೇ ಭಾವನೆ ಎಲ್ಲರಲ್ಲೂ ಇದೆ. ನಿಜವಾದ ವಿಷಯ ಏನು ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಹೀಗಾಗಿ ಸಬ್-ಇನ್‌ಸ್ಪೆಕ್ಟರ್ ಕೆಲಸಕ್ಕೆ ಬಂದಿರುವವರೆಲ್ಲಾ ಅದೇ ರೀತಿ ಲಂಚ ಕೊಟ್ಟು ಬಂದಿದ್ದಾರೆ ಎಂಬ ಭಾವನೆ ಎಲ್ಲರಲ್ಲೂ ಇದೆ. ಅದರ ಹಿಂದೆ ಯಾರೋ ಕೊಟ್ಟು ಸೇರಿಕೊಂಡಿದ್ದವರು ಆ ರೀತಿ ಮಾತನಾಡಿಕೊಂಡಿರಬಹುದು. ಆದರೆ ಜನಗಳಿಗೆ ೧೯೭೦ರ ಬ್ಯಾಚಿನಲ್ಲಿ ಬಂದವರು ಯಾರು ೧೯೭೪ರ ಬ್ಯಾಚಿನಲ್ಲಿ ಬಂದವರು ಯಾರು ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಎಲ್ಲರ ಮೇಲೂ ಅದೇ ಭಾವನೆ ಬಂದು ಬಿಟ್ಟಿದೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ೧೯೭೪ರಲ್ಲಿ ಸಬ್-ಇನ್‌ಸ್ಪೆಕ್ಟರ್ ಕೆಲಸಕ್ಕೆ ರೆಕ್ರೂಟ್‌ಮೆಂಟ್ ಮಾಡುವಾಗ ನನ್ನ ಆಪ್ತ ಸ್ನೇಹಿತರೊಬ್ಬರು ಯಾರೋ ಒಬ್ಬರನ್ನು ಕರೆದುಕೊಂಡು ಬಂದು ಇವನಿಗೆ ಕೆಲಸ ಕೊಡಿಸಬೇಕು ಎಂದು ಹೇಳಿದರು. ನಾನು ಅದಕ್ಕೆಲ್ಲಾ ಟೆಸ್ಟ್, ಪರೀಕ್ಷೆ, ಅದೆಲ್ಲಾ ಇದೆ ಆ ಮೇಲೆ ಫಿಸಿಕಲ್ ಟೆಸ್ಟ್ ಇದೆ, ಅದರಲ್ಲೆಲ್ಲಾ ತೇರ್ಗಡೆಯಾಗಿ ಬಂದರೆ ಕೆಲಸ ಸಿಗುತ್ತದೆ, ಇಲ್ಲದಿದ್ದರೆ ಇಲ್ಲ ಎಂದು ಹೇಳಿದೆ. ಅದಕ್ಕೆ ಅವರು ಇಲ್ಲ, ಇಲ್ಲ, ನೀವು ಹೇಳುವುದನ್ನು ನಾನು ಒಪ್ಪುವುದಿಲ್ಲ, ದುಡ್ಡು ಕೊಟ್ಟರೆ ಎಲ್ಲಾ ಆಗುತ್ತದೆ ಎಂದು ಹೇಳಿದರು.

ನಾನು ಅದಕ್ಕೆಲ್ಲಾ ಇಂಟರ್‌ಫಿಯರ್ ಆಗುವುದಿಲ್ಲ, ನಮ್ಮ ಆಫೀಸರ್‌ಗಳ ಬಗ್ಗೆ ನನಗೆ ನಂಬಿಕೆ ಇದೆ, ಅವರು ಆ ರೀತಿ ಮಾಡುವುದಿಲ್ಲ ಎಂದು ಹೇಳಿದೆ. ನೀವು ದುಡ್ಡು ತೆಗೆದುಕೊಂಡು ಅವರು ಕೆಲಸ ಮಾಡುವುದಿಲ್ಲ ಎಂದು ಹೇಳಿದ್ದೀರಿ, ಆದರೆ ನಾನು ಮಾಡಿಸುತ್ತೇನೆ ನೋಡಿ ನಿಮ್ಮ ಕೈಯಲ್ಲಿ ಆಗದಿದ್ದರೆ ಎಂದು ಹೇಳಿದರು. ನಾನು ಆ ರೀತಿ ಕೊಟ್ಟು ಮಾಡಿಸುವ ಹಾಗಿದ್ದರೆ ಮಾಡಿಸಿ, ಆಮೇಲೆ ಆದರೆ ನನಗೆ ಹೇಳಿ ಎಂದೆ. ಅವರು ೪೦ ಸಾವಿರ ರೂಪಾಯಿ ಹಿಡಿದುಕೊಂಡು ಓಡಾಡಿದ್ದಾರೆ, ನಾನು ಮೂರು ದಿವಸ ಏನೂ ಮಾತನಾಡಲಿಲ್ಲ, ಅದಾದ ಮೇಲೆ ಫೈನಲ್ ಲಿಸ್ಟ್ ಬಂತು. ಆಮೇಲೆ ನನ್ನ ಸ್ನೇಹಿತರನ್ನು ಕರೆದು ಕೇಳಿದೆ ಏನಾಯಿತು, ಕೆಲಸ ಸಿಕ್ಕಿತೇ ಎಂದು. ಅದಕ್ಕೆ ಅವರು ಇಲ್ಲ, ಆಗಲಿಲ್ಲ ಎಂದು ಹೇಳಿದರು. ೪೦ ಸಾವಿರ ರೂಪಾಯಿ ಕೊಟ್ಟು ಕೆಲಸ ಮಾಡಿಸುತ್ತೇನೆ ಎಂದು ಹೇಳಿದ್ದರಲ್ಲ ಏತಕ್ಕೆ ಮಾಡಲಿಲ್ಲ ಎಂದು ಕೇಳಿದೆ. ಇಲ್ಲ ಅದೇನೂ ನಡೆಯಲಿಲ್ಲ, ಯಾರೂ ದುಡ್ಡು ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ನಾನು ಆಗ ಹೇಳಿದೆ, ಈಗಲಾದರೂ ನನ್ನ ಮಾತಿನ ಮೇಲೆ ನಂಬಿಕೆ ಬಂತಲ್ಲ ಎಂದು. ೧೯೭೩ರಿಂದೀಚೆಗೆ ನಾನು ಗ್ಯಾರಂಟಿ ಹೇಳಬಲ್ಲೆ ಯಾರ ವಿಚಾರದಲ್ಲೂ ಯಾರೂ ಲಂಚ ತೆಗೆದುಕೊಂಡು ಕೆಲಸ ಮಾಡಿಲ್ಲ, ಮಾಡುವುದಕ್ಕೆ ಸಾಧ್ಯವೂ ಇಲ್ಲ. ಮಾನ್ಯ ಮಳ್ಳೂರು ಆನಂದರಾಯರು ಒಂದು ಮಾತು ಹೇಳುತ್ತಿದ್ದರು. ಅವರು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲ, ಅವರು ತಿಳಿದುಕೊಂಡಿದ್ದರೆ ಅದನ್ನೆಲ್ಲಾ ಹೇಳುತ್ತಿರಲಿಲ್ಲ. ಅವರು ಇವರು ಹೇಳಿರುವುದನ್ನು ಕೇಳಿಕೊಂಡು ಹೇಳಿರಬಹುದು ಅಷ್ಟೆ. ಐ.ಜಿ.ಪಿ. ಆಫೀಸಿನಲ್ಲಿ ಯಾರೋ ಒಬ್ಬರು ಇದ್ದಾರಂತೆ, ಅವರು ದುಡ್ಡು ಕೊಟ್ಟರೆ ಇಂಟರ್‌ವ್ಯೂ ಕೊಡಿಸುತ್ತಾರಂತೆ ಎಂದು ಹೇಳಿದರು. ಅದೆಲ್ಲಾ ಸಾಧ್ಯವಿಲ್ಲದ ಮಾತು. Please understand because unless a boy passes the physical tests, he will never be allowed for an interview. Therefore, the scope for getting an interview by paying Rs. 500 or Rs. 1000 does not arise at all unless a fool might have given some money subordinate officer with the hope of getting an interview. That is all. Such a question cannot happen and it does not arise and it does not happen. ಸುಮ್ಮ ಇಂಥ ವಿಚಾರಗಳಲ್ಲಿ ಪೂರ್ತಿ ವಿಮರ್ಶೆ ಮಾಡದೇ ಹೇಳುವುದು ಸರಿಯಲ್ಲ. ಇಷ್ಟು ಮಾತ್ರ ನಾನನೆ ಹೇಳಬಲ್ಲೆ.

ಶ್ರೀ ಮಳ್ಳೂರು ಆನಂದರಾವ್—ನಾವು ವಿಷಯ ಸರಿಯಾಗಿ ತಿಳಿದುಕೊಳ್ಳದೇ ಅಧ್ಯಯನ ಮಾಡದೇ ಏನೂ ಹೇಳುವುದೇ ಇಲ್ಲ. ಬೇಕಾದರೆ ನೀವು ವಿಚಾರಣೆ ಮಾಡಿ.

SRI D. DEVARAJ URS—Please do one thing. Come on. You come and tell me in confidence about that and I am prepared to tackle it. If you have got evidence or any more instance, I will be too happy and I will see that the persons concerned are punished. ಇಂಥ ವಿಚಾರ ಯಾವುದೇ ನನ್ನ ಗಮನಕ್ಕೆ ಬಂದರೂ ನಾನು ಅದರ ಬಗ್ಗೆ ಉದಾಸೀನ ಮಾಡುವುದಾಗಲೀ, ಯಾರನ್ನಾದರೂ ರಕ್ಷಣೆ ಮಾಡುವುದಾಗಲೀ ಮಾಡುವುದಿಲ್ಲ. ಹಿಂದೆಯೂ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ. ತಮಗೆ ವಿಚಾರಗಳು ಸರಿಯಾಗಿ ಗೊತ್ತಿದ್ದರೆ ನನಗೆ ತಿಳಿಸಿ, ತಪ್ಪಿತಸ್ಥರಿಗೆ ಶಿಕ್ಷೆಗೆ ಗುರಿಪಡಿಸೋಣ. ಆ ಮೇಲೆ ಸಿ.ಒ.ಡಿ. ವಿಚಾರವಾಗಿ ಮಾನ್ಯ ಗಟ್ಟಿ ಚಂದ್ರಶೇಖರ್‌ರವರು ಹೇಳಿದರು. ಸಿ.ಒ.ಡಿ.ಯಲ್ಲಿ ಒಟ್ಟು ೭೫ ಜನ ಪೋಲೀಸ್ ಆಫೀಸರ್ಸ್ ಇದ್ದಾರೆ. ಅದರಲ್ಲಿ ೨೮ ಜನ ಲಿಂಗಾಯಿತರು ಇದ್ದಾರೆ, ಈಗ ಸಿ.ಓ.ಡಿ.ಗೆ ಹೆಚ್ಚು ಹೆಚ್ಚು ಕೇಸುಗಳು ರೆಫರ್ ಆಗುತ್ತಿವೆ. ಏತಕ್ಕೆಂದರೆ ತಾವು ಕೆಲವು ಸಾರಿ ಬರೆಯುತ್ತೀರಿ ಯಾವುದಾದರೂ ಒಂದು ಮರ್ಡರ್ ಕೇಸ್‌ಗಳನ್ನು ಸಿ.ಒ.ಡಿ.ಗೆ ರೆಫರ್ ಮಾಡಿ ಎಂದು ಬರೆಯುತ್ತೀರಿ. ರೆಗ್ಯುಲರ್ ಸಬ್-ಇನ್‌ಸ್ಪೆಕ್ಟರ್ ಈ ಕೇಸುಗಳನ್ನು ಸರಿಯಾಗಿ ಇನ್‌ವೆಸ್ಟಿಗೇಷನ್ ಮಾಡುವುದಿಲ್ಲ, ಇಂಪಾರ್ಷಿಯಲ್ ಆಗಿ ಮಾಡುವುದಿಲ್ಲ. ಸಿ.ಒ.ಡಿ.ಗೆ ರೆಫರ್ ಮಾಡಿ ಎಂಬುದಾಗಿ ಹೇಳುತ್ತೀರಿ. ಹಾಗೆಂದಮೇಲೆ ಸಾಮಾನ್ಯವಾಗಿ ನಿಮ್ಮ ಭಾವನೆ ಏನು ಹೇಳಬಹುದು ; ಅಂದರೆ ಸಿ.ಒ.ಡಿ.ಯಲ್ಲಿ ನಂಬಿಕೆ ಜಾಸ್ತಿಯಾಗಿದೆ. ಅವರು ಇಂಪಾರ್ಷಿಯಲ್ ಆಗಿ ಕೆಲಸ ಮಾಡುತ್ತಾರೆಂದು, ಅಲ್ಲಿ ನಿಮ್ಮವರೇ ಹೆಚ್ಚಿಗೆ ಇರುವುದರಿಂದ ನಿಮ್ಮ ಜನಾಂಗದವರು ಇಂಪಾರ್ಷಿಯಲ್ ಆಗಿ ಕೆಲಸ ಮಾಡುತ್ತಾರೆಂದು ನಂಬಿಕೆ ಇದೆ ಎಂಬುದನ್ನು ತಾವು ತಿಳಿದುಕೊಳ್ಳಬಹುದು.

ಇನ್ನೊಂದು ವಿಚಾರವೇನೆಂದರೆ ಅಲ್ಲಿ ಇರುವವರನ್ನೆಲ್ಲಾ ಅಲ್ಲೇ ಪರ್ಮನೆಂಟ್ ಆಗಿ ಇಡುವುದಿಲ್ಲ. ಪರ್ಮನೆಂಟ್ ಆಗಿ ಇಡಬೇಡಿ ಎಂಬುದಾಗಿ ಐ.ಜಿ.ಪಿ.ಯವರ ಜೊತೆಯಲ್ಲಿ ಮಾತನಾಡಿದ್ದೇನೆ.

ಶ್ರೀ ಗಟ್ಟಿ ಚಂದ್ರಶೇಖರ್—ತಾವು ಬಹಳ ಚೆನ್ನಾಗಿ ಹೇಳಿದಿರಿ ; ಅತ್ತೆಗೆ ಹಸೆಕಲ್ಲು, ಸೊಸೆಗೆ ಬೀಸೋಕಲ್ಲು ಎಂಬ ಗಾದೆಯಂತೆ ಹೇಳಿ ನಮ್ಮನ್ನು ಮಾತನಾಡದ ಹಾಗೆ ಮಾಡಿಬಿಟ್ಟಿರಿ.

(ನಗು)

ಶ್ರೀ ಡಿ. ದೇವರಾಜ ಅರಸ್—ತಾವು ಅರ್ಥಮಾಡಿಕೊಳ್ಳದೆ ಮಾತನಾಡಬೇಡಿ. ದೊಡ್ಡ ವಿಚಾರ ಏನೂ ಇಲ್ಲ. ಕೆಲವು ಸಂದರ್ಭದಲ್ಲಿ ಸಿ.ಒ.ಡಿ.ಗೆ ಇಲಾಖೆಯ ಮುಖ್ಯಸ್ಥ ಅಂದರೆ ಐ.ಜಿ.ಪಿ. ಯಾರು ಇರುತ್ತಾರೆ, he has to take the men to his confidence which you all know. ಹಿಂದೆ ಎಲ್ಲರೂ ಮುಸ್ಲಿಂನವರೇ ಇದ್ದಾರೆ ಎಂಬುದಾಗಿ ಯಾರೋ ಹೇಳಿದರು. ಅವರನ್ನೆಲ್ಲಾ ಬದಲಾವಣೆ ಮಾಡಿದ್ದಾಯಿತು, ಸಿ.ಒ.ಡಿ.ಯಲ್ಲಿ ಏನೂ ಸಿಕ್ಕುವುದಿಲ್ಲ. ಹಾಕಬೇಡಿ ಎಂಬುದಾಗಿ ಹೇಳುತ್ತೀರಾ ಮತ್ತೆ ಇದರಲ್ಲಿ ೨೦ ಜನ ಬ್ರಾಹ್ಮಣರು ಕೂಡ ಇದ್ದಾರೆ. ಇದು ವಿಚಾರ.

ಇನ್ನು ಪಿ.ಎಸ್.ಸಿ ಬಗ್ಗೆ ಅಲ್ಲಿ ಲಂಚ ಬಹಳವಾಗಿ ಇದೆ ಎಂಬುದಾಗಿ ಆಪಾದನೆ ಮಾಡಿ ಮಾತನಾಡಿದ್ದಾರೆ. ಇದರ ಬಗ್ಗೆ ರಾಜ್ಯಾಂಗದಲ್ಲಿ ಒಂದು ಪ್ರಾವಿಜನ್ ಕೂಡ ಇವೆ. ಪಬ್ಲಿಕ್ ಸರ್ವಿಸ್ ಕಮೀಷನ್, ಬಗ್ಗೆ You can move for impeachment. Legislature is the forum so far as Public Service Commission is concerned. Of course, in respect of High Court Judges we cannot do it. The Parliament is the authority. This is unfair. I cannot accept that proposition. I know there are best of men. There may be one or two black-sheeps. ಎಲ್ಲರಿಗೂ ಒಂದೇ ಬ್ರಷ್ ತೆಗೆದುಕೊಂಡು ಟಾರನ್ನು ಬಳಿದ ಹಾಗೆ ಅವರ ಮುಖದ ಮೇಲೆ ಬಳಿಯುವುದು ಧರ್ಮ ಅಲ್ಲ. ಮತ್ತೆ ಅಂತಹ ನಿರ್ದಿಷ್ಟ ವಿಷಯಗಳಿದ್ದರೆ ಹೇಳಿ ಇಲ್ಲಿಗೆ ತಂದು ಮಾತನಾಡಬಹುದು. ಅವುಗಳನ್ನು ಇನ್‌ವೆಸ್ಟಿಗೇಟ್ ಮಾಡಿಸುವುದಕ್ಕೆ ತಯಾರಾಗಿದ್ದೇನೆ. ಪ್ರತಿಯೊಂದರ ಮೇಲೂ ಅನುಮಾನಪಟ್ಟು ಈ ರೀತಿ ಹೇಳುವುದು that is not fair to anybody.

ಶ್ರೀ ಎಸ್. ಆರ್. ಬೊಮ್ಮಾಯಿ—ಒಳ್ಳೆಯವರು ಅಲ್ಲಿ ಇದ್ದಾರೆಂದು ತಾವು ಹೇಳುತ್ತಿದ್ದೀರಿ. ಲಂಚ ಕೊಡುವವರು ಧೈರ್ಯವಾಗಿ ಮುಂದೆ ಬಂದು ಸಾಕ್ಷಿ ಹೇಳುವುದಿಲ್ಲ, That is our society. We cannot help.

ಶ್ರೀ ಡಿ. ದೇವರಾಜ ಅರಸ್—ಹಾಗೆಂದಾಕ್ಷಣ ಅಲ್ಲಿರುವವರೆಲ್ಲಾ ಲಂಚಕೋರರು ಎಂಬುದಾಗಿ ಹೀಯಾಳಿಸುವುದು ಧರ್ಮವೇ ? ಎಲ್ಲಾ ಲಂಚಕೋರರು ಎಂಬುದಾಗಿ ಸುಲಭವಾಗಿ ತಾವು ಮಾತನಾಡುತ್ತಿದ್ದೀರಲ್ಲಾ, ದಯಮಾಡಿ ಸ್ವಲ್ಪ ಯೋಚನೆ ಮಾಡಿ ನೋಡಿ. How do you expect them to work effectively ? Is it fair on our part to make those allegations ? ಮತ್ತೆ ಯಾವುದಾದರೂ ನಿರ್ದಿಷ್ಟವಾದ ಇನ್ಸಿಡೆಂಟ್‌ಗಳು ಇದ್ದರೆ, ಇಂತಹ ವಿಚಾರದಲ್ಲಿ ಸರ್ಕಾರ ಇನ್ವಾಲ್ ಆಗಿದೆ ಎಂಬುದಾಗಿ ನೇರವಾಗಿ ಇಲ್ಲಿಗೆ ಬಂದು ಹೇಳಿ. ಅದನ್ನು ಖಂಡಿತ ವಿಚಾರಿಸುತ್ತೇನೆ. ಸುಮ್ಮನೆ, ಲೋಕಾಭಿರಾಮವಾಗಿ ಮಾತನಾಡಿದ ಹಾಗೆ ಎಲ್ಲರೂ ಲಂಚಕೋರರು ಎಂಬುದಾಗಿ ಹೇಳುವುದು ಸರಿಯಲ್ಲ. ಲಂಚದ ವಿಚಾರದಲ್ಲಿ ಶ್ರೀಮಾನ್ ಮಳ್ಳೂರು ಆನಂದರಾವ್ ರವರು ಬಹಳ ಕಟುವಾಗಿ ಮಾತನಾಡಿದ್ದಾರೆ. ಅವರು ಹೇಳಿದ್ದು ಎರಡು ವಿಚಾರ, ಒಂದು ಲಂಚ, ಮತ್ತೊಂದು ಜಾತೀಯತೆ, (ಕರಪ್ಷನ್, ಕ್ಯಾಸ್ಟಿಜಂ). ಈ ಲಂಚ ಎನ್ನುವುದು ರಾಮಾಯಣ, ಮಹಾಭಾರತದ ಕಾಲದಲ್ಲೂ ಈ ವಿಚಾರ ಬಂದಿದೆ. ಈಗ ಇದೇನು ಹೊಸದಾಗಿ ಬಂದುದಲ್ಲ. ಅಲ್ಪಸ್ವಲ್ಪ ಕರಪ್ಷನ್ ಇರಬಹುದು. ಇಲ್ಲ ಎಂಬುದಾಗಿ ಹೇಳುವುದಿಲ್ಲ. ಆದರೆ ನೀವು ಏನನ್ನು ಹೇಳುವುದಕ್ಕೆ ಹೊರಟಿದ್ದೀರಿ ಎಂದರೆ, ನಾವು ಅಧಿಕಾರಕ್ಕೆ ಬಂದಮೇಲೆ ಇದು ಬಹಳ ಜಾಸ್ತಿಯಾಗಿದೆ ಎಂಬುದಾಗಿ ಏನು ಹೇಳುತ್ತೀರಿ. ಆದರೆ ನಿಮ್ಮ ಪಾರ್ಟಿಯವರು ಅಧಿಕಾರಕ್ಕೆ ಬಂದಮೇಲೆ ಎಷ್ಟು ಜಾಸ್ತಿಯಾಗಿದೆ ಎಂಬುದನ್ನು ನಿಮ್ಮ ಜಾತಿಯವರೇ, ನಿಮ್ಮ ಪಕ್ಷದವರೇ ಹೇಳುತ್ತಿದ್ದಾರೆ. ಬೇರೆಯವರು ಯಾರೂ ಹೇಳುತ್ತಿಲ್ಲ. ಇವರ ಮೇಲೆ ಅವರು ಹೇಳುತ್ತಿದ್ದಾರೆ. ಅವರ ಮೇಲೆ ಇವರು ಹೇಳುತ್ತಿಲ್ಲವೇ ಸ್ವಾಮಿ ; ಬಹಳ ದಿವಸ ಬೇಕಾಗಿಲ್ಲ.

ಶ್ರೀ ಜೆ.ಎಚ್. ಪಟೇಲ್. —ನಮ್ಮ ಪಾರ್ಟಿಯವರು ಆ ರೀತಿ ಹೇಳಿರಬಹುದು. ಆದರೆ ಯಾವ ಕಮೀಷನ್‌ನವರು ಆ ರೀತಿ ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ಕಮೀಷನ್‌ನವರು ಹೇಳಿಲ್ಲವೇ ? ನನ್ನ ಕೈಗೆ ಕೊಡಲಿ ತೋರಿಸುತ್ತೇನೆ. ನಾವಾದರೂ ೩೦ ವರ್ಷ ರಾಜ್ಯಭಾರ ಮಾಡಿದ್ದೇವೆ. ನೀವು ೨ ವರ್ಷ ರಾಜ್ಯ ಭಾರ ಮಾಡುವುದರಲ್ಲಿ.........

ಶ್ರೀ ಜಿ. ಮಾದೇಗೌಡ. —೩೦ ವರ್ಷದಿಂದ ಎಲ್ಲಿ ರಾಜ್ಯಭಾರ ಮಾಡಿದ್ದೀರಿ ? ೬ ವರ್ಷದಿಂದ ರಾಜ್ಯಭಾರ ಮಾಡಿದ್ದೀರಿ.

ಶ್ರೀ ಡಿ. ದೇವರಾಜ ಅರಸ್. —೩೦ ವರ್ಷದಿಂದ ನಮ್ಮ ಪಾರ್ಟಿ ರಾಜ್ಯಭಾರ ಮಾಡಿದೆ. ನಿಮ್ಮದು ಒಂದೇ ಒಂದು ಪಾರ್ಟಿ, ಅದು ಯಾವುದೆಂದರೆ ಮಾದಯ್ಯ ಪಾರ್ಟಿ.

ಶ್ರಿ ಎಸ್. ಆರ್. ಬೊಮ್ಮಾಯಿ. — ಮುಖ್ಯಮಂತ್ರಿಗಳು ಜನತಾ ಪಾರ್ಟಿ ಅಧಿಕಾರಕ್ಕೆ ಬಂದ ಮೇಲೆ ಕರಪ್ಷನ್ ಜಾಸ್ತಿಯಾಗಿದೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಇದರ ಬಗ್ಗೆ ತಮ್ಮಲ್ಲಿ ಆಧಾರ ಏನಾದರೂ ಇದ್ದರೆ ದಯಮಾಡಿ ಕೊಡಿ ಸ್ವಾಮಿ, ರಾಜೀನಾಮೆ ಕೊಡಿ ಎಂಬುದಾಗಿ ನಾವೇ ಕೇಳುತ್ತೇವೆ. ಪತ್ರಿಕೆಯಲ್ಲಿ ಯಾರೋ ಹೇಳಿದ್ದನ್ನು ಬರೆಯುತ್ತಾರೆ. ತಮ್ಮ ಹತ್ತಿರ ಆಧಾರವೇನಾದರೂ ಇದ್ದರೆ ಕೊಡಿ.

ಶ್ರೀ ಡಿ. ದೇವರಾಜ ಅರಸ್. —ನಾನು ಹೇಳುವುದಕ್ಕೆ ಹೋಗಿಲ್ಲ. ನಿಮ್ಮವರೇ ಹೇಳುತ್ತಿದ್ದಾರೆಂದು ಹೇಳುತ್ತಿದ್ದೇನೇ ಕೇಳುವುದು ಬಿಡುವುದು ನಿಮಗೆ ಬಿಟ್ಟಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ. —ಹಿಂದೆ ನಿಮ್ಮ ಸರ್ಕಾರ ಇದ್ದಾಗ ಇಂದಿರಾಗಾಂಧಿಯವರ ಮೇಲೆ ದೆಹಲಿಯಲ್ಲಿ ನಿಮ್ಮ ಪಕ್ಷದವರೇ ಹೇಳಲಿಲ್ಲವೇ ? ಅದು ಬೇರೆ, ಇದು ಬೇರೆ ಎಂಬುದಾಗಿ ಹೇಳುತ್ತಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್. —ಇದರಲ್ಲಿ ಕರಪ್ಷನ್ ಚಾರ್ಜಸ್ ?

ಶ್ರೀ ಎಸ್. ಆರ್. ಬೊಮ್ಮಾಯಿ .—ಮಾಡಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್. —ಮಾಡಿದ್ದಿರೋ.

ಶ್ರೀ ಎಸ್. ಆರ್. ಬೊಮ್ಮಾಯಿ .—ಚಾರ್ಜಸ್ ಮಾಡಿದ್ದರಲ್ಲಿ ಲಂಚಕ್ಕೆ ನಿಮ್ಮ ಶಬ್ದಕೋಶ ಪುಸ್ತಕದಲ್ಲಿ ಅರ್ಥ ಬೇರೆ ಇದ್ದರೆ. ಅದಕ್ಕೆ ನಾವು ಏನು ಮಾಡುವುದು ?

ಶ್ರೀ ಡಿ. ದೇವರಾಜ ಅರಸ್ .—ಇದನ್ನು ಮಾಡುವುದಕ್ಕೆ ೨ ವರ್ಷ ತೆಗೆದುಕೊಂಡಿದ್ದೀರಿ. ತಾವು ಏನು ಮಾಡುತ್ತಿದ್ದೀರೆಂದರೆ. ಬೆಟ್ಟ ಅಗೆದಿದ್ದೀರಿ ಅಲ್ಲಿ ಜೀವಂತ ಇಲಿ ಸಿಕ್ಕದೆ, ಸತ್ತ ಸಣ್ಣ ಇಲಿಯ ಮೇಲೆ ಪ್ರಯೋಗ ಮಾಡುವುದಕ್ಕೆ'ಹೊರಟಿದ್ದೀರಿ ಅಷ್ಟೆ. ಸ್ವಲ್ಪ ಕಾದು ನೋಡಿ. ನೀವು ಹೇಳುವ ಕಾಲವನ್ನು ನಾನು ನೋಡುತ್ತೇನೆ. ಸ್ವಲ್ಪ ನಿಧಾನ ಮಾಡಿ ಸ್ವಾಮಿ ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್ .—ತಮಗೆ ಸಿಟ್ಟೇ ಬರುವುದಿಲ್ಲ. ಈಗ ತಮಗೆ ಬಂದಿರುವ ಸಿಟ್ಟನ್ನು ನೋಡಿದರೆ ಆಶ್ಚರ್ಯವಾಗುತ್ತಿದೆ ಗ್ರೋವರ್ ಆಯೋಗದ ಸುದ್ದಿಯನ್ನು ಹೇಳಿದ ತಕ್ಷಣ ತಮಗೆ ಸಿಟ್ಟು ಏಕೆ ?

ಶ್ರೀ ಡಿ. ದೇವರಾಜ ಅರಸ್ .—ಗ್ರೋವರ್ ಆಯೋಗದ ಮೇಲೆ ಮಾತನಾಡುವುದಕ್ಕೆ ನನಗೆ ಇಷ್ಟವಿಲ್ಲ. ಅದನ್ನು ಅಲ್ಲಿಗೇ ಬಿಡುತ್ತೇನೆ. ನೀವು ಏನೇನು ಮಾಡಿದ್ದೀರೆಂಬುದು ನಾಳೆ ಬರುತ್ತದೆ. ಅಲ್ಲಿಯವರೆಗೆ ಸ್ವಲ್ಪ ಸಮಾಧಾನದಿಂದ ಇರಿ. ನನ್ನ ಬಗ್ಗೆ ತಾವು ಏನೇನು ಮಾಡಿದ್ದೀರಿ ಅದನ್ನೆಲ್ಲಾ ಅವಕಾಶ ಬಂದಾಗ ನಿಮ್ಮ ಮುಖಕ್ಕೇ ಹಿಡಿಯುತ್ತೇನೆ. ಅಷ್ಟರವರೆಗೆ ಸ್ವಲ್ಪ ಕಾಯಿರಿ ಎಂದು ಹೇಳುತ್ತಿದ್ದೇನೆ. ೬೬ ಚಾರ್ಜ್‌ಸ್‌ಗಳಲ್ಲಿ ಕರಪ್ಷನ್ ವಗೈರೆ, ವಗೈರೆ ಎಂಬುದಾಗಿ ತಾವು ಏನು ಮಾಡಿದ್ದೀರಿ, ಅದರಲ್ಲಿ ಒಂದನ್ನಾದರೂ ಕರಪ್ಷನ್ ಇದೆ ಎಂಬುದಾಗಿ ಚಾರ್ಜ್ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ.

ಆದನ್ನು ಪ್ರೂವ್ ಮಾಡಿಲ್ಲಾ ಮಾಡುವುದಕ್ಕೆ ಸಾಧ್ಯವೂ ಆಗಿಲ್ಲಾ. ಅದಕ್ಕೂ ಕೂಡ ಒಂದು ಸಮಯ ಬರುತ್ತದೆ. ನೀವು ಇದಕ್ಕಾಗಿ ಎರಡು ವರ್ಷ ತೆಗೆದುಕೊಂಡಿದ್ದೀರಿ. ನನಗೆ ಒಂದು ತಿಂಗಳು ಅವಕಾಶ ಕೊಡಿ, ಅಲ್ಲಿಯವರೆಗೆ ಸ್ವಲ್ಪ ತಡೆಯಿರಿ ಸ್ವಾಮಿ, ಅಷ್ಟೇ ನಾನು ಕೇಳುವುದು. ಕೇಂದ್ರ ಸರ್ಕಾರದ ಗೃಹ ಮಂತ್ರಿಗಳೇ ಹೇಳಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಆಕ್ಟ್ ಮಾಡುವುದರಲ್ಲಿ ನೆಗ್ಲೆಕ್ಟ್ ಮಾಡುವುದಿಲ್ಲ ಎನ್ನುವ ನಂಬಿಕೆ ನನಗೆ ಇದೆ ಎಂದು. ಅದಕ್ಕೆ ನಾನು ಹೇಳುತ್ತೇನೆ ಏನೆಂದರೆ I assure the Hon. Minister and the hon. Member sitting in front of me that I am not going to neglect it. I will act upon it ; till then I do not want to talk about it

ಶ್ರೀ ಎಸ್.ಆರ್. ಬೊಮ್ಮಾಯಿ .—ತಮ್ಮ ಒಂದು ಪಾರ್ಟಿ ಉಳಿಯುವುದುಕೋಸ್ಕರ ಬೋಲ್ಡ್ ನೆಸ್ ಮಾಡಿದ್ದೀರಿ. ಅದೇ ರೀತಿಯಾಗಿ ಇದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. I have got faith that you will a t fairly and democratically.

ಶ್ರೀ ಡಿ. ದೇವರಾಜ ಅರಸ್ :—ನಾನು ಮೊದಲೇ ಹೇಳಿದನಲ್ಲಾ. ಮತ್ತು ಕೇಂದ್ರ ಸರ್ಕಾರದ ಗೃಹಮಂತ್ರಿಗಳೇ ಆ ರೀತಿ ಹೇಳಿರುವಾಗ ತಾವು ಸ್ವಲ್ಪ ಅಲ್ಲಿಯವರೆಗೆ ತಡೆಯಿರಿ. ನಾನೇನು ಅದನ್ನು ಅಲಕ್ಷಿಸಿಲ್ಲಾ. ನೀವು ಎರಡು ವರ್ಷ ಕಾಲಾವಕಾಶ ತೆಗೆದುಕೊಂಡಿರಿ. ನನಗೆ ಒಂದು ತಿಂಗಳಾದರೂ ಕೂಡ ಕಾಲಾವಕಾಶ ಕೊಡುವುದಿಲ್ಲವೇ ?

ಶ್ರಿ ಎಸ್.ಆರ್. ಬೊಮ್ಮಾಯಿ .—ಅದನ್ನು ಪ್ರೆಸ್‌ನವರು ಕೇಳಿದಾಗ ಹೇಳಿದ್ದು.

ಶ್ರೀ ಡಿ. ದೇವರಾಜ ಅರಸ್.—ಪ್ರೆಸ್‌ನವರೇ ಹೇಳಲಿ. ನೀವು ಇದಕ್ಕೆ ಎರಡು ವರ್ಷದಿಂದಲೂ ಕೂಡ ಸುಮ್ಮನೆ ಕೂತಿದ್ದರಲ್ಲಾ. ನನಗೆ ಒಂದು ತಿಂಗಳು ಕಾಲಾವಕಾಶ ಕೊಡಿ ಎಂದು ಕೇಳುತ್ತೇನೆ. ನೀವು ಯಾವ ಒಂದು ಸ್ಟ್ಯಾಂಡರ್ಡ್‌ನಲ್ಲಿ ಸೆಟ್ ಮಾಡುವುದಕ್ಕೆ ಹೊರಟಿದ್ದೀರೋ ಅದೇ ಸ್ಟ್ಯಾಂಡರ್ಡ್ ಅನ್ನು ನಮ್ಮ ಮುಂದೆ ಇಡುತ್ತಿದ್ದೀರಿ. ಇದರಲ್ಲಿ ನೀವು ಎಷ್ಟು ಜನ ಉಳಿಯುತ್ತೀರೋ ಅನ್ನುವುದನ್ನು ನಾನು ನೋಡುತ್ತೇನೆ. ಇನ್ನು ಈ ಬಗ್ಗೆ ಇಷ್ಟಕ್ಕೇ ಬಿಟ್ಟು ಬಿಡಿ. ಮುಂದಕ್ಕೆ ಹೋಗುವುದು ಬೇಡ ತಮಗೆ ಹೇಳಬೇಕಾದರೆ ಈ ಗ್ರೋವರ್ ಕಮೀಷನ್ನಿನ ವರದಿಗೆ ಹೆದರುವವನು ನಾನಲ್ಲಾ ಮತ್ತು ಹೆದರಿ ಕೊಳ್ಳುವುದಕ್ಕೆ ಕಾರಣವೂ ಇಲ್ಲ. ಕೇಂದ್ರ ಸರ್ಕಾರದಲ್ಲಿ ಯಾರೇ ಇರಲಿ ಅವರು ತಮ್ಮ ಜವಾಬ್ದಾರಿಯಿಂದ ಈ ಒಂದು ಕಮೀಷನ್ ಏನು ಮಾಡಿದರು ಅದನ್ನು ನಾನು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲಾ. ಈಗ ಅದನ್ನು ನಮ್ಮ ಮುಂದೆ ಇಡಲಾಗಿದೆ. ನನ್ನನ್ನು ರಾಜೀನಾಮೆ ಕೊಡಿ ಎಂದು ಕೇಳುವುದಾದರೆ ಮಾನ್ಯ ಆನಂದರಾಯರಿಗೆ ನನ್ನ ಛ್ಯಾನ್ಸ್ ಸಿಗುವುದಾದರೆ ನಾನು ಯೋಚನೆ ಮಾಡುತ್ತೇನೇ ನೀವು ಏನು ಮಾಡಿದರೂ ಸಹ ಸಿಗುವುದಿಲ್ಲಾ. ನಾನು ರಾಜೀನಾಮೆ ಕೊಟ್ಟರೆ ನಮ್ಮ ಪಾರ್ಟಿಯಲ್ಲೇ ೧೫೪—೧೫೫ ಜನ ಇದ್ದಾರೆ ಅವರಿಗೆ ಯಾರಾದರೂ ಆಗುತ್ತದೆ. ಅದು ನಿಮ್ಮ ಕೈಯಲ್ಲಿ ಆಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾಯರು. —ನಿಮ್ಮ ಜಾಗವನ್ನು ಖಾಲಿ ಮಾಡಿ ಎಂದು ಹೇಳಿದನೇ ವಿನಾ ನಮಗೆ ಕೊಡಿ ಎಂದು ನಾವು ಕೇಳುವುದಿಲ್ಲಾ.

ಶ್ರೀ ಡಿ ದೇವರಾಜ ಅರಸ್. —ಮಾನ್ಯ ಆನಂದರಾಯರು ಭೇದೋಪಾಯ ಮಾಡುವುದರಲ್ಲಿ ಬಹಳ ಚತುರರು. ಅವರು ಈ ಚತುರೋಪಾದಿಯಲ್ಲಿ ಬಹಳ ನಿಪುಣರಾಗಿದ್ದಾರೆ. ಆದರೆ ಅವರ ಬೇಳೆ ಇಲ್ಲಿ ಬೇಯುವುದಿಲ್ಲ ಅನ್ನುವುದನ್ನು ತಿಳಿದುಕೊಳ್ಳಬೇಕು. ಅವರು ಕಲಿಶಿರತಕ್ಕಂಥಾ ಯಾವ ವಿಧ್ಯೆಯನ್ನೂ ಕೂಡ ನಡೆಸುವುದಕ್ಕೆ ಇಲ್ಲಿ ಅವಕಾಶ ಕೊಡುವುದಿಲ್ಲಾ. ನಾನು ಈ ಮಾತನ್ನು ಶ್ರೀ ಆನಂದರಾಯರ ಜಾತಿಗೆ ಹೇಳುತ್ತಿದ್ದೇನೆ.

ಶ್ರೀ ಜೆ.ಎಚ್. ಪಟೇಲ್ .—ಅವರ ಜಾತಿ ಎಲ್ಲಾ ನಿಮಗೆ ಹೇಗೆ ಗೊತ್ತು ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್ .—ಅವರು ಮಾತನಾಡುವುದರಲ್ಲೇ ಹೇಳುತ್ತೇನೆ.

ಶ್ರೀ ಮಳ್ಳೂರು ಅನಂದರಾವ್ .—ಸ್ವಾಮಿ, ಶ್ರಿಮತಿ ಇಂದಿರಾ ಗಾಂಧಿಯವರು ನಮ್ಮ ಜಾತಿಯವರು.

ಶ್ರೀ ಡಿ. ದೇವರಾಜ ಅರಸ್ .—ಈಗಲಾದರೂ ತಾವು ಒಪ್ಪಿಕೊಂಡರಲ್ಲಾ. ಸ್ವಾಮಿ ನಾನು, ಒಂದು ವಿಚಾರವನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಅವರ ದೃಷ್ಟಿಯಲ್ಲಿ ೧೯೭೨ನೇ ಇಸವಿಯಿಂದಲೂ ಇಲ್ಲಿ ಜಾತಿ ಭಾವನೆ ಜಾಸ್ತಿಯಾಗಿದೆ, ಲಂಚ ಜಾಸ್ತಿಯಾಗಿದೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಇದನ್ನು ಹೇಳುವವರು ಯಾರು ಎಂದರೆ ಅವರ ಜಾತಿ ಜನ, ಅವರ ಪಾರ್ಟಿ ಜನ ಏತಕ್ಕೆ ಅವರು ಈ ಮಾತು ಹೇಳುತ್ತಿದ್ದಾರೆ ಎಂದರೆ ಈವಾಗ ಷೆಡ್ಯೂಲ್ ಕ್ಯಾಸ್ಟ್ ಜನ ಜಾತಿ ಬಂದರು, ಬ್ಯಾಕ್‌ವರ್ಡ್ ಕ್ಲಾಸ್ ಜನ ಜಾಸ್ತಿ ಬಂದರು ಮತ್ತು ಮೈನಾರಿಟಿ ಜನ ಜಾಸ್ತಿ ಬಂದರು, ಅದಕೋಸ್ಕರವಾಗಿ ಈವಾಗ ಅವರಿಗೆ ಜಾತಿ ಜನ ಅಂತ ಬಂದಿದೆ. ಇದಕ್ಕೆ ಮುಂಚೆ ಜಾತಿ ಇರಲಿಲ್ಲವೇ ಜಾತ್ಯಾತೀತ ಎಂದು ಏನು ಹೇಳುತ್ತೇವೋ ಅದನ್ನು ಅವರು ಮುಂಚೆ ನೋಡಿರಲಿಲ್ಲವೇ ? ಈ ಡೆಮಾಕ್ರಸಿಯಲ್ಲಿ ಈ ಅಧಿಕಾರ ಅನ್ನುವುದು ಎಲ್ಲರಲ್ಲೂ ಸಹ ಸಮಾನವಾಗಿ ಇರಬೇಕು. ಅದು ಮುಖ್ಯ. ನಿಮ್ಮ ಡೆಮಾಕ್ರಸಿಯಲ್ಲಿ ಇದಕ್ಕೆ ಏನಾದರೂ ಮೀನಿಂಗ್ ಇದೆಯೋ ? ಮೊದಲು ಹೇಗಿತ್ತು ಎಂದರೆ ಯುಗಯುಗಾಂತರಗಳಿಂದ ಈ ಒಂದು ಸಮಾಜವನ್ನು ಯಾರು ಒಂದು ಹತೋಟಿಯಲ್ಲಿಟ್ಟುಕೊಂಡು ಬಂದಿದ್ದರೋ ಅಂಥಾವರು ಈ ಮಾತನ್ನು ಹೇಳುತ್ತಾರೆ. ಏನು ಹೇಳುತ್ತಾರೆ ಎಂದರೆ ಮಾತೆತ್ತಿದರೆ ಲಂಚ ಅಂತ ಹೇಳುತ್ತಾರೆ. ಇದನ್ನು ಟಾರ್ ಬಳಿದುಕೊಂಡು ಬರುವ ರೀತಿ ಎಲ್ಲರಿಗೂ ಕೂಡ ಪ್ರಾಪಗಾಂಡ ಮಾಡಿಕೊಂಡು ಬಂದಿದ್ದಾರೆ. That is the one way which has been traditionally adopted by people who have vested interest at heart, who have kept power centres in their hands all these days. That is what is going on here also. Therefore, with all the sincerity at my command I say that it is not as if this disease of corruption has come all of a sudden or increased. May be; with this immense potential of development the percentage might have gone up a little more. But if you take the overall picture and the fast rate at which development activities are going on, it is not much, and this has been appreciated by even knowledgeable people from outside. ಯಾರಿಗೂ ಕೂಡ ಇದು ಗೊತ್ತಿಲ್ಲದೇ ಇರುವ ವಿಷಯವಲ್ಲ. ತಮಗೆ ಒಂದು ಗಾದೆ ಹೇಳಬೇಕಾದರೆ ವಿದ್ಯೆ ಇಲ್ಲದೇ ಹೊದರೂ ಕೂಡ ಗರ್ವ ಜಾಸ್ತಿಯಾಗಿದೆ ಅಂತ ಇದೆ. ಆ ರೀತಿಯಾಗಿ ಇವರು ಮಾಡಿಕೊಂಡು ಹೋಗುತ್ತಿದ್ದಾರೆ. ತಮಗೆ ಹೇಳಬೇಕಾದರೆ ಯಾರಿಗೆ ಅಡ್ಮಿನಿಸ್ಟ್ರೇಷನ್ ವಿಚಾರ ಗೊತ್ತಿದೆಯೋ, ಯಾರಿಗೆ ಡೆವಲಪ್‌ಮೆಂಟ್‌ಆಕ್ಟಿವಿಟೀಸ್ ಬಗ್ಗೆ ಗೊತ್ತಿದೆಯೋ ಅಂಥಾವರು ಎಷ್ಟೋ ರಾಜ್ಯಗಳವರು ನಮ್ಮಿಂದ ತರಿಸಿಕೊಳ್ಳುತ್ತಿದ್ದಾರೆ. ಅದನ್ನು ತಾವು ತಿಳಿದುಕೊಂಡು ಮಾತನಾಡಬೇಕು. ಅದು ಬಿಟ್ಟು ಮಾತೆತ್ತಿದರೆ ಈ ತರಹ ಮಾತನಾಡಿದರೆ ಮಾನಸಿಕವಾಗಿ ಬಹಳ ನೋವು ಬರುತ್ತದೆ. ತಮಗೂ ಗೊತ್ತು ಈವತ್ತಿನ ದಿವಸ ಸಣ್ಣ ಪುಟ್ಟ ಜನ ಮೇಲಕ್ಕೆ ಬಂದಿದ್ದಾರೆ, ಸಣ್ಣಪುಟ್ಟ ಜಾತಿಗಳವರು ಮೇಲಕ್ಕೆ ಬಂದಿದ್ದಾರೆ. ಅದಕ್ಕೆ ಈವಾಗೇನೂ ಅಡ್ಡಿ ಇಲ್ಲಾ. ಇದನ್ನು ತಡೆಯ ಬೇಕು ಅಂತ ನೀವು ಟಾರ್ ಬಳಿದುಕೊಂಡು ಹೋಗುವ ಹಾಗೆ ಈ ಗ್ರೋವರ್ ಕಮೀಷನ್ ಬಗ್ಗೆ ಪ್ರಾಪಗಾಂಡ ಮಾಡಿಕೊಂಡು ಹೋಗುವಂಥಾದ್ದು ಸರಿಯಲ್ಲ. ಈಗಾಗಲೇ ೨೫೦ ಕಮೀಷನ್ ಅನ್ನು ಮಾಡಿದ್ದಾರೆ. ಅದರಲ್ಲಿ ಇದೂ ಒಂದು ಅಡ್ಮಿನಿಸ್ಟ್ರೇಷನ್ನಿನ ಒಂದು ನಡವಳಿಕೆ ಬಗ್ಗೆ ನೀವು ಮಾಡುತ್ತಾ ಇರುವಂಥಾ ಕ್ರಮ ಇದಲ್ಲ. ನಿಮಗೆ ಡೆಮಾಕ್ರಸಿಯಲ್ಲಿ, ನಂಬಿಕೆ ಇದ್ದರೆ ಹಿಂದುಳಿದಂಥಾ ಜನರನ್ನು ಮೇಲಕ್ಕೆ ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಿಂದಿನಿಂದಲೂ ನಮ್ಮ ದೇಶದಲ್ಲಿ ಏನು ಒಂದು ಭಾವನೆ ಬಂದಿದೆ ಎಂದರೆ ಎಲ್ಲ ಉಪಯೋಗವು ನಮಗೆ ಬೇಕು ಅಂತ ಒಂದು ಭಾವನೆ ಬಂದಿದೆ. ನಮ್ಮ ಮಕ್ಕಳಿಗೇನೇ ಮೆಡಿಕಲ್‌ನಲ್ಲಿ ಸೀಟ್ ಸಿಗಬೇಕು, ನಮ್ಮ ಮಕ್ಕಳಿಗೇನೇ ಇಂಜಿನಿಯರಿಂಗ್‌ನಲ್ಲಿ ಸೀಟ್ ಸಿಗಬೇಕು, ನಮ್ಮ ಮಕ್ಕಳಿಗೇನೇ ಸಬ್ ಇನ್‌ಸ್ಪೆಕ್ಟರ್ ಪೋಸ್ಟ್ ಸಿಗಬೇಕು, ನಮ್ಮ ಮಕ್ಕಳಿಗೇನೇ ಗುಮಾಸ್ತಗಿರಿ ಕೆಲಸ ಸಿಗಬೇಕು ನಮ್ಮ ಮಕ್ಕಳೇನೇ ವಿದ್ಯಾವಂತರಾಗಬೇಕು, ನಮಗೆ ನಮ್ಮ ಸಂಬಂಧಿಯವರಿಗೇನೇ ಎಲ್ಲಾ ಅನುಕೂಲವೂ ಸಿಗಬೇಕು ಅನ್ನುವ ಭಾವನೆ ಹಿಂದಿನಿಂದಲೂ ಬಂದಿರುವುದರಿಂದ ಈ ರೀತಿ ಆಗಿದೆ. ಈವತ್ತು ಅದಕ್ಕೆ ಸಾಧ್ಯವಿಲ್ಲವಾಗಿದೆ. ಮತ್ತು ಆ ರೀತಿ ನಡೆಯುತ್ತಲೂ ಇಲ್ಲ. ನಮ್ಮ ಆನಂದರಾಯರಿಗೆ ಹೇಳಬೇಕಾದರೆ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಇಂಪ್ಲಿಮೆಂಟ್ ಮಾಡಬೇಕಾದರೆ ಬೇರೆ ರಾಜ್ಯದಲ್ಲಿ ಯಾವ ರೀತಿ ಆಯಿತು ಎನ್ನುವುದು ಗೊತ್ತಿದೆ. ಅದು ಇಂಪ್ಲಿಮೆಂಟ್ ಮಾಡುವುದಕ್ಕಾ

ಗದೇನೇ ಹಾಗೆಯೇ ಬಿದ್ದಿದೆ. ತಮಗೆ ಹೇಳಬೇಕಾದರೆ ಬಿಹಾರ್‌ನಲ್ಲಿ ಕರ್ಪೂರ್ ಠಾಕೂರ್‌ರವರು ಬ್ಯಾಕ್‌ವರ್ಡ್‌ಕ್ಲಾಸ್ ವರದಿಯನ್ನು ಇಂಪ್ಲಿಮೆಂಟ್ ಮಾಡಬೇಕು ಅಂತ ಮಾಡಿದ್ದಕ್ಕೆ ಅದರ ಪರಿಣಾಮ ಏನಾಯಿತು ಅನ್ನುವುದನ್ನು ತಮಗೆ ಗೊತ್ತಿದೆ. ಅದನ್ನು ಬೇರೆಯವರು ಸಹಿಸಲಿಲ್ಲಾ ಆದರಿಂದ ಅವರನ್ನು ತೆಗೆದರು. ಆವರು ಲಂಚಕೋರರು ಅಂತಲ್ಲಾ ನನಗೆ ಅವರು ಚೆನ್ನಾಗಿ ಗೊತ್ತು. ಅವರನ್ನು ಏತಕ್ಕೆ ತೆಗೆದರು ಎಂದರೆ ಇದು ಒಂದೇ ಕಾರಣದಿಂದ ಅವರನ್ನು ತೆಗೆದದ್ದು ಎಂದು ಹೇಳುತ್ತೇನೆ. ಸಾಮಾನ್ಯವಾಗಿ ನಾವು ಒಂದು ಕೆಲಸ ಮಾಡುವಾಗ ಈ ರೀತಿ ಬರುವುದು ಸಹಜ.

೬.00 ಪಿ.ಎಂ

ಮೈನಾರಿಟೀಸ್, ಬ್ಯಾಕ್‌ವರ್ಡ್ ಕ್ಲಾಸಸ್ ಜನ ಏನು ಇದ್ದಾರೆ ಮತ್ತು ಹರಿಜನಗಿರಿಜನರು ಏನು ಇದ್ದಾರೆ ಅವರು ಎಲ್ಲಾ ಕಡೆಯಲ್ಲಿಯೂ ಇದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಜನಗಳಲ್ಲಿ ಪೊಲಿಟಿಕಲ್ ತಿಳುವಳಿಕೆ ಹೆಚ್ಚಾಗಿ ಬಂದಿದೆ. ಇದಕ್ಕೆ ನಮಗೆ ಬೆಂಬಲ ದೊರೆಯುತ್ತಿದೆ. ನಮಗೆ ಬಡವರ ಬೆಂಬಲ ಇರುವುದರಿಂದ ನಿಮ್ಮ ಪ್ರಯತ್ನಗಳು ಒಂದೂ ನಡೆಯುವುದಿಲ್ಲ. ನೀವು ನಮ್ಮಮೇಲೆ ಇಲ್ಲಸಲ್ಲದ ಆರೋಪಣೆ ಮಾಡಿದರೆ ಇದರಿಂದ ಯಾವಪರಿಣಾಮ ಆಗುತ್ತದೆಂದು ನೀವು ತಿಳಿದುಕೊಂಡಿದ್ದೀರೋ ಅದು ಆರೀತಿಯಲ್ಲಿ ಆಗುವುದಿಲ್ಲ. ದಯಮಾಡಿ ಇನ್ನು ಮೇಲಾದರೂ ಇಂಥ ಆಟಿಟ್ಯೂಡ್ ಬೇಡ ಎಂದು ನಾನುಹೇಳುತ್ತೇನೆ.

ಶ್ರೀಎಸ್ ಆರ್. ಬೊಮ್ಮಾಯಿ.– ೧೯೭೭ರಿಂದ ಈಚೆಗೆ ಮುಖ್ಯಮಂತ್ರಿಗಳು ಯಾವ ಯಾವ ಕಡೆ ಯಾರು ಯಾರಿದ್ದಾರೆ ತಮಗೂ ಗೊತ್ತಿರಬಹುದು. ಉತ್ತರದಲ್ಲಿ ಎಲ್ಲಾ ಕಡೆ ಜನತಾಪಕ್ಷ ಬಂದಮೇಲೆ ಮೈನಾರಿಟೀಸ್ ಮುಖ್ಯಮಂತ್ರಿಗಳೇ ಹೆಚ್ಚಾಗಿ ಆಗಿದ್ದಾರೆ.

That was not so before 1977.

SRI D.DEVARAJ URS:– That is my point. Because they have come up the others are not tolerating. You are begging the question.

ಶ್ರೀಎಸ್.ಆರ್. ಬೊಮ್ಮಾಯಿ.–ಇಂದಿರಾಗಾಂಧಿಯವರ ಕಾಲಕ್ಕೆ ಯಾರು ಯಾರು ಮುಖ್ಯ ಮಂತ್ರಿಗಳಾಗಿದ್ದರು ಎಂದು ತಮಗೂ ಗೊತ್ತಿದೆ.

ಶ್ರೀಡಿ. ದೇವರಾಜ ಅರಸ್,–ಸ್ವಾಮಿ, ಇದೊಂದೇ ಅಮಲು ಇವರಿಗೆ ಹಿಡಿದಿರುವುದು.

ಶ್ರೀಎಸ್.ಆರ್. ಬೊಮ್ಮಾಯಿ.—ಜನತಾ ಸರ್ಕಾರ ಬಂದ ಮೇಲೆ ಹಿಂದುಳಿದವರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕಿದೆ.

ಶ್ರೀಡಿ.ದೇವರಾಜ ಅರಸ್.—ನಾವೂ ಮಾಡಿದ್ದೇವೆ, ನಾವು ಮಾಡಿದ್ದನ್ನು ನಿಮ್ಮವರು ಸಹಿಸುತ್ತಿಲ್ಲ.

ಶ್ರೀಎಸ್.ಆರ್. ಬೊಮ್ಮಾಯಿ.—ನಿಮ್ಮ ಪಕ್ಷದ ನಾಯಕರುಗಳೇ ನಿಮ್ಮನ್ನು ಸಹಿಸುತ್ತಿಲ್ಲ.

ಶ್ರೀಡಿ. ದೇವರಾಜ ಅರಸ್.—ಎಲ್ಲಿಯವರಿಗೆ ಜನನಮ್ಮ ಜೊತೆಯಲ್ಲಿರುತ್ತಾರೋ ಅಲ್ಲಿಯವರೆಗೆ ನಾನು ಅಧಿಕಾರದಲ್ಲಿರುತ್ತೇನೆ, ಇಲ್ಲದೇ ಹೋದರೆ ಇರುವುದಿಲ್ಲ. ನೀವು ಬೇಡ ಅಂದರೂ ನಾನು ಹೋಗುವುದಕ್ಕೆ ತಯಾರು ಇಲ್ಲ. ನಮ್ಮವರು ಬೇಡ ಎಂದರೆ ಮಾತ್ರ ನಾನು ಹೋಗುವುದಕ್ಕೆ ತಯಾರಾಗಿಯೇ ಇದ್ದೇನೆ ಇವತ್ತು ದೇಶದಲ್ಲಿ ಏನು ನಡೆಯುತ್ತಿದೆ ಅದನ್ನುನಾನು ಹೇಳುತ್ತಿದ್ದೇನೆ. ಆದ್ದರಿಂದಲೆ ನಾನು ಮಾನ್ಯ ಆನಂದರಾಯರಿಗೆ ಹೇಳುವುದು ಈ ವಿದ್ಯೆಗಳೆಲ್ಲಾ ಬೇಡ ಅದನ್ನು ಬಿಟ್ಟುಬಿಡಿ ಎಂದು. ಲಂಚ ಮತ್ತೊಂದು ಇಲ್ಲ ಎಂದು ನಾನು ಹೇಳುವುದಿಲ್ಲ. ಇದಕ್ಕೆ ಸಮಾಜದ ಅನೇಕ ಮುಖಗಳ ಬೆಳವಣಿಗೆಯೇ ಕಾರಣವಾಗಿದೆ. ಯಾರು ಲಂಚವನ್ನು ಕೊಡುತ್ತಾರೋ ಅವರು ಕೊಟ್ಟಿದ್ದೇನೆಂದು ಬಂದು ಯಾರಿಗೂ ಹೇಳುವುದಿಲ್ಲ. I think that the hon.member remembers that there was a rule that both the persons, hewho received and he who gives are to be punished. ಆದರೆ ಲಂಚ ಕೊಟ್ಟವರು ಯಾರು ಹೇಳುವುದಿಲ್ಲವೆಂದು ಈಗ Now the persons who gives is not be punished and only he who takes is punished. Even then people are not coming forward to say. ಈ ರೂಲನ್ನು

ನಾವು ತೆಗೆದುಹಾಕಿಬಿಟ್ಟಿದ್ದೇವೆ. ಲಂಚ ತೆಗೆದುಕೊಳ್ಳುವುದು ಒಂದು ಆದರೆ ಕೊಡುವುದು ಇನ್ನೊಂದು ಆಗುತ್ತದೆ. ಕೊನೆಯಲ್ಲಿ ನಾನು ಒಂದು ಉದಾಹರಣೆಯನ್ನು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ನನ್ನ ಸ್ಥಳದಲ್ಲಿ ನನ್ನ ಕಾನ್ಸ್‌ಟಿಟ್ಯೂಯನ್ಸಿಯಲ್ಲಿ ನಡೆದಂಥ ಒಂದು ಘಟನೆಯನ್ನು ಹೇಳುತ್ತೇನೆ. ಗೌಡರ ಮನೆಯ ಮುಂದೆ ನಿಲ್ಲಿಸಿದ್ದ ಗಾಡಿಯನ್ನು ಯಾರೋ ಕದ್ದು ಕೊಂಡುಹೋದರು, ಕಳೆದುಕೊಂಡವನು ಪೋಲೀಸ್ ಸ್ಟೇಷನ್‌ಗೆ ಹೋಗಿ ಸ್ವಾಮಿ ನನ್ನ ಗಾಡಿಯನ್ನು ಯಾರೋ ಕದ್ದು ಕೊಂಡು ಹೋಗಿದ್ದಾರೆ ಹುಡುಕಿಸಿಕೊಡಿ ಎಂದುಕೇಳಿದ. ಗಾಡಿ ಸಿಕ್ಕಿತು, ಆದರೆ ನೇರವಾಗಿ ಕಳೆದು ಕೊಂಡವನಿಗೆ ಪೋಲೀಸರು ಕೊಡಲಿಲ್ಲ. ಕಳೆದುಕೊಂಡವನು ಲಾಯರ್ ಹತ್ತಿರ ಹೋಗಿ ಸ್ವಾಮಿ ಹೀಗೆ ಹೀಗೆ ಆಗಿದೆ, ನನ್ನ ಗಾಡಿಯನ್ನು ಬಿಡಿಸಿಕೊಡಿ ಎಂದುಕೇಳಿದ ಅದಕ್ಕೆ ಲಾಯರು ಹೇಳಿದರು, ೫೦ ರೂಪಾಯಿಗಳನ್ನು ಕೊಡು ಸಬ್‌ಇನ್ಸ್‌ಪೆಕ್ಟರ್‌ಗೆ ಕೊಟ್ಟು ಗಾಡಿಯನ್ನು ಬಿಡಿಸಿಕೊಡುತ್ತೆನೆಂದು. ಕಳೆದುಕೊಂಡವರು ನನ್ನ ಹತ್ತಿರ ಬಂದರು. ಸ್ವಾಮಿ ಹೀಗೆ ಆಗಿದೆ, ಲಾಯರ್ ೫೦ರೂಪಾಯಿಗಳನ್ನು ಕೇಳುತ್ತಿದ್ದಾರೆ, ನನ್ನ ಗಾಡಿಬೆಲೆ ಬಾಳುವುದೇ ನೂರು ರೂಪಾಯಿ ೫೦ರೂಪಾಯಿಗಳನ್ನು ನಾನು ಹೇಗೆ ಕೊಡಲಿಎಂದು ನನ್ನ ಮುಂದೆ ಹೇಳಿಕೊಂಡ. ನಾನು ಆದಿನ ಸ್ವಲ್ಪ ಕೆಲಸವಿದ್ದುರಿಂದ ನಾಳೆದಿನ ಬಾ, ನಾನು ಅದನ್ನು ವಿಚಾರ ಮಾಡುತ್ತೇನೆಂದು ಹೇಳಿದೆ. ಆದರೆ ಈಲಾಯರು ಇನ್ಸ್‌ಪೆಕ್ಟರ್ ಸೇರಿಕೊಂಡು ಗಾಡಿಯುವನಿಂದ ೫೦ರೂಪಾಯಿಗಳನ್ನು ವಸೂಲು ಮಾಡಿಕೊಂಡು ಗಾಡಿಯನ್ನು ವಾಪಸ್ ಮಾಡಿದ್ದರು. ಮಾರನೆಯ ದಿವಸ ಗಾಡಿಯುವನು ನನಗೆ ಸಿಕ್ಕಾಗ, ನಾನು ಕೇಳಿದೆ ಎನಯ್ಯ ಏಕೆ ಬರಲಿಲ್ಲ ಎಂದು, ಇಲ್ಲ ಸ್ವಾಮಿ ೫೦ ರೂಪಾಯಿಗಳನ್ನು ಕೊಟ್ಟು ಗಾಡಿಯನ್ನು ಬಿಡಿಸಿಕೊಂಡೆ ಎಂದು ಹೇಳಿದ. ಹೀಗೆ ನಡೆಯುತ್ತದೆ. ಲಾಯರುಗಳು ಬುದ್ಧಿವಂತಿಕೆಯನ್ನು ಉಪಯೋಗಿಸಿ ಹೀಗೆಲ್ಲಾ ಮಾಡುತ್ತಾರೆ. ಆದ್ದರಿಂದ ದೂರನ್ನು ಹೇಳುವಾಗಲೂ ಸಹ ನಾವು ಯಾರು ಏಕೆ ದೂರುಗಳನ್ನು ಹೇಳುತ್ತಾರೆಂದು ನೋಡ ಬೇಕಾಗಿದೆ. ಇಂಥಿಂಥವರೆಲ್ಲಾ ಹೀಗೆ ಮಾಡುವಾಗ ಇದಕ್ಕೆಲ್ಲಾ ಔಷಧಿಯನ್ನು ನಾವು ಎಲ್ಲಿಂದ ತರೋಣ. ಇದಕ್ಕೆ ಇರುವುದು ಒಂದೇ ಮಾರ್ಗ. ನಾವು ನಮ್ಮ ಸೋಷಿಯಲ್ ಸ್ಟ್ರಕ್ಚರನ್ನು ಚೇಂಜ್ ಮಾಡಬೇಕಾಗಿದೆ ಮಾನ್ಯ ಸದಸ್ಯರಾದ ಕಕ್ಕಿಲ್ಲಾಯ ಅವರ ಲೈನಲ್ಲಿ ನಾವು ಹೋಗಬೇಕಾಗುತ್ತದೆ.

ಶ್ರೀಬಿ.ವಿ. ಕಕ್ಕಿಲ್ಲಾಯ.—ಇನ್ನೊಂದು ವರ್ಷದಲ್ಲಿಯೇ ಬರಬೇಕಾಗುತ್ತದೆ.

ಶ್ರೀಡಿ. ದೇವರಾಜ ಅರಸ್ —ಬರಲಿ ಬಿಡಿ. ಕಮ್ಯುನಿಸಂ ಇಂಡಿಯಾದೇಶಕ್ಕೆ ಹೊಸದೇನು ಅಲ್ಲ. ನಾನು ನಿಮ್ಮನ್ನೆಲ್ಲಾ ಎಲ್ಲಿ ಲೀಡ್ ಮಾಡಬೇಕಾಗುತ್ತದೆಯೋ ?

ಶ್ರೀ ಮಳ್ಳೂರುಆನಂದ ರಾವ್.—ನಿಮ್ಮ ಲೀಡರ್ ಆಗಲೇಇದಕ್ಕೆ ಬಾಲಂಗೋಚಿ ಆಗಿ ಬಿಟ್ಟಿದ್ದಾರೆ ಅವರು ಇದನ್ನು ಫಾಲೋ ಮಾಡುತ್ತಿದ್ದಾರೆ.

ಶ್ರೀಡಿ. ದೇವರಾಜ ಅರಸ್.—ತಾವು ನಮ್ಮ ಲೀಡರ್ ಬಗ್ಗೆ ಯೋಚನೆ ಮಾಡುವುದು ಬೇಡ. If the political and social situations continue like this in this country yes, there is bound to be a change. An upheavel is bound to be there. I am not afraid. If necessary we shall be the people who give such lead. I am not afraid nor am I afraid of communism ರಘು ಚಕ್ರವರ್ತಿ, ಬಸವಣ್ಣ, ಲೆನಿನ್, ಮಾರ್ಕ್ಸ್ ಇವರೆಲ್ಲರೂ ಸಹ ದೇಶದಲ್ಲಿ ಕಮ್ಯುನಿಸಂ ತರುವುದಕ್ಕೆ ಹೊರಟ್ಟಿದ್ದವರು. ಇದು ಈಗಿನದೇನೂ ಅಲ್ಲ, ಸುಮಾರು ೮೦೦ ಶತಮಾನಗಳಿಂದಲೂ ಸಮಾಜವಾದವನ್ನು ದೇಶದಲ್ಲಿ ತರಬೇಕು ಎಂದು ಹೊರಟಿದ್ದರು. Raghu was the first Emperor in this world who got the wealth of all the kings, palegars and vested interests throughout Bharat. He brought it to the capital and kept in a big maidan. The story says that he put entire wealth there. He asked his soldiers to loot his own palace.He told the entire people, take as much as you want from this. When a brahmin asks for some help hesaw him eating his food in an earthenr plate. ಜನತೆಯ ಹಣ,ಜನರಿಗೆ ಎಲ್ಲಾ ಹಂಚಿದ್ದೆ ನೆಂದು ರಘುಮಹಾರಾಜ ಹೇಳುತ್ತಿದ್ದ. ಈ ನಮ್ಮ ಇತಿಹಾಸ ಬೇರೆ ಎಲ್ಲಿಂದಲೂ ಬಂದಿಲ್ಲ. ಬ್ರಿಟಿಷರ ಇತಿಹಾಸವನ್ನು ತೆಗೆದು ನೋಡಿದಾಗ ಎಲ್ಲವೂ ನಮಗೆ ಅರ್ಥವಾಗುತ್ತದೆ. ಇದನ್ನೇ ನಾವು

ಸೈಕಲ್ ಆಫ್ ಧರ್ವರ್ಮ ಎಂದು ಹೇಳುವುದು. ಈ ಪ್ರಕಾರ ದೇಶದಲ್ಲಿ ನಡೆದುಕೊಂಡು ಹೋಗುತ್ತಿದೆ, ಕಮ್ಯುನಿಸಂ ಬರುವುದಿದ್ದಲ್ಲಿ ಬರಲಿ ಇದರಿಂದ ಬಡವರಿಗೆ ಕಷ್ಟ ಏನೂ ಇಲ್ಲ. ಕಷ್ಟ ಬರುವುದು ವೆಸ್ಟೆಡ್ ಇಂಟರೆಸ್ಟ್ ಇರತಕ್ಕ ಜನಗಳಿಗೆ. ದೇಶದಲ್ಲಿ ಇಂಥಸುಧಾರಣೆ ಗಳಿಂದ ಬಡತನಕ್ಕೆ ಮಿತಿ ಬರಬಹುದು. ಇಷ್ಟುಹೇಳಿ, ಎಲ್ಲಾಮಾನ್ಯ ಸದಸ್ಯರುಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ, ನನ್ನ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀಎಸ್.ಆರ್. ಬೊಮ್ಮಾಯಿ; ನನ್ನ ಒಂದು ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ. ಏನೆಂದರೆ, ಗುಜರಾತ್, ತಮಿಳುನಾಡು ಮಹಾರಾಷ್ಟ್ರ, ಆಂಧ್ರ ಈ ಎಲ್ಲ ಸರ್ಕಾರಗಳು ತಮ್ಮ ಬಡ್ಜೆಟಿನಲ್ಲಿ ರೈತರಿಗೆ ಅನೇಕ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ. ನೆನ್ನೆದಿವಸ ತಮಿಳುನಾಡು ಮುಖ್ಯಮಂತ್ರಿಗಳು ರೈತರಿಗೆ ಸಂಬಂಧಪಟ್ಟಂತೆ ೪೭ ಕೋಟಿ ರೂಗಳಷ್ಟು ರಿಯಾಯಿತಿ ಕೊಟ್ಟಿದ್ದಾರೆ. ಇದೇರೀತಿ ಬೇರೆಬೇರೆ ಸರ್ಕಾರಗಳು ರೈತರಿಗೆ ರಿಯಾಯಿತಿ ಕೊಟ್ಟಿವೆ. ಕೆಲವು ಸರ್ಕಾರಗಳು ಕಬ್ಬಿನ ಮೇಲಿನ ಸರ್‌ಚಾರ್ಜನ್ನು ತೆಗೆದುಹಾಕಿವೆ. ಮತ್ತು ರೈತರು ಸರ್ಕಾರಕ್ಕೆ ಕೊಡಬೇಕಾಗಿದ್ದ ಎಲ್ಲ ಸಾಲಗಳ ಮರುಪಾವತಿಯನ್ನು ಮುಂದಕ್ಕೆ ಹಾಕಿವೆ. ಇದಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳನ್ನು ತಮ್ಮ ಕಡೆಗೆ ಕೊಟ್ಟಿದ್ದೇನೆ. ಆ ಸರ್ಕಾರಗಳು ಸಪೋರ್ಟ ಪ್ರೈಸ್ ಪ್ರಕಾರ ಜೋಳ ರಾಗಿ, ಸಜ್ಜೆ ಮುಂತಾದ ಧಾನ್ಯಗಳನ್ನು ಖರೀದಿ ಮಾಡಿವೆ. ಕೇಂದ್ರ ಸರ್ಕಾರದ ಸಹಾಯ ಪಡೆಯುವ ಇಷ್ಟೊಂದು ರೀತಿಯಲ್ಲಿ ಆ ಸರ್ಕಾರಗಳು ರೈತರಿಗೆ ಸಹಾಯ ಮಾಡಿವೆ. ರೈತರು ಬೆಳೆದ ಹತ್ತಿಯನ್ನೆಲ್ಲಾ ಖರೀದಿ ಮಾಡಲು ವ್ಯವಸ್ಥೆ ಮಾಡಿದ್ದಾರೆ. ಅಂದರೆ ಈ ವರ್ಷದ ಮಟ್ಟಿಗೆ ರೈತರಿಗೆ ಅವರು ಈ ಎಲ್ಲ ಸೌಲಭ್ಯಗಳನ್ನು ಕೊಟ್ಟಿದ್ದಾರೆ, ಅವರು ಕೊಟ್ಟಿರುವ ಸೌಲಭ್ಯಗಳ ವಿವರಗಳನ್ನು ಹೇಳಲು ನನಗೆ ಈಗ ಸಮಯವಿಲ್ಲ. ನಮ್ಮ ರಾಜ್ಯದಲ್ಲಿಯೂ ರೈತರು ನಾನಾ ರೀತಿಯಿಂದ ತೊಂದರೆಯಲ್ಲಿದ್ದಾರೆ. ಆದಕಾರಣ ಬೇರೆ ಸರ್ಕಾರಗಳು ಮಾಡಿರುವಂತೆ ಇಲ್ಲಿಯೂ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ವ್ಯವಸಾಯ ಮಂತ್ರಿಗಳು ಆಗಲೀ ಆರ್ಥಿಕ ಮಂತ್ರಿಗಳಾಗಲೀ ಉತ್ತರ ಕೊಟ್ಟಿಲ್ಲಿ, ಇದು ಪಾಲಿಸಿ ಮ್ಯಾಟರ್ ಆದ ಕಾರಣ ಇದಕ್ಕೆ ತಾವೇ ಉತ್ತರ ಕೊಡಬೇಕಾಗುತ್ತದೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ರೈತರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ಎಂಬ ಬಗ್ಗೆ ತಾವು ಉತ್ತರ ಕೊಡಬೇಕು.

Sri D. DEVARAJ URS--There are other Demands also, on the above specific points, if the hon. the Leader of the Opposition were to kindly allow me to think about them, I will take some time and speak on these points some time later.

Mr. SPEAKER:. —The question is;–

"That a sum not exceeding Rs. 28,00,55,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 31 "Minor Irrigation'.

"That a sum not exceeding Rs.16,74,64,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 4 "Animal Husbandry and Dairy Development'.

"That a sum not exceeding Rs. 1,45 06,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 6 "Mines and Geology'.

"That a sum not exceeding Rs. 30,20,65,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 23 "Police and Fire Services'.

"That a sum not exceeding Rs. 1,87,43,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 24 'Jails'

'That a sum not exceeding Rs. 1,65,10,67,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 32 'Irrigation, Navigation, Drainage and Flood Control Projects'.

"That a sum not exceeding Rs. 29,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 35 'Elections'.

"That a sum not exceeding Rs. 50,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 36 'Governor, Ministers and Public Service Commission'.

"That a sum not exceeding Rs. 4,17,54,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 37 'Secretariat'.

"That a sum not exceeding Rs. 5,74,70,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 38 "District Administration'.

"That a sum not exceeding Rs. 6,30,92,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 39 'Miscellaneous Demands of Chief Minister'.

"That a sum not exceeding Rs. 10,35.31,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 40 "Area Development' .

"That a sum not ecxeeding Rs. 19,11,44,000 inclusive of the sum granted 'on account' be granted to the Government to defray the charges which will come in conrse of payment during the financial year ending 31st day of March 1980 in respect of Demand No 41 "Employment Affirmation Scheme'.

"That a sum not exceeding Rs. 1,97.29,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 46 'Ports and water Transport Servies'.

"That a sum not exceeding Rs. 79,20,95,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 47 ,'Power Projects".

"That a sum not exceeding Rs 3,67,45.000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 62 'Fisheries'.

The motion was adopted and the Sums were granted.

SPEAKER:—The House now stands adjourned to meet again tomorrow at 9.00 A.M.

The House adjourned at Fifteen Minutes past Six of the Clock to meet again at Nine of the Clock on Saturday the 26th May 1979.